ಜನಮನದ ದನಿ

# ಪ್ರಜೋದಯ


ಸಂಪಾದಕ : ಜೆ.ಆರ್. ಕೆಂಚೇಗೌಡ




ಸಿಡ್ನಿಯಲ್ಲಿ ಆಸ್ಟ್ರೇಲಿಯ ವಿರುದ್ಧ ಭಾನುವಾರ ಆರಂಭವಾದ ಆ್ಯಷಸ್ ಸರಣಿಯ ಕೊನೆಯ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಅಜೇಯ ಅರ್ಧ ಶತಕ (78 ರನ್) ಗಳಿಸಿದ ಇಂಗ್ಲೆಂಡ್ ತಂಡದ ಹ್ಯಾರಿ ಬ್ರೂಕ್...


05 ಜನವರಿ 2026 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 293 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629





ನಿಂತ ನೀರಿನಲ್ಲಿ ಮಾತ್ರ ಕ್ರಿಮಿಗಳು ಸೃಷ್ಟಿಯಾಗುತ್ತೆ » 2



ಸಕಲೇಶಪುರದಲ್ಲಿ ಸದ್ದಿಲ್ಲದೆ ಶುರುವಾಗಿದೆ ಎಸ್‌ಐಆರ್ » 3



ವೈಟ್ ಕಾಲರ್ ಭಯೋತ್ಪಾದನೆ ಆತಂಕಕಾರಿ » 4



# ಮನರೇಗಾ ಭ್ರಷ್ಟಾಚಾರದ ಕೂಪ: ಶಿವರಾಜ್ ಸಿಂಗ್

## ಕಾಯ್ದೆ ಬದಲಾವಣೆ ಸಮರ್ಥನೆ | ಜ.10 ರಿಂದ ಕಾಂಗ್ರೆಸ್‌ನಿಂದ ಮಹಾ ಸಂಗ್ರಾಮ

• ಪ್ರಜೋದಯ ವರದಿ

**ನವದೆಹಲಿ:** ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ (ಮನರೇಗಾ) ಕಾಯ್ದೆಗೆ ತಿದ್ದುಪಡಿ ತಂದಿರುವ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ದೇಶಾದ್ಯಂತ ಮಹಾ ಸಂಗ್ರಾಮಕ್ಕೆ ಕರೆ ಕೊಟ್ಟಿರುವ ಬೆನ್ನಲ್ಲೇ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಮನರೇಗಾ ಭ್ರಷ್ಟಾಚಾರದ ಕೂಪವಾಗಿತ್ತು ಎಂದು ಪ್ರತಿಪಾದಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ಕಾಂಗ್ರೆಸ್ ಆರಂಭಿಸಲು ನಿಶ್ಚಯಿಸಿರುವ ನರೇಗಾ ಉಳಿಸಿ ಸಂಗ್ರಾಮದ ಕುರಿತು ಆಕ್ಷೇಪ ವ್ಯಕ್ತಪಡಿಸಿದರು. ಕಾಂಗ್ರೆಸ್ ಪಕ್ಷವು ನರೇಗಾ ಉಳಿಸಿ ಸಂಗ್ರಾಮ ಎಂಬ ಅಭಿಯಾನವನ್ನು ಘೋಷಿಸಿದೆ. ಇದು ನಿಜವಾದ ಅರ್ಥದಲ್ಲಿ ಭ್ರಷ್ಟಾಚಾರ ಉಳಿಸಿ ಎಂದು ಹೇಳುವಂತಹ ಅಭಿಯಾನವಾಗಿದೆ. ಲೋಕಸಭೆಯಲ್ಲಿ ಈ ಯೋಜನೆ ಕುರಿತು ಚರ್ಚೆ ನಡೆದಾಗ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಏಕೆ ಗೈರಾಗಿದ್ದರೆಂದು ಪ್ರಶ್ನಿಸಿದರು.





ನರೇಗಾ ಅಡಿ ನಡೆಸಲಾಗುವ ಕೆಲಸಗಳ ಕುರಿತು ಗ್ರಾಮ ಪಂಚಾಯಿತಿಗಳ ಲೆಕ್ಕಪರಿಶೋಧನೆ ವೇಳೆ 10 ಸಾವಿರದಿಂದ 51 ಸಾವಿರ ದೂರುಗಳು ಬಂದಿವೆ. ಒಂದೇ ಕೆಲಸವನ್ನು ಪದೇ ಪದೇ ಮಾಡಿಸಲಾಗುತ್ತದೆ. ಕಾಲುವೆ ಮತ್ತು ರಸ್ತೆಗಳ ಸ್ವಚ್ಛತೆ ಮಾಡುವ ಹೆಸರಿನಲ್ಲಿ ಹಣವನ್ನು ಲೂಟಿ ಮಾಡಲಾಗುತ್ತಿತ್ತು. ಕಾರ್ಮಿಕರಲ್ಲಿ ಶೇ. 30ರಷ್ಟು ಮಂದಿ 60 ವರ್ಷಕ್ಕಿಂತ ಹೆಚ್ಚು ವಯಸ್ಸಿನವರಿದ್ದರೆಂದು ದೂರಿದರು.

> "ಜಿ ರಾಮ್ ಜಿ ಯೋಜನೆಯ ಬಗ್ಗೆ ಕಾಂಗ್ರೆಸ್ ಸುಳ್ಳು ಸುದ್ದಿ ಹರಡಬಾರದು. ಬದಲಿಗೆ ನರೇಗಾವನ್ನು ಉತ್ತಮಗೊಳಿಸಿದ್ದಕ್ಕಾಗಿ ಪ್ರಧಾನಿ ಮೋದಿ ಅವರಿಗೆ ಕೃತಜ್ಞತೆ ಹೇಳಬೇಕು.
>
> -ಶಿವರಾಜ್ ಸಿಂಗ್ ಚೌಹಾಣ್, ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ

ನರೇಗಾ ಯೋಜನೆಗೆ ಯುಪಿಎ ಸರ್ಕಾರವು 2 ಲಕ್ಷ ಕೋಟಿ ರೂ. ನೀಡಿತ್ತು. ಆದರೆ, ಮೋದಿ ಸರ್ಕಾರವು 8.48 ಲ.ಕೋ. ರೂ. ನೀಡಿದೆ. ನರೇಗಾ ಮೂಲಕ ಯಾವುದಾದರೂ ಶಾಶ್ವತ ಆಸ್ತಿಯನ್ನು ಸೃಷ್ಟಿಸಲಾಗಿದೆಯೇ. ಅಭಿವೃದ್ಧಿಗಾಗಿ ಹಣ ವಿನಿಯೋಗಿಸಲಾಗಿದೆಯೇ. ಕಾಂಗ್ರೆಸ್ ಎನ್ನುವುದು ಸುಳ್ಳಿನ ಕಾರ್ಖಾನೆ. ಈಗ ಅವರು ಕಾರ್ಮಿಕರಿಗೆ ಕೆಲಸ ಸಿಗುವುದಿಲ್ಲ ಎನ್ನುತ್ತಿದ್ದಾರೆಂದು ವಾಗ್ದಾಳಿ ನಡೆಸಿದರು.

ಮುಂದಿನ ಆರ್ಥಿಕ ವರ್ಷದಲ್ಲಿ ಜಿ ರಾಮ್ ಜಿ ಯೋಜನೆಗಾಗಿ 1.51 ಲಕ್ಷ ಕೋಟಿ ರೂ. ಬಿಡುಗಡೆ ಮಾಡಲಾಗುವುದು. ಅದರಲ್ಲಿ 95,600 ಕೋಟಿ ರೂ.ಗಳನ್ನು ಕೇಂದ್ರವೇ ನೀಡಲಿದೆ. 125 ದಿನಗಳಿಗೆ ನೀಡುವಷ್ಟು ಹಣ ಕೇಂದ್ರದ ಬಳಿ ಇದೆ. ಈ ಯೋಜನೆಯಿಂದ ಗ್ರಾಮಗಳ ಅಭಿವೃದ್ಧಿ ಖಚಿತ ಎಂದರು.

» ನಾಲ್ಕನೇ ಪುಟದಲ್ಲಿ

### ಮಹಾ ಸಂಗ್ರಾಮಕ್ಕೆ ಸಮಿತಿ ರಚನೆ

ನರೇಗಾ ಉಳಿಸಿ ಸಂಗ್ರಾಮ ಅಭಿಯಾನ ಜನವರಿ 10ಕ್ಕೆ ಆರಂಭವಾಗಿ 45 ದಿನಗಳ ವರೆಗೆ ನಡೆಯಲಿದೆ. ಕಾಂಗ್ರೆಸ್ ಪಕ್ಷವು ಸಮಿತಿಯೊಂದನ್ನು ರಚಿಸಿದ್ದು, ಅದಕ್ಕೆ ಎಐಸಿಸಿ ಖಜಾಂಚಿ ಅಜಯ್ ಮಾಕನ್ ಅವರನ್ನು ಸಂಚಾಲಕರನ್ನಾಗಿ ನೇಮಿಸಲಾಗಿದೆ. ಈ ಸಮಿತಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಮುಖಂಡ ಸಂದೀಪ್ ದೀಕ್ಷಿತ್, ಎಐಸಿಸಿ ಅಸಂಘಟಿತ ಕಾರ್ಮಿಕರ ವಿಭಾಗದ ಅಧ್ಯಕ್ಷ ಉದಿತ್ ರಾಜ್ ಹಾಗು ಕರ್ನಾಟಕದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು

# ಸರ್ಕಾರಿ ಶಾಲೆ ಉಳಿವಿಗಾಗಿ ಬೀದಿಗಿಳಿದ ವಿದ್ಯಾರ್ಥಿಗಳು

• ಪ್ರಜೋದಯ ವರದಿ

**ಹಾಸನ:** ಮ್ಯಾಗ್ನೆಟ್ ಶಾಲೆ ಹೆಸರಿನಲ್ಲಿ ತಾಲ್ಲೂಕಿನ ಕೆಲವತ್ತಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಮುಚ್ಚುತ್ತಿರುವ ಸರ್ಕಾರ ತನ್ನ ಅವೈಜ್ಞಾನಿಕ ನಿರ್ಧಾರದಿಂದ ಹಿಂದೆ ಸರಿಯಬೇಕೆಂದು ಆಗ್ರಹಿಸಿ ಭಾನುವಾರ ಶಾಲಾ ವಿದ್ಯಾರ್ಥಿಗಳು ಎಐಡಿಎಸ್‌ಒ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ಸರ್ಕಾರಿ ಶಾಲೆ ಉಳಿಸಬೇಕೆಂದು ಮಕ್ಕಳು ಗ್ರಾಮದಲ್ಲಿ ಮೆರವಣಿಗೆ ನಡೆದಿದರು.

ಎಐಡಿಎಸ್‌ಒ ರಾಜ್ಯ ಖಜಾಂಚಿ ಸುಭಾಷ್ ಅವರು ಮಾತನಾಡಿ, ಮ್ಯಾಗ್ನೆಟ್ ಹೆಸರಿನಲ್ಲಿ ಗ್ರಾಮ ಪಂಚಾಯಿತಿಗೊಂದು ಸರ್ಕಾರಿ ಶಾಲೆ ಮಾಡುತ್ತೇವೆಂದು ರಾಜ್ಯದ 40 ಸಾವಿರಕ್ಕಿಂತ ಹೆಚ್ಚು ಸರ್ಕಾರಿ ಶಾಲೆಗಳನ್ನು ವಿಲೀನದ ಹೆಸರಿನಲ್ಲಿ ಮುಚ್ಚಲು ಮುಂದಾಗಿದೆ. ಕೆಲವತ್ತಿ ಶಾಲೆಯಲ್ಲಿ 25 ಮಕ್ಕಳು ಓದುತ್ತಿದ್ದಾರೆ. ಈ ಶಾಲೆ ಉಳಿದರೆ ಮಾತ್ರ ಅವರಿಗೆ ಶಿಕ್ಷಣ. ಆದರೆ, ಸರ್ಕಾರ ಶಾಲೆ ಮುಚ್ಚಿ ನಿಟ್ಟೂರಿನ ಶಾಲೆಗೆ ಕಳುಹಿಸುತ್ತಿರುವುದು ಖಂಡನೀಯವೆಂದರು.





ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ರಕ್ತದಲ್ಲಿ ಕನ್ನಡವಿದೆ. ಒಂದೇ ಒಂದು ಸರ್ಕಾರಿ ಶಾಲೆ ಮುಚ್ಚುವುದಿಲ್ಲವೆಂದು ಸದನದಲ್ಲಿ ಹೇಳಿದರು. ಆದರೆ, ಶಾಲೆಗಳಿಗೆ ಬೀಗ ಹಾಕುವ ಪ್ರಕ್ರಿಯೆಗೆ ತಡೆ ಬಿದ್ದಿಲ್ಲ. ಕಳೆದ ಎಂಟು ವರ್ಷಗಳಲ್ಲಿ ಮೂರುವರೆ ಸಾವಿರಕ್ಕೂ ಹೆಚ್ಚು ಖಾಸಗಿ ಶಾಲೆಗಳಿಗೆ ಅನುಮತಿ ನೀಡಿದ್ದಾರೆ. ಸರ್ಕಾರಿ ಶಾಲೆಗಳ ಅಭಿವೃದ್ಧಿ ನಡೆಸದೆ ಖಾಸಗಿ ಶಾಲೆಗಳ ಪರ ಕೆಲಸ ಮಾಡಿದ್ದಾರೆ. 60,000ಕ್ಕೂ ಹೆಚ್ಚು ಶಿಕ್ಷಕರ ಹುದ್ದೆ ಖಾಲಿ ಇವೆ. 21,000ಕ್ಕೂ ಹೆಚ್ಚಿಗೆ ಕೊಠಡಿಗಳು ದುರಸ್ತಿಯಾಗಿಲ್ಲ. ಸರ್ಕಾರಿ ಶಾಲೆಗಳಿಗೆ ಸೌಕರ್ಯ ಕಲ್ಪಿಸದೆ ಖಾಸಗಿ ಸಂಸ್ಥೆಗಳಿಗೆ ಆದ್ಯತೆ ನೀಡುತ್ತಿರುವುದು ಏಕೆಂದು ಪ್ರಶ್ನಿಸಿದರು.

ಗ್ರಾಮಸ್ಥರಾದ ಸಿದ್ದೇಶ್, ಸಣ್ಣೇಗೌಡ ಅವರು ಮಾತನಾಡಿ, ಕೆಲವತ್ತಿ ಶಾಲೆಯನ್ನು ಮುಚ್ಚಲು ಬಿಡುವುದಿಲ್ಲ. ಗ್ರಾಮಸ್ಥರೆಲ್ಲರೂ ಒಟ್ಟಾಗಿ ಶಾಲೆಗಾಗಿ ಹೋರಾಡುತ್ತೇವೆ. ಸರ್ಕಾರಿ ಶಾಲೆ ಇದ್ದರೆ ಮಾತ್ರ ಬಡವರಿಗೆ ಶಿಕ್ಷಣವೆಂದರು.

ಎಐಡಿಎಸ್‌ಒ ಜಿಲ್ಲಾಧ್ಯಕ್ಷೆ ಚೈತ್ರ, ಉಪಾಧ್ಯಕ್ಷ ಅಭಿಷೇಕ್, ಕಾರ್ಯದರ್ಶಿ ಸುಷ್ಮಾ, ಜಂಟಿ ಕಾರ್ಯದರ್ಶಿ ಪುರುಷೋತ್ತಮ್, ಕಾರ್ಯಕರ್ತರಾದ ರಾಕೇಶ್, ಪ್ರಶಾಂತ್, ಪರಶುರಾಮ್, ಪ್ರೀತಮ್, ಧನಂಜಯ್, ಧನರಾಜ್, ಅಭಿಷೇಕ್ ಕೆಲವತ್ತಿ ಗ್ರಾಮಸ್ಥರಾದ ಸೋಮಶೇಖರ್, ಆನಂದ, ಚೇತನ್, ನಂಜುಂಡಪ್ಪ, ಮಮತಾ ಇತರರಿದ್ದರು.

# ಅಂಗವಿಕಲರಿಗೆ ಸರ್ಕಾರದ ಸೌಲಭ್ಯ ತಲುಪಲಿ

• ಪ್ರಜೋದಯ ವರದಿ

**ಬೇಲೂರು:** ಅಂಗವಿಕಲ ಫಲಾನುಭವಿಗಳಿಗೆ ಸರ್ಕಾರದ ಸವಲತ್ತು ತಲುಪುವಲ್ಲಿ ವಿಳಂಬವಾಗುತ್ತಿದ್ದು, ಅಧಿಕಾರಿಗಳು ಗಮನ ಹರಿಸಬೇಕೆಂದು ವೇಲಾಪುರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಹೆಚ್.ಎಂ. ದಯಾನಂದ್ ಅವರು ಹೇಳಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ವೇಲಾಪುರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ, ದಿವ್ಯಾಂಗ ಚೇತನರ ಗೆಳೆಯರ ಬಳಗ ಹಾಗು ಎಂಆರ್‌ಡಬ್ಲ್ಯು, ಯುಆರ್‌ಡಬ್ಲ್ಯು, ವಿಆರ್‌ಡಬ್ಲ್ಯು ವತಿಯಿಂದ ಪಟ್ಟಣದ ಸರ್ಕಾರಿ ಬಾಲಕರ ಸರ್ಕಾರಿ ಮಾಧ್ಯಮಿಕ ಶಾಲಾ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜನ್ಮ ದಿನಾಚರಣೆ ಹಾಗು ವಿಶ್ವ ಅಂಗವಿಕಲರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸರ್ಕಾರದಿಂದ ಅಂಗವಿಕಲರಿಗೆ ಮೀಸಲಾದ ಅನುದಾನ, ಸೌಲಭ್ಯ ಜಿಲ್ಲಾ, ತಾಲ್ಲೂಕು ಪಂಚಾಯಿತಿ, ಪುರಸಭೆಯಲ್ಲಿ ಅಂಗವಿಕಲರಿಗೆ ನಿಗದಿಪಡಿಸಿರುವ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಬಾರದು. ಪ್ರತಿ ತಿಂಗಳು ತಪ್ಪದೇ ಅಂಗವಿಕಲರಿಗೆ ಮಾಸಾಶನ ಸಿಗುವಂತಾಗಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಜೊತೆಗೆ ಪುರಸಭೆಯಿಂದ ಅಂಗವಿಕಲರ ಸಂಘಕ್ಕೆ ನಿವೇಶನ ಕೊಟ್ಟರೆ ಇಂತಹ ಕಾರ್ಯಕ್ರಮಗಳು ಮತ್ತು ತಮ್ಮ ಸಮಸ್ಯೆಗಳ ನಿವಾರಣೆಗೆ ಅನುಕೂಲವಾಗುತ್ತದೆಂದರು.



ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಗೌರವ ಕಾರ್ಯದರ್ಶಿ ಬಿ.ಬಿ.ಶಿವರಾಜ್ ಅವರು ಮಾತನಾಡಿ, ಅಂಗವಿಕಲರಿಗೆ ಅನುಕಂಪಕ್ಕಿಂತ ಅವಕಾಶ ನೀಡಿ ಧೈರ್ಯ ತುಂಬಬೇಕು. ಅಂಗವಿಕಲರು ಯಾರಿಗೂ ಕಮ್ಮಿ ಇಲ್ಲದಂತೆ ಸಾಧನೆ ಮಾಡುತ್ತಿರುವುದು ಮೆಚ್ಚುಗೆಯ ವಿಷಯವೆಂದರು.

ಜಿಲ್ಲಾ ಅಂಗವಿಕಲರ ಅಧಿಕಾರಿ ಕೆ.ಆರ್.ಅನುಪಮಾ ಅವರು ಮಾತನಾಡಿ, ಅಂಗವಿಕಲರು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗ

» ನಾಲ್ಕನೇ ಪುಟದಲ್ಲಿ

# ಕವಿತೆಗಳ ವಿಮರ್ಶೆಯಾಗದೆ ಬರಹಗಾರರ ಕೌಶಲ ಗೌಣ

## ಮನೆ-ಮನೆ ಕವಿಗೋಷ್ಠಿಯಲ್ಲಿ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಶ್ಲಾಘನೀಯ

• ಪ್ರಜೋದಯ ವರದಿ

**ಹಾಸನ:** ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಕವಿತೆ, ಕಾದಂಬರಿಗಳ ವಿಮರ್ಶೆಯಾಗದೆ ಬರಹಗಾರರ ಬೆಳವಣಿಗೆಗೆ ಪ್ರೋತ್ಸಾಹ ಇಲ್ಲದಂತಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮನೆ-ಮನೆ ಕವಿಗೋಷ್ಠಿ ಎರಡು ದಶಕಗಳಿಂದ ಸಾಹಿತ್ಯ ಕೃಷಿ ಮಾಡಿಕೊಂಡು ಬಂದಿರುವುದು ಶ್ಲಾಘನೀಯವೆಂದು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರು ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿ ವತಿಯಿಂದ ಪತ್ರಕರ್ತರ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮನೆ-ಮನೆ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲರನ್ನೂ ಕವಿ, ಪತ್ರಕರ್ತ, ಸಾಹಿತಿ ಎನ್ನಲು ಸಾಧ್ಯವಿಲ್ಲ. ನಿರಂತರ ಬರವಣಿಗೆಯಿಂದ ಕಾವ್ಯ ಸೃಷ್ಟಿಯಾಗುತ್ತದೆ. ಪತ್ರಕರ್ತರಲ್ಲಿ ಕವಿ ಹೃದಯ ಇರುತ್ತದೆ. ಅನಕೃ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ರಾಜಾರಾಮನ್, ಎಸ್.ಎಲ್.ಭೈರಪ್ಪ ಸೇರಿ ಅನೇಕರು ಕವಿ ಭಾವನೆಯಿಂದಲೇ ಸಾಹಿತ್ಯ ಕ್ಷೇತ್ರದಲ್ಲಿ ಅಪರಿಮಿತ ಸಾಧನೆ ಮಾಡಿದ್ದಾರೆಂದರು.





ಕವಿಗಳು ತಮ್ಮ ಬರವಣಿಗೆ ಮೂಲಕ ಇವತ್ತಿನ ತಾಕಲಾಟಗಳಿಗೆ ಮುಖಾಮುಖಿಯಾಗಬೇಕು. ಎಷ್ಟು ದೊಡ್ಡದಾಗಿ ಬರೆಯುತ್ತೇವೆಂಬುದರ ಬದಲು ಎಷ್ಟು ಪರಿಣಾಮಕಾರಿಯಾಗಿ ಬರೆಯುತ್ತೇವೆ ಎನ್ನುವುದು ಮುಖ್ಯವಾಗುತ್ತದೆ. ಇತ್ತೀಚೆಗೆ ವಾಟ್ಸಾಪ್ ವಿಶ್ವವಿದ್ಯಾಲಯ ಪ್ರವೃತ್ತಿ ಹೆಚ್ಚಿದೆ. ಯಾವುದೇ ಒಂದು ಕವನವನ್ನು ವಿಮರ್ಶಿಸಿ ಮಾರ್ಗದರ್ಶನ ಮಾಡುವ ಕಾರ್ಯಾಗಾರಗಳು ಆಗಬೇಕು. ಫೇಸ್‌ಬುಕ್‌ನಲ್ಲಿ ಲೈಕ್ ಗಳಿಸುವುದಕ್ಕಷ್ಟೇ ಕವಿತೆಗಳು ಸೀಮಿತವಾಗಬಾರದು. ಪ್ರತಿಭಾನ್ವಿತರಿಗೆ ವೇದಿಕೆ ಮಾಡಿಕೊಡುವ ಕೆಲಸ ಕವಿಗೋಷ್ಠಿಯಿಂದ ಆಗಬೇಕೆಂದು ಸಲಹೆ ನೀಡಿದರು.

ನಾವು ಸಾಮಾಜಿಕ ಬದ್ಧತೆ ಹಿನ್ನಲೆಯಲ್ಲಿ ಬರೆಯಬೇಕು. ದೇಶ ಕಟ್ಟುವಲ್ಲಿ ಕವಿಗಳು, ಪತ್ರಕರ್ತರು ಸಾಕಷ್ಟು ಕೊಡುಗೆ ನೀಡಿದ್ದಾರೆ. ಆ ಕಾಲ ಘಟ್ಟದಿಂದ ನಡೆದುಕೊಂಡು ಬಂದಿರುವ ಪರಂಪರೆಯನ್ನು ಉಳಿಸಿ ಕೊಳ್ಳುವ ಸವಾಲು ನಮ್ಮೆಲ್ಲರ ಮುಂದಿದೆ ಎಂದರು.

ಹಾಸನದಲ್ಲಿ ಮನೆ ಮನೆ ಕವಿಗೋಷ್ಠಿ ಆರಂಭವಾಗುವುದಕ್ಕೆ ಸುದೀರ್ಘ ಇತಿಹಾಸವಿದೆ. ಆಕಾಶವಾಣಿಯಲ್ಲಿ ನಿರ್ದೇಶಕರಾಗಿದ್ದ ವಸಂತಕುಮಾರ್, ಸಂಯುಕ್ತ ಕರ್ನಾಟಕ ವರದಿಗಾರ ದಿ. ಜೈಕುಮಾರ್ ಅವರ ಚಿಂತನೆಯಿಂದ ಶುರುವಾದ ಕವಿಗೋಷ್ಠಿ 20 ವರ್ಷ ಪೂರೈಸಿರುವುದು ಹೆಮ್ಮೆಯ ವಿಚಾರ. ಚಿಕ್ಕದಾಗಿ ಶುರುವಾದ ಕವಿಗೋಷ್ಠಿ ಇಂದು ದೊಡ್ಡ ಮಟ್ಟದಲ್ಲಿ ಬೆಳೆದಿದೆ. ಹಲವಾರು ಜನರಿಗೆ ವೇದಿಕೆ ಕಲ್ಪಿಸಿಕೊಟ್ಟ ಮನೆ ಮನೆ ಕವಿಗೋಷ್ಠಿ ಬೆಳೆದು ಬಂದ ದಾರಿಯನ್ನು ಪುಸ್ತಕ ರೂಪದಲ್ಲಿ ದಾಖಲಿಸಬೇಕೆಂದು ಆಯೋಜಕರಿಗೆ ಸಲಹೆ ನೀಡಿದರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ ಅವರು ಮಾತನಾಡಿ,

» ನಾಲ್ಕನೇ ಪುಟದಲ್ಲಿ

# ಧಾರ್ಮಿಕ ಕೇಂದ್ರಗಳು ಸಹಬಾಳ್ವೆಯ ತಾಣ: ಕೋಡಿ ಶ್ರೀ

• ಪ್ರಜೋದಯ ವರದಿ

**ಅರಸೀಕೆರೆ:** ಮಸೀದಿ, ಮಂದಿರ, ಚರ್ಚ್‌ಗಳು ಕೇವಲ ಧಾರ್ಮಿಕ ಕಟ್ಟಡಗಳಲ್ಲ. ಮಾನವೀಯತೆ, ಸಹಬಾಳ್ವೆ ಹಾಗು ಶಾಂತಿಯನ್ನು ಬೆಳೆಸುವ ಪವಿತ್ರ ಕೇಂದ್ರಗಳೆಂದು ಕೋಡಿ ಮಠದ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಅವರು ಹೇಳಿದರು.

ತಾಲ್ಲೂಕಿನ ಹಾರನಹಳ್ಳಿ ಗ್ರಾಮದಲ್ಲಿ ಭಾನುವಾರ ನಡೆದ ಮಜ್ಜಿದ್ ಅಕ್ಸಾ ಮಸೀದಿ ಉದ್ಘಾಟಿಸಿ ಮಾತನಾಡಿದ ಅವರು, ಧರ್ಮಗಳು ವಿಭಿನ್ನವಾಗಿದ್ದರೂ ನಮ್ಮ ಗುರಿ ಒಂದೇ, ಮಾನವ ಕಲ್ಯಾಣವೇ ಆಗಿದೆ. ಹಾರನಹಳ್ಳಿಯಲ್ಲಿ ಮಜ್ಜಿದ್ ಅಕ್ಸಾ ಉದ್ಘಾಟನೆ ಭಾವೈಕ್ಯತೆಗೆ ಸಂದೇಶ ನೀಡಿದೆ. ಪರಸ್ಪರ ಗೌರವದಿಂದ ಬದುಕಿದರೆ ಸಮಾಜ ಇನ್ನಷ್ಟು ಬಲಿಷ್ಟವಾಗುತ್ತದೆಂದರು.





ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಅವರು ಮಾತನಾಡಿ, ಭಾರತದ ಶಕ್ತಿಯಲ್ಲಿ ವೈವಿಧ್ಯತೆ ಇದೆ. ಧರ್ಮ, ಜಾತಿ, ಭಾಷೆಗಳು ವಿಭಿನ್ನವಾಗಿದ್ದರೂ ಸಂವಿಧಾನ ಎಲ್ಲರನ್ನೂ ಸಮಾನವಾಗಿ ಕಾಣುತ್ತದೆ. ಮಸೀದಿ ಉದ್ಘಾಟನೆಗೆ ವಿವಿಧ ಧರ್ಮದ ನಾಯಕರು ಒಂದೇ ವೇದಿಕೆಯಲ್ಲಿ ಭಾಗವಹಿಸಿರುವುದು ನಿಜವಾದ ರಾಷ್ಟ್ರೀಯ ಏಕತೆಗೆ ಸಾಕ್ಷಿಯಾಗಿದೆ. ಭಾವೈಕ್ಯತೆಯೇ ದೇಶದ ಭದ್ರತೆ ಮತ್ತು ಪ್ರಗತಿಯ ಮೂಲವೆಂದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ಗ್ರಾಮೀಣ ಭಾರತದಲ್ಲಿ ಸಹೋದರತ್ವ ಮತ್ತು ಸೌಹಾರ್ದತೆ ಇನ್ನೂ ಜೀವಂತವಾಗಿದೆ. ಹಾರನಹಳ್ಳಿಯಲ್ಲಿ ಎಲ್ಲಾ ಧರ್ಮದ ಜನರು ಮಸೀದಿ ದರ್ಶನಕ್ಕೆ

» ನಾಲ್ಕನೇ ಪುಟದಲ್ಲಿ

## ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ದೇವಸ್ಥಾನದ ಬಾಗಿಲು ಮುರಿದು ದೇವರಿಗೆ ಹಾಕಿದ್ದ 1.44 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ನಡೆದಿದೆ.

ತಾಲ್ಲೂಕಿನ ಚಿಕ್ಕಗಂಡಸಿಯ ಶ್ರೀ ಕೊಲ್ಲಾಪುರದಮ್ಮ ದೇವಸ್ಥಾನದಲ್ಲಿ ಜ.2ರ ರಾತ್ರಿ ಕಳ್ಳತನ ನಡೆದಿದೆ. ಮಾರನೇ ದಿನ ಅರ್ಚಕರು ಬಂದು ನೋಡಿದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ದೇವಿಯ ಮೂರ್ತಿಗೆ ಹಾಕಿದ್ದ 15 ಗ್ರಾಂ ತೂಕದ ಚಿನ್ನದ ಸರ, 6 ಗ್ರಾಂ ತೂಕದ ಚಿನ್ನದ 3 ತಾಳಿ, 2 ಗ್ರಾಂ ತೂಕದ ಚಿನ್ನದ ಗುಂಡು, 5 ಗ್ರಾಂ ತೂಕದ ಒಂದು ಚಿನ್ನದ ಮೂಗು ನತ್ತು, 2 ಗ್ರಾಂ ತೂಕದ ಒಂದು ಚಿನ್ನದ ಮೂಗು ನತ್ತುಗಳನ್ನು ಒಟ್ಟು ಸುಮಾರು 30 ಗ್ರಾಂ ತೂಕದ ಚಿನ್ನಾಭರಣ ಹಾಗು ಹುಂಡಿಯಲ್ಲಿದ್ದ ಹಣ ಕಳುವಾಗಿದೆ.

# ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಸಲಹೆ

• ಪ್ರಜೋದಯ ವರದಿ

**ಹಾಸನ:** ಜಗತ್ತು ವೇಗವಾಗಿ ಬೆಳೆಯುತ್ತಿದ್ದು, ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಸ್ಪರ್ಧಾತ್ಮಕ ಜಗತ್ತಿಗೆ ತಯಾರು ಮಾಡಬೇಕಿದೆ ಎಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ಅವರು ಹೇಳಿದರು.

ನಗರದ ಹಾಸನಾಂಬ ಕಲಾ ಕ್ಷೇತ್ರದಲ್ಲಿ ಮಲೆನಾಡು ಹಿಪ್ಪೋ ಕ್ಯಾಂಪಸ್ ಶಾಲೆಯಿಂದ ಏರ್ಪಡಿಸಿದ್ದ ನವರಸ 2025-26ನೇ ಸಾಲಿನ ವಾರ್ಷಿಕೋತ್ಸವ ಉದ್ಘಾಟಿಸಿ ಮಾತ ನಾಡಿದ ಅವರು, ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುವುದು ಅಗತ್ಯವಾಗಿದೆ. 7 ವರ್ಷದಿಂದ ಹಾಸನ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ವ್ಯಾಪ್ತಿಯಲ್ಲಿ ಮಲೆನಾಡ ಹಿಪ್ಪೋ ಕ್ಯಾಂಪಸ್



ಶಾಲೆ ಉತ್ತಮ ಶಿಕ್ಷಣ ನೀಡುತ್ತಿದೆ. ಗುಣಮಟ್ಟ ಕಾಪಾಡಲು ನಮ್ಮ ಆಡಳಿತ ಮಂಡಳಿ ಸಹಕಾರ ಇರಲಿದೆ ಎಂದರು.

ವಿದ್ಯೆಯನ್ನು ಲಾಭಕ್ಕಾಗಿ ಮಾಡದೆ

» ನಾಲ್ಕನೇ ಪುಟದಲ್ಲಿ

## ನ್ಯಾಯಾಲಯ ಆದೇಶದಂತೆ ಕ್ರಮ ಕೈಗೊಂಡ ದೇವರಾಜು | ತಂತಿ ಬೇಲಿ ಅಳವಡಿಕೆ

# ನಟ ಯಶ್ ತಾಯಿ ಮನೆ ಮುಂದಿನ ಕಾಂಪೌಂಡ್ ತೆರವು

• ಪ್ರಜೋದಯ ವರದಿ

**ಹಾಸನ:** ಚಲನಚಿತ್ರ ನಟ ಯಶ್ ಅವರ ತಾಯಿ ಹಾಗು ನಿರ್ಮಾಪಕಿ ಪುಷ್ಪಾ ಅರುಣ್‌ಕುಮಾರ್ ಅವರು ತಮ್ಮ ಮನೆಯ ಮುಂದೆ ಅಕ್ರಮವಾಗಿ ನಿರ್ಮಿಸಿದ್ದ ಕಾಂಪೌಂಡ್ ಅನ್ನು ಜಾಗದ ಜಿಪಿಒ ಹೋಲ್ಡರ್ ದೇವರಾಜು ಅವರು ನ್ಯಾಯಾಲಯದ ಆದೇಶದಂತೆ ಭಾನುವಾರ ತೆರವುಗೊಳಿಸಿದ್ದಾರೆ.

ನಗರದ ವಿದ್ಯಾನಗರ ಬಡಾವಣೆಯಲ್ಲಿರುವ ತಮ್ಮ ನಿವಾಸದ ಪಕ್ಕದಲ್ಲಿದ್ದ ಜಾಗ ಅತಿಕ್ರಮಣ ಮಾಡಿರುವ ಆರೋಪ ಪುಷ್ಪಾ ವಿರುದ್ಧ ಕೇಳಿಬಂದಿತ್ತು. ಲಕ್ಷ್ಮಮ್ಮ ಅವರಿಗೆ ಸೇರಿದ ಜಾಗವನ್ನು ಪುಷ್ಪಾ ಅತಿಕ್ರಮಿಸಿಕೊಂಡಿದ್ದಾರೆ ಎನ್ನಲಾಗಿದೆ. ಈ ಜಾಗವನ್ನು ಜಿಪಿಎ ಹೋಲ್ಡರ್ ಆಗಿ ದೇವರಾಜು ಅವರಿಗೆ ಲಕ್ಷ್ಮಮ್ಮ ಬರೆದು ಕೊಟ್ಟಿದ್ದರು. ಪುಷ್ಪಾ ಕಾಂಪೌಂಡ್ ಹಾಕಿದ ದಿನವೇ ದೇವರಾಜು ಅವರು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಸುಮಾರು ಒಂದೂವರೆ ಸಾವಿರ ಅಡಿ ಜಾಗದಲ್ಲಿ ಅಕ್ರಮವಾಗಿ ಕಾಂಪೌಂಡ್ ನಿರ್ಮಿಸಿದ್ದಾರೆಂದು ದೇವರಾಜು ಕಾನೂನು ಹೋರಾಟ ಆರಂಭಿಸಿದ್ದರು.

ನಂತರ ದೇವರಾಜು ಅವರು ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯಕ್ಕೆ ಸೂಕ್ತ ದಾಖಲಾತಿಯನ್ನು ಪುಷ್ಪಾ ಸಲ್ಲಿಸದ ಹಿನ್ನಲೆಯಲ್ಲಿ ನಮ್ಮ ಪರ ತೀರ್ಪು ಬಂದಿದೆ. ಹಾಗಾಗಿ ನ್ಯಾಯಾಲಯದ ಅನುಮತಿಯಂತೆ ಅಕ್ರಮವಾಗಿ ಕಟ್ಟಿದ್ದ ಕಾಂಪೌಂಡ್ ತೆರವುಗೊಳಿಸಿದ್ದೇವೆಂದು ದೇವರಾಜು ಹೇಳಿದ್ದಾರೆ.

ಸ್ಥಳದಲ್ಲಿ ಬಿಗುವಿನ ವಾತಾವರಣ

ಅಕ್ರಮ ಕಾಂಪೌಂಡ್ ತೆರವು ಕಾರ್ಯಾಚರಣೆ ಬೆಳಿಗ್ಗೆ 9 ಗಂಟೆಗೆ ಶುರುವಾಯಿತು. ಎರಡು ಜೆಸಿಬಿ

» ನಾಲ್ಕನೇ ಪುಟದಲ್ಲಿ





### ದೇವರಾಜು-ಲಕ್ಷ್ಮಮ್ಮ ಸಂಬಂಧವೇನು?

ಜಾಗದ ಮೂಲ ಮಾಲೀಕರಾದ ಲಕ್ಷ್ಮಮ್ಮ ಬದಲು ದೇವರಾಜು ಅವರು ನ್ಯಾಯಾಲಯ ಮೆಟ್ಟಿಲೇರಿದ್ದು ಏಕೆಂಬ ಸಂಶಯ ಕಾಡುತ್ತದೆ. ಅದಕ್ಕೆ ದೇವರಾಜು ಅವರೇ ಸ್ಪಷ್ಟನೆ ನೀಡಿದ್ದು, ಲಕ್ಷ್ಮಮ್ಮ ಅವರು ಮೈಸೂರಿನಲ್ಲಿ ಶಾಲಾ ಶಿಕ್ಷಕಿಯಾಗಿದ್ದರು. ನಮ್ಮ ತಂದೆಯೂ ಅದೇ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಹೀಗಾಗಿ ಅವರು ನನ್ನ ಹೆಸರಿಗೆ ಜಿಪಿಎ ಮಾಡಿಕೊಟ್ಟಿದ್ದಾರೆ. ನಾವು ದುಡ್ಡು ಕೊಟ್ಟು ಖರೀದಿಸಿದ ಜಾಗಕ್ಕಾಗಿ 2021ರಿಂದ ಕಾನೂನು ಹೋರಾಟ ಮಾಡುತ್ತಿದ್ದೇನೆಂದರು.

### ಮಾನನಷ್ಟ ಮೊಕದ್ದಮೆ ಎಚ್ಚರಿಕೆ

ನಿರ್ಮಾಪಕಿ ಪುಷ್ಪಾ ಹಾಗು ಲಕ್ಷ್ಮಮ್ಮ ಅವರ ನಡುವಿನ ಜಾಗದ ವಿಚಾರದಲ್ಲಿ ಸತ್ಯಮಂಗಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆಗಿದ್ದ ನಟರಾಜ್ ಅವರ ಹೆಸರು ತಳುಕು ಹಾಕಿಕೊಂಡಿದೆ. ಭಾನುವಾರ ಹಾಸನದಲ್ಲಿ ನಡೆದ ಬೆಳವಣಿಗೆಗಳ ಕುರಿತು ಬೆಂಗಳೂರಿನಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ್ದ ಪುಷ್ಪಾ ಅವರು, ಸತ್ಯಮಂಗಲ ಪಿಡಿಒ ನಟರಾಜ್ ನಕಲಿ ದಾಖಲೆಗಳ ಸೃಷ್ಟಿಸಿ ತಮಗೆ ಮೋಸ ಮಾಡಿದ್ದಾರೆಂದು ಆರೋಪಿಸಿದ್ದರು.

ಈ ಬಗ್ಗೆ ಮಾತನಾಡಿದ ನಟರಾಜ್ ಅವರು, ನಾನು ನಾಲ್ಕು ವರ್ಷ ವಿದ್ಯಾನಗರ ವ್ಯಾಪ್ತಿಯ ಸತ್ಯಮಂಗಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆಗಿದ್ದೆ. ನನ್ನ ಅವಧಿಯಲ್ಲಿ ಏನಾದರೂ ನಕಲಿ ದಾಖಲೆಗಳು ಸೃಷ್ಟಿಯಾಗಿದ್ದರೆ ಹೇಳಲಿ. ಅವರು ನನ್ನ ಹೆಸರನ್ನು ಏಕೆ ತೆಗೆದುಕೊಂಡರು ಗೊತ್ತಿಲ್ಲ. ಅವರು ನನ್ನ ಪರಿಚಿತರೂ ಅಲ್ಲ, ಸಂಬಂಧಿಕರು ಅಲ್ಲ. ಸರ್ಕಾರಿ ನೌಕರನಾಗಿರುವ ನಾನು ಅವರ ರೀತಿ ಮಾತನಾಡುವುದಿಲ್ಲ. ನನ್ನ ವಿರುದ್ಧ ಏನಾದರೂ ದೂರುಗಳಿದ್ದರೆ ಮೇಲಾಧಿಕಾರಿಗಳಿಗೆ ತಿಳಿಸಬೇಕು. ನಾನು ಯಾವುದೇ ದಾಖಲೆಗಳ ತಿರುಚಿಲ್ಲವೆಂದು ಸ್ಪಷ್ಟಪಡಿಸಿದರು.

ನನ್ನ ಅವಧಿಯಲ್ಲಿ ಈ ಸಂಬಂಧ ಯಾವ ಕಡತಗಳು ಬಂದಿಲ್ಲ. ನಾನು ಪುಷ್ಪಾ ಅವರಿಗೆ ಕರೆ ಮಾಡಿದ್ದೆ, ಭೇಟಿ ಮಾಡಿ ಮಾತನಾಡಿದ್ದೆ ಎಂದು ಹೇಳಿದ್ದಾರೆ. ನಾನು ಒಮ್ಮೆಯೂ ಕರೆ ಮಾಡಿಲ್ಲ, ಮಾತನಾಡಿಲ್ಲ. ಈ ಆರೋಪವನ್ನು ಸಾಬೀತು ಪಡಿಸಬೇಕು. ಇಲ್ಲವಾದರೆ ಪುಷ್ಪಾ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆಂದು ಎಚ್ಚರಿಕೆ ನೀಡಿದರು.

# ಪ್ರತ್ಯೇಕ ಅಪಘಾತ : ಇಬ್ಬರ ಸಾವು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಹಿರೀಸಾವೆ ಹಾಗು ಅರಸೀಕೆರೆ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತ ಪಟ್ಟು, ಒಬ್ಬರು ಗಾಯಗೊಂಡಿದ್ದಾರೆ.

ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆಯ ನ್ಯೂರಾಕ್ ಹೋಟೆಲ್ ಮುಂಭಾಗ ಹಾಸನ ಕಡೆಯಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದ ಅಪರಿಚಿತ ಕಾರು ಡಿಕ್ಕಿಯಾಗಿ ವೃದ್ಧ ಮೃತಪಟ್ಟಿದ್ದಾರೆ. ಬೆಂಗಳೂರಿನ ಬೆಳಂದೂರು ನಿವಾಸಿ ಎಸ್. ಶಿವಲಿಂಗಯ್ಯ (82) ಮೃತರು. ಭದ್ರಾವತಿಯ ಪೇಪರ್ ಮಿಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಅವರು ನಿವೃತ್ತಿ ಬಳಿಕ ಯಡಿಯೂರಿನಲ್ಲಿ ವಾಸವಿದ್ದರು. ಈ ನಡುವೆ ನೆನಪಿನ ಶಕ್ತಿ ಕಡಿಮೆಯಾಗಿ ಯಾವುದಾದರೂ ಊರಿಗೆ ಹೋದರೆ ವಾಪಾಸ್ ಬರುತ್ತಿರಲಿಲ್ಲ. ಜ.3 ರಂದು ರಸ್ತೆ ದಾಟುತ್ತಿದ್ದಾಗ ಅವಘಡ ಸಂಭವಿಸಿದೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಎಲೆಕ್ಟ್ರಿಕ್ ಸ್ಕೂಟಿ ನಿಯಂತ್ರಣ ತಪ್ಪಿ ಚರಂಡಿಗೆ ಬಿದ್ದು ಬಾಲಕ ಮೃತಪಟ್ಟು ಮತ್ತೊಬ್ಬ ಗಾಯಗೊಂಡಿರುವ ಘಟನೆ ಅರಸೀಕೆರೆ ತಾಲ್ಲೂಕಿನ ಅಂಚೆಕೊಪ್ಪಲಿನ ಕೆರೆಕೋಡಿ ಸಮೀಪ ನಡೆದಿದೆ.

ನಗರದ ಲಕ್ಷ್ಮಿಪುರ ಬಡಾವಣೆಯ ಶಿಕ್ಷಕ ಬಿ.ಬಿ. ಪ್ರಕಾಶ್ ಅವರ ಪುತ್ರ ಹರ್ಷಿತ್ (14) ಮೃತ ಬಾಲಕ. ಸ್ನೇಹಿತ ಶಾಮ್ ಜೊತೆಗೆ ಹರ್ಷಿತ್ ಸ್ಕೂಟರ್‌ನಲ್ಲಿ ಸುತ್ತಾಡಿಕೊಂಡು ಬರಲು ತೆರಳಿದ್ದರು. ಶನಿವಾರ ಸಂಜೆ 7.45ರ ಸಮಯದಲ್ಲಿ ಅಂಚೆ ಕೊಪ್ಪಲಿನ ಕೆರೆಕೋಡಿಯಿಂದ ಮುಂದೆ ಸರ್ಕಾರಿ ಶಾಲೆಯ ಹತ್ತಿರ ಸ್ವಲ್ಪ ದೂರದಲ್ಲಿ ಸ್ಕೂಟಿಯು ನಿಯಂತ್ರಣಕ್ಕೆ ಸಿಗದೆ ರಸ್ತೆಯ ಪಕ್ಕದಲ್ಲಿದ್ದ ಚರಂಡಿಗೆ ಬಿದ್ದು ಅಪಘಾತವಾಗಿದೆ. ಹರ್ಷಿತ್ ಸ್ಥಳದಲ್ಲೇ ಮೃತಪಟ್ಟಿದ್ದರೆ ಶಾಮ್‌ಗೆ ಗಂಭೀರ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

C M Y K C M Y K C M Y K C M Y K

# ನಿಂತ ನೀರಿನಲ್ಲಿ ಮಾತ್ರ ಕ್ರಿಮಿಗಳು ಸೃಷ್ಟಿಯಾಗುತ್ತೆ!

ನಾನು ಹೈ ಸ್ಕೂಲ್ ಕಲಿಯುತ್ತಿದ್ದ ಸಮಯವದು. ಅಚ್ಯುತರಾವ್ ಎನ್ನುವ ಮೇಷ್ಟ್ರು ಜೀವ ಶಾಸ್ತ್ರವನ್ನು ನಮಗೆ ಕಲಿಸುತ್ತಿದ್ದರು. ಅವರು ತುಂಬಾ ಸೌಮ್ಯ ಸ್ವಭಾವದ ವ್ಯಕ್ತಿಯಾಗಿದ್ದರು. ಎಂದಿಗೂ ಕೋಪದಿಂದ ವಿದ್ಯಾರ್ಥಿಗಳನ್ನು ಬಯ್ಯುವವರಲ್ಲ. ಅಂಕಗಳಿಕೆಯಲ್ಲಿ ಕಡಿಮೆಯಾದಾಗಲೂ, ಹೀಗೆ ಕಡಿಮೆಯಾಗಲು ಕಾರಣವೇನು? ಮಕ್ಕಳ ಮನಸ್ಸಿನಲ್ಲಿ ಏನಾಗುತ್ತಿದೆ, ಅವರ ಹಿನ್ನೆಲೆ ಏನು? ಎಲ್ಲವನ್ನೂ ಅವರು ತಿಳಿದುಕೊಳ್ಳುತ್ತಿದ್ದರು. ಅವತ್ತಿಗೆ ಇಷ್ಟೆಲ್ಲಾ ಗೊತ್ತಾಗುತ್ತಿ ರಲಿಲ್ಲ. ಇವತ್ತಿಗೆ ಅವರ ಎಲ್ಲಾ ನಡೆಗಳು ಅರ್ಥವಾಗುತ್ತಿದೆ. ಇಷ್ಟೊಂದು ಒಳ್ಳೆಯ, ಮೃದು ಭಾಷಿ ಗುರುಗಳು ತಮ್ಮ ಶಾಂತ ಸ್ವರದಲ್ಲಿ ಯಾವೊಬ್ಬ ವಿದ್ಯಾರ್ಥಿಯನ್ನು ಕರೆದು ಸ್ಟಾಫ್ ರೂಮ್ಗೆ ಹೋಗಿ ರುದ್ರನನ್ನು ತೆಗೆದುಕೊಂಡು ಬಾ ಎಂದರೆ ಅಲ್ಲಿಗೆ ಆ ಹುಡುಗನಿಗೆ ಪೆಟ್ಟು ಬೀಳುತ್ತದೆ ಎಂದರ್ಥ.

ಅಚ್ಯುತರಾವ್ ಅವರು ಯಾರನ್ನು ಶಿಕ್ಷಿಸ ಬೇಕಿತ್ತು ಆ ಹುಡುಗನನ್ನೇ ರುದ್ರನನ್ನು ತರಲು ಕಳುಹಿಸುತ್ತಿದ್ದದು ವಿಶೇಷ. ರುದ್ರ ಎಂದರೆ ಅಂದೊಂದು ಬಿದಿರಿನ ಬೆತ್ತ. ತೆಳ್ಳಗೆ ಉದ್ದಕ್ಕಿದ್ದ ರುದ್ರನಿಂದ ಪೆಟ್ಟು ತಿಂದರೆ ಮೂರು ದಿನ ಕೈಯಲ್ಲಿ ಮೂಡಿದ ಬಾಸುಂಡೆ ಮಾಸುತ್ತಿರಲಿಲ್ಲ. ಹಾಗೆಂದು ಮೇಷ್ಟ್ರು ಎಲ್ಲರಿಗೂ, ಯಾವಾಗಲೂ ದಂಡಿಸುತ್ತಿದ್ದರು ಎಂದಲ್ಲ. ಲಕ್ಷ್ಮಣ ರೇಖೆ ದಾಟಿದವರಿಗೆ ಮಾತ್ರ ಪೆಟ್ಟು ಬೀಳುತ್ತಿತ್ತು. ಕೈ ಮುಂದೆ ಮಾಡಲು ಹೇಳಿ ಅಂಗೈ ಮೇಲೆ ಒಂದೆರಡು ಬಾರಿಸಿ, ಬುದ್ದಿ ಮಾತು ನಿನಗೆ ತಾಗಿಲ್ಲ, ಹೀಗಾಗಿ ಈ ಪೆಟ್ಟು ನೆನಪಿರಲಿ ಎಂದು ಹೇಳುತ್ತಿದ್ದರು.

ಅಚ್ಯುತ ಸಾರ್ ಹೊಡೆದಿದ್ದಾರೆ ಎಂದರೆ ಅದು ಖಂಡಿತ ವಿದ್ಯಾರ್ಥಿಯಿಂದ ತಪ್ಪಾಗಿರುತ್ತದೆ ಎನ್ನುವುದು ಶಾಲೆಯಲ್ಲಿ ಜನಜನಿತವಾಗಿತ್ತು. ಅಂದಿನ ಸಮಯದಲ್ಲಿ ಪೋಷಕರು ಕೂಡ ಮಕ್ಕಳನ್ನು ಶಿಕ್ಷಿಸಿದರೆ ಕೋಪಗೊಳ್ಳುತ್ತಿರಲಿಲ್ಲ. ಬದಲಿಗೆ ನೀನು ಅದೇನು ತಪ್ಪು ಮಾಡಿದೆ ಗುರುಗಳಿಂದ ಪೆಟ್ಟು ತಿನ್ನಲು ಎನ್ನುವ ಪ್ರಶ್ನೆಯನ್ನು ಮಕ್ಕಳಿಗೆ ಹಾಕುತ್ತಿದ್ದರು. ಸಮಾಜದಲ್ಲಿ ಎಲ್ಲವೂ ಬದಲಾದಂತೆ ಇದು ಕೂಡ ಬದಲಾಗಿದೆ. ಶಿಕ್ಷಕರಲ್ಲಿ ಕೂಡ ಆ ಮಟ್ಟದ ಎಥಿಕ್ಸ್ ಇಲ್ಲವಾಗಿದೆ. ಇನ್ನು ಮಕ್ಕಳು ಮತ್ತು ಪೋಷಕರು ಬದಲಾಗಿರುವ ರೀತಿ ದಿಗಿಲು ಹುಟ್ಟಿಸುತ್ತದೆ.

ಎರಡು ಪ್ಲಸ್ ಎರಡು ನಾಲ್ಕು ಎನ್ನುವುದು ಸರಳ ಗಣಿತ. ಇವತ್ತೇನಾಗಿದೆ ವಿದ್ಯಾರ್ಥಿಯೊಬ್ಬ ಇಪ್ಪತ್ತೆರೆಡು ಎಂದು ಬರೆದಿದ್ದರೆ ಮತ್ತು ಅದು ತಪ್ಪು ಎಂದು ಗುರು ಅಂಕವನ್ನು ನೀಡದಿದ್ದರೆ ಗುರುವನ್ನು ನಿಂದಿಸಲಾಗುತ್ತದೆ. ಮಗುವಿನ ಕ್ರಿಯೇಟಿವಿಟಿಯನ್ನು ಕೊಲ್ಲುವ ಹುನ್ನಾರ ಎಂದು ಹುಯಿಲೆಬ್ಬಿಸಲಾಗುತ್ತದೆ. ಎರಡು ಪ್ಲಸ್ ಎರಡು



ಯಾವಾಗಲೂ ನಾಲ್ಕೇ ಏಕೆ ಆಗಬೇಕು? ಮಗುವಿನ ಕ್ರಿಯಾಶೀಲತೆಯನ್ನು ಗಮನದಲ್ಲಿರಿಸಿಕೊಂಡು ಅರ್ಧ ಅಂಕವನ್ನು ಕೊಡಬೇಕು ಎನ್ನುವ ಕೂಗು ಜೋರಾಗುತ್ತದೆ. ಮಕ್ಕಳು ಕೂಡ ಹಸುವಿಗೆ ಎಷ್ಟು ಕಾಲು ಎಂದರೆ ಥ್ರೀ ಪ್ಲಸ್ ಒನ್ ಎನ್ನುತ್ತಾರೆ. ಇನ್ನು ಕೆಲವರು ಎರಡು ಪ್ಲಸ್ ಎರಡು ಎನ್ನುತ್ತಾರೆ. ಅದೇನೇ ಇರಲಿ ಅಂಕ ನೀಡಬೇಕು ಎನ್ನುವ ತಾಕೀತು ಆಡಳಿತ ಮಂಡಳಿಯಿಂದ ಬಂದಿರುತ್ತದೆ. ಮೊನ್ನೆ ತಾನೇ ಪತ್ರಿಕೆ ಯಲ್ಲಿ ಹತ್ತನೇ ತರಗತಿ ಪಾಸಾದ ವಿದ್ಯಾರ್ಥಿಗಳಿಗೆ ಸರಿಯಾಗಿ ಓದಲು ಬರೆಯಲು ಬಾರದು ಎನ್ನುವ ಸಂಗತಿಯನ್ನು ಪ್ರಕಟಿಸಿದ್ದರು. ಇವತ್ತು ಸಮಾಜ, ಶಿಕ್ಷಣ ಯಾವ ಮಟ್ಟಕ್ಕೆ ಬಂದಿದೆ ಎಂದರೆ ಹಸುವಿಗೆ ಎಷ್ಟು ಕಾಲು ಎನ್ನುವ ಪ್ರಶ್ನೆಗೆ ಒಂದು ಅಂಕ ಇತ್ತೆಂದು ಕೊಳ್ಳಿ, ವಿದ್ಯಾರ್ಥಿ ಎರಡು ಎನ್ನುವ ಉತ್ತರ ಬರೆದಿದ್ದರೆ, ಕೊನೆಪಕ್ಷ ಅರ್ಧ ಸರಿಯಾಗಿ ಹೇಳಿದ್ದಾನೆ, ಅರ್ಧ ಅಂಕ ನೀಡಿ ಎನ್ನುವ ಮಟ್ಟಕ್ಕೆ! ಈ ಮಾತುಗಳು ಉತ್ಪ್ರೇಕ್ಷೆ ಎನ್ನಿಸಬಹುದು. ಆದರೆ ಇದು ಇಂದು ಸಮಾಜದಲ್ಲಿ ನಡೆಯುತ್ತಿದೆ. ಬಿ ಲಿಬರಲ್ ಇನ್ ಕರೆಕ್ಷನ್ ಎನ್ನುವ ಒಂದು ಸಾಲಿನ ಆದೇಶ ಪಡೆಯದೆ ಇರುವ ಶಿಕ್ಷಕರು ಇಲ್ಲ ಎನ್ನುವಂತಾಗಿದೆ. ಈ ರೀತಿ ಅಂಕ ಕೊಟ್ಟು ಸಮಾಜದ ಆರೋಗ್ಯವನ್ನು ನಾವು ಕೊಲ್ಲುತ್ತಿದ್ದೇವೆ.

ಒಮ್ಮೆ ಸೋಶಿಯಲ್ ಮೀಡಿಯಾದಲ್ಲಿ ಇದು ಪರೀಕ್ಷೆ ಸಮಯ ಮಕ್ಕಳ ತಲೆಯಲ್ಲಿ ಪಠ್ಯ ಇರಬೇಕಾದ ಜಾಗದಲ್ಲಿ ಕ್ರಿಕೆಟ್ ಎನ್ನುವ ಕಸ ತುಂಬಿಕೊಳ್ಳುತ್ತಿದೆ. ಆಟಗಾರರು, ವೀಕ್ಷಕ ವಿವರಣೆಗಾರರು ಎಲ್ಲರ ಬ್ಯಾಂಕ್ ಬ್ಯಾಲೆನ್ಸ್ ಹೆಚ್ಚುತ್ತದೆ. ಸಮಯ ವ್ಯಯಿಸಿ ಇದನ್ನು ನೋಡಿದ ಮಕ್ಕಳ ಭವಿಷ್ಯದ ಗತಿಯೇನು ಎನ್ನುವ ಕಾಳಜಿ ವ್ಯಕ್ತಪಡಿಸಿ ಬರೆದಿದ್ದೆ. ಅದಕ್ಕೆ ಬಂದ ಪ್ರತಿಕ್ರಿಯೆಗಳು ನಮ್ಮ ಸಮಾಜ ಎತ್ತ ಸಾಗುತ್ತಿದೆ ಎನ್ನುವುದಕ್ಕೆ ದ್ಯೋತ್ಯಕವಾಗಿತ್ತು. ಒಂದು ಪ್ರತಿಕ್ರಿಯೆ ಸಮಾಜ ದಲ್ಲಿ ಎಲ್ಲರೂ ಶಿಸ್ತಿನಿಂದ ಓದಿ, ಯಶಸ್ಸು ಪಡೆದರೆ ಕಸ ಗುಡಿಸುವರು ಯಾರು? ಡ್ರೈವಿಂಗ್ ಮಾಡುವರು ಯಾರು? ಮುಸುರೆ ತೊಳೆಯುವರು ಯಾರು? ಎಲ್ಲವೂ ಬ್ಯಾಲೆನ್ಸ್ ಆಗಬೇಕು ಹೀಗಾಗಿ ಎಲ್ಲವೂ ಸರಿಯಾಗಿದೆ ಎನ್ನುವ ಅರ್ಥದಲ್ಲಿ ಇತ್ತು. ನನ್ನ ಕಾಳಜಿ ನಾವು ಉನ್ನತ ಯೋಚನೆ ಮಾಡಿ ಉನ್ನತ ಮಟ್ಟವನ್ನು ಮುಟ್ಟಬೇಕು ಎನ್ನುವುದಾಗಿತ್ತು. ಅದಕ್ಕೆ ಇಂತಹ ವಿತಂಡವಾದದ ಪ್ರತಿಕ್ರಿಯೆ. ಸಮಾಜ ಇಂದು ಒಡೆದ ಮನೆ. ನೀವು ಏನೇ ಹೇಳಿ ಅದಕ್ಕೊಂದು ಕೌಂಟರ್ ಸ್ಟೇಟ್ಮೆಂಟ್ ಸಿದ್ಧವಿರುತ್ತದೆ. ಪುರುಷರೇ ಏಕೆ ಸಿಗರೇಟು ಸೇದಬೇಕು? ಎನ್ನುವ ವಾದ ಹುಟ್ಟು ಹಾಕಿದ್ದು ಸಿಗರೇಟು ಕಂಪನಿಗಳು. 1960ರ ದಶಕದಲ್ಲಿ ಸಿಗರೇಟು ಮಾರಾಟದಿಂದ ಲಾಭ ಗಳಿಸುತ್ತಿದ್ದ ಈ ಸಂಸ್ಥೆಗಳು ಇನ್ನಷ್ಟು ಲಾಭ ಮಾಡಿಕೊಳ್ಳಲು ಸ್ತ್ರೀ ವಾದವನ್ನು ಹರಿಯ ಬಿಟ್ಟವು. ಹೆಣ್ಣಿಗೂ ಸಮಾನ ಹಕ್ಕಿದೆ, ಆಕೆ ಏಕೆ ಸಿಗರೇಟು ಸೇದಬಾರದು? ಎನ್ನುವ ನರೇಟಿವ್ ಸೃಷ್ಟಿ ಮಾಡಲಾಯಿತು. ಹತ್ತಾರು ರೂಪದರ್ಶಿಗಳನ್ನು ಹಣ ಕೊಟ್ಟು, ಕೈಗೆ ಸಿಗರೇಟು ಕೊಟ್ಟು ಸಮಾಜದ ಮುಂದೆ ಸಿಗರೇಟು ಸೇವಿಸಲು ಹೇಳಲಾಯಿತು. ಮಿಕ್ಕದ್ದು ಚರಿತ್ರೆ. ಅದರಿಂದ ಲಾಭ ಮಾಡಿಕೊಂಡವರು ಸಿಗರೇಟು ಉತ್ಪಾದಕ ಸಂಸ್ಥೆಗಳು! ಸೇದಬೇಡಿ ಇದರಿಂದ ಆರೋಗ್ಯಕ್ಕೆ ಹಾನಿಕರ ಎಂದರೆ ಅದು ಸ್ತ್ರೀ ಮತ್ತು ಪುರುಷರ ನಡುವಿನ ಮೇಲು ಕೀಳುಗಳ ಸಂಘರ್ಷವಾಗಿ ಮಾರ್ಪಾಡಾಗುತ್ತಿತ್ತು. ಇವತ್ತಿನ ಶಿಕ್ಷಣ ವ್ಯವಸ್ಥೆ ಕೂಡ ಹೀಗೆ ಆಗಿದೆ.

ಗಮನಿಸಿ ನೋಡಿ ಪ್ರಾಥಮಿಕ ಶಾಲೆಗಳು ಎಂದರೆ ಅವು ಹೈ ಸ್ಕೂಲ್ಗೆ ಫೀಡರ್ ಕೇಂದ್ರಗಳಾಗಿ ಮಾರ್ಪಾಡಾಗಿವೆ. ಹೈ ಸ್ಕೂಲ್ ಎಂದರೆ ಅವು ಕಾಲೇಜಿಗೆ ಫೀಡರ್ಗಳು ಅಷ್ಟೆ. ಇಲ್ಲಿ ವಿದ್ಯಾರ್ಥಿಯನ್ನು ನಪಾಸು ಮಾಡುವಂತಿಲ್ಲ. ನಪಾಸು ಮಾಡಿದರೆ ಮುಂದಿನ ತರಗತಿಗೆ ತಲೆ ಕಡಿಮೆಯಾಯ್ತು. ಇಲ್ಲ ಅದಾಗುವಂತಿಲ್ಲ, ಓದಲು ಬರೆಯಲು ಬರಲಿ ಬಿಡಲಿ ಅವರು ಮುಂದಿನ ತರಗತಿಗೆ ಹೋಗಬೇಕು. ಕಳೆದ ವಾರ ಸಿಬಿಎಸ್ಸಿಯವರು ಐದು ಮತ್ತು ಎಂಟನೇ ತರಗತಿಯಲ್ಲಿ ನಪಾಸು ಮಾಡಬಹುದು ಎನ್ನುವ ಘೋಷಣೆ ಮಾಡಿದ್ದಾರೆ ಎನ್ನುವುದು ಸ್ವಲ್ಪ ಮಟ್ಟಿನ ನೆಮ್ಮದಿ ನೀಡಿದೆ. ಶಾಲೆಗಳು ಕಲಿಕೆಯ ಕೇಂದ್ರಗಳಾಗದೆ ಮುಂದಿನ ಹಂತದ ತರಗತಿಗಳಿಗೆ ಫೀಡರ್ ಆಗಿ ಮಾರ್ಪಾಟಾಗಿವೆ.

ಇನ್ನು ಸಮಾಜದಲ್ಲಿ ಕ್ರೀಡೆಯ ಹೆಸರಿನಲ್ಲಿ ನಡೆಯುವ ವ್ಯಾಪಾರದ ಬಗ್ಗೆ ಕೂಡ ನಮ್ಮದು ಇದೆ ಧೋರಣೆ. ಮಕ್ಕಳ ಪರೀಕ್ಷೆ ಸಮಯ ಎನ್ನುವ ಪರಿಜ್ಞಾನ ಕೂಡ ಯಾರಿಗೂ ಇಲ್ಲ. ಕ್ರಿಕೆಟ್ ನೋಡುವುದು ಓವರ್ ಆಲ್ ಡೆವಲಪ್ಮೆಂಟ್ ಭಾಗ, ಕೇವಲ ಓದು ಮತ್ತು ಓದು ಎಂದರೆ ಅವರು ಕೂಚುಭಟ್ಟರಾಗುತ್ತಾರೆ ಎನ್ನುವ ಫರ್ಮಾನು ಸಮಾಜದಲ್ಲಿ ಉತ್ತಮ ಸ್ಥಾನದಲ್ಲಿರುವ ರಿಂದ ಬರುತ್ತದೆ. ಕ್ರಿಕೆಟ್ ಆಟವನ್ನು ಆಡಿದ್ದರೆ ಅಲ್ಲಿಗೆ ಪರವಾಗಿಲ್ಲ ಎನ್ನಬಹುದಿತ್ತು. ದೈಹಿಕ ವ್ಯಾಯಾಮವಾದ ಹಾಗಾಯ್ತು. ಓದಿನಿಂದ ಒಂದಷ್ಟು ಬದಲಾವಣೆ ಕೂಡ ಸಿಕ್ಕಿತು ಎನ್ನಬಹುದು. ಕ್ರಿಕೆಟ್ ವೀಕ್ಷಣೆಯಿಂದ ಯಾವ ಲಾಭ? ಅದರಲ್ಲೂ ಮಕ್ಕಳನ್ನು ಕಲಿಯುವ ವಯಸ್ಸಿನಲ್ಲಿ ರಿಲ್ಯಾಕ್ ಆಗಲು ಬಿಟ್ಟರೆ ಹೇಗೆ ? ಹೀಗೆ ಯಾವುದೇ ಅಂಕೆಶಂಕೆ ಇಲ್ಲದೆ ಬೆಳದ ಮಕ್ಕಳು ಸಮಾಜಕ್ಕೆ ಹೊರೆಯಾಗುತ್ತಾರೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ ಬಂದು ಇರುವ ಕೆಲಸಗಳಿಗೆ ತತ್ವಾರ ಬರುತ್ತಿರುವ ಸಮಯದಲ್ಲಿ ಇನ್ನಷ್ಟು ಹೆಚ್ಚು ಶ್ರದ್ದೆಯಿಂದ ಕಲಿಯಬೇಕಿದೆ. ಮುಂಬರುವ ಸನ್ನಿವೇಶಗಳನ್ನು ಗ್ರಹಿಸಬೇಕಿದೆ. ಅದ್ಯಾವುದೂ ನಮ್ಮ ಸಮಾಜದಲ್ಲಿ ಆಗುತ್ತಿಲ್ಲ. ಬದಲಿಗೆ ಒಂದು ಬದಲಾವಣೆ ಮಾತ್ರ ವೇಗವಾಗಿ ಆಗುತ್ತಿದೆ. ಶಾಲೆಯಲ್ಲಿ, ಕಾಲೇಜಿನಲ್ಲಿ ಶ್ರದ್ದೆಯಿಂದ ಕಲಿತು ಪ್ರಥಮ ಸ್ಥಾನ ಪಡೆಯುವವರನ್ನು ನಿಷ್ಪ್ರಯೋಜಕರು, ಬದುಕನ್ನು ಆಸ್ವಾದಿಸಲು ಬಾರದವರು ಎನ್ನಲಾಗುತ್ತದ್ದೆ. ಟಿವಿ ಟಾಕ್ ಷೋಗಳಲ್ಲಿ, ಸೆಲೆಬ್ರೆಟಿಗಳ ಬಾಯಲ್ಲಿ ನಾವು ಹೆಚ್ಚು ಓದಿಲ್ಲ, ಬಟ್ ಯಶಸ್ವಿಯಾಗಿದ್ದೇವೆ ಎನ್ನುವ ಹೇಳಿಕೆ ಹೆಚ್ಚಾಗುತ್ತಿದೆ. ಇನ್ನು ಬಾಲಿವುಡ್ ಮಂದಿಯಂತೂ ಟಾಕ್ ಷೋಗಳಲ್ಲಿ ಹೆಚ್ಚು ಓದುತ್ತಿರುವವರ ಸಂಪಾದನೆ ಎಷ್ಟು ಎಂದು ಕಿಚಾಯಿಸುತ್ತಾರೆ.

ಪುರುಷರೇ ಏಕೆ ಸಿಗರೇಟು ಸೇದಬೇಕು ಎನ್ನುವ ಕ್ಯಾಂಪೇನ್ ಜ್ಞಾಪಿಸಿಕೊಳ್ಳಿ. ಅದರಿಂದ ಲಾಭವಾದದ್ದು ಯಾರಿಗೆ ಎನ್ನುವುದು ನೆನಪಿರಲಿ. ಇಂದಿನ ಸಮಾಜ ದಲ್ಲಿ ಹರಿಬಿಡುತ್ತಿರುವ ಅಂಶಗಳ ಕೂಡ ಇದೆ ತರಹದವು. ಅವರಿಗೆ ಬೇಕಿದುರುವುದು ಹೆಚ್ಚು ಚಿಂತಿಸದ, ಯೋಚಿಸದ ಅವರ ಪದಾರ್ಥಗಳನ್ನು, ಚಿಂತನೆಗಳನ್ನು ಕನ್ಸುಮ್ ಮಾಡುವ ಅಗಾಧ ಜನರ ಗುಂಪು ಅಷ್ಟೇ.

ಗಮನಿಸಿ ರಸ್ತೆಯಲ್ಲಿ ಬರುವ ವಾರದಲ್ಲಿ ಎರಡು ಅಥವಾ ಮೂರು ಬಾರಿ ಖರೀದಿ ಮಾಡಬೇಕಾಗಿರುವ ಟೊಮೊಟೊ ಕೊಳ್ಳುವ ಮುನ್ನ ಅದನ್ನು ಪರೀಕ್ಷಿಸಿ ಸರಿಯಾಗಿದೆಯೇ ಇಲ್ಲವೇ? ಎಂದು ನೋಡುವ ಮಧ್ಯಮವರ್ಗದ ಜನ ಈ ವಿಷಯದಲ್ಲಿ ಮಾತ್ರ ಪೂರ್ಣ ನಿದ್ದೆಯಲ್ಲಿದ್ದಾರೆ. ಇವತ್ತು ಎಲ್ಕೆಜಿ ಸೇರಿಸಲು ಲಕ್ಷ ರೂಪಾಯಿ ಬೇಕು ಎನ್ನುವ ಕಾಲಘಟ್ಟದಲ್ಲಿ ನಾವಿದ್ದೇವೆ. ಅಲ್ಲಿಂದ ಪದವಿಯವರೆಗೆ ಮಾಡಿದ ಖರ್ಚಿನ ಲೆಕ್ಕಾಚಾರ ನೋಡಿದರೆ ಅದೊಂದು ದೊಡ್ಡ ಮೊತ್ತವಾಗುತ್ತದೆ. ಇಷ್ಟೊಂದು ಹಣವನ್ನು ವ್ಯಯಿಸಿ ಕೂಡ ಕಲಿಕೆಯಲ್ಲಿ ಹಿಂದೆ ಬಿದ್ದು ಅದ ರಿಂದ ಬದುಕನ್ನು ಕಟ್ಟಿಕೊಳ್ಳಲಾಗಲಿಲ್ಲ ಎಂದರೆ ಅದಕ್ಕೇನು ಅರ್ಥ? ಹೇಗೆ ಜೀವಸ್ತರದಲ್ಲಿ ಏಕೋ ಬ್ಯಾಲೆನ್ಸ್ ಹಾಗಬೇಕು, ಹಾಗೆ ಇಲ್ಲೂ ಎಲ್ಲಾ ತರಹದ ಕೆಲಸ ಮಾಡುವರು ಬೇಕು ಎನ್ನುವ ವಾದ ಕೇಳಲು ಬಹಳ ಚನ್ನಾಗಿರುತ್ತದೆ. ಹತ್ತಾರು ವರ್ಷ ಆಟೋ ಓಡಿಸುತ್ತಾ, ಬದುಕಿನ ಕಷ್ಟಗಳನ್ನು ನುಂಗಿಕೊಂಡು ನನ್ನ ಬದುಕಿನಂತೆ ನನ್ನ ಮಕ್ಕಳ ಬದುಕು ಆಗಬಾರದು ಎಂದು ಬಯಸುವ ತಂದೆ ತಾಯಿಯನ್ನು ಒಮ್ಮೆ ಮಾತನಾಡಿಸಿ ನೋಡಿ ಸಾಕು. ನೋವು, ಕಷ್ಟದ ಅರಿವಾಗುತ್ತದೆ.

ಈಗ ನಮ್ಮ ಕೈಲಿರುವ ಸಮಯವನ್ನು ಸರಿಯಾಗಿ ಉಪಯೋಗಿಸಿ ಕೊಳ್ಳಬೇಕು. ಇಲ್ಲವಾದಲ್ಲಿ ಜೀವನ ಪೂರ್ತಿ ಹಣವಿಲ್ಲ, ಸಮಯವಿಲ್ಲ ಎನ್ನುತ್ತಾ, ಇಷ್ಟವಿರಲಿ, ಬಿಡಲಿ ಬದುಕಿನ ಬಂಡಿ ಎಳೆಯಲು ಬೇಕಾಗುವ ಕೆಲಸವನ್ನು ಮಾಡಬೇಕಾಗುತ್ತದೆ. ಟಿವಿ ಪರದೆಯ ಮೇಲೆ ಕುಣಿ ದಾಡಿದ್ದ, ನೀವು ನೋಡಿ, ಆರಾಧಿಸಿ, ಮೆಚ್ಚಿದ್ದ ಸಿನಿಮಾ ನಟ ಅಥವಾ ಆಟಗಾರ ಮಾತ್ರ ಜಗತ್ತಿನ ಎಲ್ಲಾ ಸುಖಭೋಗಗಳನ್ನು ಅನುಭವಿಸುತ್ತ ಜೀವನವನ್ನು ಕಳೆಯುತ್ತಾರೆ. ಇದರರ್ಥ ಯಾರೂ ಆಟವನ್ನು, ಸಿನೆಮಾವನ್ನು ವೀಕ್ಷಣೆ ಮಾಡಬಾರದು ಎಂದಲ್ಲ, ಮಾಡುವ ಕೆಲಸ ಮುಖ್ಯವಾಗಿರಲಿ. ನಮ್ಮ ಗುರಿ ಮುಖ್ಯವಾಗಿರಲಿ. ಬೇರಾವುದೂ ಸಾಧನೆಯ ಹಾದಿಯಲ್ಲಿ ಅಡ್ಡಿಯಾಗಾದಿರಲಿ ಎನ್ನುವುದಷ್ಟೆ ಆಶಯ. ಉಳಿದಂತೆ ಅವರರ ತಲೆಗೆ ಅವರವರ ಕೈ. ಇಲ್ಲಿ ಎಲ್ಲರೂ ಅವರವರ ಮನಸ್ಸಿಗೆ ಬಂದದ್ದು ಮಾಡಲು ಸ್ವತಂತ್ರರು.

ನನ್ನ ಕಿಟಕಿಯಲ್ಲಿ ಕಂಡದಷ್ಟೇ ಸತ್ಯ ಎನ್ನುವ ದಾಷ್ಟಿಕತೆ ನನಗಿಲ್ಲ.

**-ರಂಗಸ್ವಾಮಿ ಮೂಕನಹಳ್ಳಿ**

## ಕವನ

ಕುಡಿಯಬಾರದೆನ್ನುವರೆ ಕುಡಿದು
ಬೀಳುತ್ತಾರೆ ಇಲ್ಲಿ
ಹೊಡೆಯಬಾರದೆನ್ನುವರೆ ಹೊಡೆದು
ಸಾಯುತ್ತಾರೆ ಇಲ್ಲಿ

ಚಿಪ್ಪಿನೊಳಗೆ ಮುತ್ತು ಇಹುದೆ ಮತ್ತು
ಸಿಗದೆ ಹೇಳು
ಪಡೆಯಬಾರದೆನ್ನುವರೆ ಪಡೆದು
ಬೆರೆಯುತ್ತಾರೆ ಇಲ್ಲಿ

ಸ್ನೇಹದೊಳಗೆ ವಿಷವು ಇರಲು ಪ್ರೀತಿ
ಇಂದು ಕಂಡಿತೆ
ಕೊಲ್ಲಬಾರದೆನ್ನುವರೆ ಕಡಿದು
ಮೆರೆಯುತ್ತಾರೆ ಇಲ್ಲಿ

ಬೆತ್ತಲಾದ ಜನರ ಸುತ್ತ ಹೊಸತು ವರುಷ
ಹರುಷ
ಹಡೆಯಬಾರದೆನ್ನುವರೆ ಹಡೆದು
ಮಲಗುತ್ತಾರೆ ಇಲ್ಲಿ

ಬಂಧನದ ಬೇಡಿಗಳನು ಹೇಗೆ
ಕಳಚುತಿಹರು ಈಶಾ
ಸಿಡಿಯಬಾರದೆನ್ನುವರೆ ಸಿಡಿದು
ಬಾಳುತ್ತಾರೆ ಇಲ್ಲಿ

**-ಹಾ.ಮ.ಸತೀಶ ಬೆಂಗಳೂರು**

## ಹನಿಗಳು ಸರ್ ಹನಿಗಳು

ಲೋಕದ ಜನ
ಡೊಂಕೆನ್ನದಿರಿ
ನಮಗೆ ನಾವೇ
ಡೊಂಕು ಬಾಳಲಿ !
ಕೊಡು ಬೆಳಕ
ಕರ್ಪೂರದಂತೆ,ಈಶಾ
ಜಗದೊಳಗೆ !
ಕಾಮ ಜ್ವರಕೆ
ಮದ್ದಿಲ್ಲವೊ ನೀ ತಿಳಿ
ಸಂನ್ಯಾಸಿಯಾಗೊ !
ನೋವು ಕೊಡದೆ
ಯಾರಿಗೂ ಮಾತಾಡದೆ
ನೀ ಕವಿಯಾಗು !
ಸುಮ್ಮನಿರುವುದ ಕಲಿ
ಲೋಕದ ಬೆಳಕಿನಲಿ
ತಿರುಗುತಲಿ ಓದುತ
ಜ್ಞಾನಿಯಾಗು ಬುವಿಲಿ !
ಮುತ್ತಿಹುದಯ್ಯ
ಮುತ್ತಿನಾ ಲೋಕದಲಿ
ಪ್ರೀತಿ ಜೊತೆಗೆ !
ಬಡ ಕವಿಯು
ಸಿರಿವಂತ ಕವಿಯ
ಗುಲಾಮನಯ್ಯಾ !
ಕವಿಗಳಲ್ಲೂ
ಎರಡು ವಿಧವಯ್ಯಾ
ಜಾತಿ ವಿಜಾತಿ !
ಕಪ್ಪೆಗಳಂತೆ
ವಟಗುಟ್ಟುತ್ತಲಿರೇ
ಕವಿಪುಂಗವ !

## ಮಯೂರ ಹಾಸ್ಯ

### ಹಾನರೇಬಲ್ ಜಜಸ್



ನನ್ನ ತಂಗಿಯ ಪುತ್ರ ಶ್ರೀಹರಿ ಒಂದನೇ ತರಗತಿಯಲ್ಲಿ ಓದುತ್ತಿದ್ದಾನೆ. ಅವನು ಶಾಲೆಯಲ್ಲಿ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಬೇಕಿತ್ತು. ಮನೆಯಲ್ಲಿ ಎಲ್ಲರೂ ಸೇರಿ ಅವನಿಗೆ ತರಬೇತಿ ಕೊಡುತ್ತಿದ್ದರು ಎಂದು ಆರಂಭಿಸಬೇಕಿತ್ತು. ಎಲ್ಲರೂ ಅವನ ಮುಂದೆ ಪ್ರೇಕ್ಷಕರ ರೂಪ ಧರಿಸಿ ಗಂಭೀರವಾಗಿ ಕೂತಿದ್ದನ್ನು ಕಂಡ ಅವನು ಗಡಿಬಿಡಿಯಲ್ಲಿ ಹಾರಿಬಲ್ ಎಂದು ಆರಂಭಿಸಿದ ಎಲ್ಲರೂ ನಗೆಗಡಲಲ್ಲಿ ತೇಲಾಡಿದರು.

**-ಪಂಚಾಂಗಂ ಸುಧಾ**

### ಮುದ್ದೆ ಊಟ ಒಳ್ಳೇದು

ಪರಮೇಶಿಯ ಮಿತ್ರನೊಬ್ಬ ಪ್ರೀತಿಸಿದ ಹುಡುಗಿಯನ್ನು ಮದುವೆಯಾದ. ಆತನ ಆಹಾರ ಶೈಲಿ ಬೇರೆ, ಆಕೆಯದ್ದೇ ಬೇರೆ. ಊಟ, ತಿಂಡಿ ಸಾಧ್ಯವಾದಷ್ಟೂ ಅಪ್ಪ ಅಮ್ಮ ಏನು ಇಷ್ಟ ಪಡುತ್ತಾರೆ ಎನ್ನುವುದನ್ನು ಗಮನಿಸಿ ಅದನ್ನೇ ಮಾಡೆಂದು ಆತ ಮುಂಚಿತವಾಗಿಯೇ ಸೂಚಿ ಸಿದ್ದ. ಅಂದು ಊಟಕ್ಕೆ ಬಂದವನಿಗೆ ಮಡದಿ ಅನ್ನ ಸಾರು ಬಡಿಸಿದ್ದಳು. ಅನ್ನ ವಿಪರೀತ ಮುದ್ದೆ ಮುದ್ದೆಯಾಗಿತ್ತು. ಇದ್ಯಾಕೆ ಹೀಗಿದೆ ಎಂದು ಕೇಳಿದ. ಅದಕ್ಕವಳು, ಅತ್ತೆ ಮಾವ ಊಟಕ್ಕೆ ಮುದ್ದೆ ಆದ್ರನೇ ಸಮಾಧಾನ ಅಂತ ಮಾತಾಡ್ಕೊತಿದ್ರು... ಅನ್ನ ಮುದ್ದೆ ಮುದ್ದೆಯಿದ್ದರೆ ಅವರಿಗೂ ತಿನ್ನಲು ಸರಾಗ. ಅದಕ್ಕೇ ಮಾಡಿದೆ ಎಂದಳು. ಅವರು ಹೇಳಿದ್ದು ರಾಗಿ ಮುದ್ದೆ ಅವಳು ಗ್ರಹಿಸಿದ್ದು ಮುದ್ದೆ ಅನ್ನ.

**-ಸಂದೇಶ್ ಎಚ್.ನಾಯ್ಕ್**

### ಬೆಸುಗೆ... ಬೆಸುಗೆ...

ಆ ದಿನ ವಾಟ್ಸಾಪಿನ ಪರದೆಯಲ್ಲಿ ಗೆಳೆಯನೊಬ್ಬನ ವಿವಾಹ ವಾರ್ಷಿಕೋತ್ಸವಕ್ಕೆ ಇತರ ಗೆಳೆಯರೆಲ್ಲರೂ ಶುಭಾಶಯ ಕೋರುತ್ತಿದ್ದರು. ಅವುಗಳಲ್ಲಿ ನನ್ನ ಪಾನಪ್ರಿಯ ಗೆಳೆಯನೊಬ್ಬ ತನ್ನ ವಾಟ್ಸಾ ಪಿನ ಗೋಡೆಯಲ್ಲಿ ಹ್ಯಾಪಿ ವೆಲ್ಡಿಂಗ್ ಆನಿವರ್ಸರಿ ಎಂದು ಬರೆದುಕೊಂಡಿದ್ದ. ಪದದೋಷವನ್ನು ತಿದ್ದಲು ಅವನಿಗೆ ಕರೆಮಾಡಿದ ನಾನು ಲೇ ಅದು ವೆಡ್ಡಿಂಗ್ ಅನಿವರ್ಸರಿ, ವೆಲ್ಡಿಂಗ್ ಅನಿವರ್ಸರಿ ಅಲ್ಲ. ಸರಿಮಾಡು ಅದನ್ನ ಎಂದೆ. ಅವನು, ಲೇ ಎರಡೂ ಒಂದಾ ಅಲ್ಲೇನಲೇ? ವೆಡ್ಡಿಂಗ್ ಅಂದ್ರೂ, ಬೆಸುಗಿ, ವೆಲ್ಡಿಂಗ್ ಅಂದ್ರೂ, ಬಿಸುಗಿ ಅಲ್ಲೇನ್? ಎಂದಾಗ ಆ ಕ್ಷಣಕ್ಕೆ ಅವನಲ್ಲಿ ದಿವ್ಯಜ್ಞಾನಿಯೊಬ್ಬನ ದರ್ಶನವಾದಂತಾಯಿತು.

**-ಮಹೇಶ್ವರ ಹುರುಕಡ್ಲಿ**

### ಪಲ್ಲಿ ಚಟ್ಟೆ... ಸ್ಪಾಂಜಿ ದೋಸ...

ಕಳೆದ ವಾರ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಗೆ ಹೋಗಿದ್ದೆವು. ಮುಳ ಬಾಗಿಲಿನಲ್ಲಿ ಹೊಟ್ಟೆ ಚುರು ಚುರು ಅನ್ನುತ್ತಿತ್ತು ಇರಲಿ ಎನ್ನುತ್ತಾ ಚಿತ್ತೂರಿನಲ್ಲಿ ಬಸ್ ಇಳಿದ ಕೂಡಲೆ ತಿಂಡಿ ಮಾಡಲು ಹೊಟೇಲಿಗೆ ಹೋಗಿ, ಮಸಾಲೆ ದೋಸೆ ಅರ್ಡರ್ ಮಾಡಿದೆವು ದೋಸೆ ಚಟ್ನಿಯ ಘಮ ಪಂಚೇಂದ್ರಿಯಗಳನ್ನೆಲ್ಲ ಬಡಿದೆಬ್ಬಿಸಿತು. ಸುಮ್ಮನಿರಲಾರದೆ ಇದು ಏನು ಚಟ್ನಿ? ಎಂದೆ. ಮಾಣಿಗೆ ಕನ್ನಡ ಅರ್ಥವಾಯಿತು ಆದರೆ ಉತ್ತರವನ್ನು ತೆಲುಗಿನಲ್ಲಿಯೇ ಇದಿ ಪಲ್ಲಿ ಚಟ್ನಿ ಎಂದ ತಮಿಳಿನ ಗೆಳತಿ ಮುಖ ಹುಳ್ಳಗೆ ಮಾಡಿದಳು. ಹೇಗ್ ಮಾಡ್ತೀರಿ? ಅಂದೆ. ಅದಕ್ಕವನು ಪಲ್ಲಿಲನು ಥಂಚಿ, ವೆಯಿಂಚೆ ಪುಡಿಛ್ ಏಸಿ.. ಎನ್ನುತ್ತಿದ್ದಂತೆ ವಾಕರಿಕೆ ಬರಲು ಶುರುವಾಯಿತು. ತಮಿಳಿನಲ್ಲಿ ಪಲ್ಲಿ ಅಂದರೆ ಹಲ್ಲಿ ಗೂಗಲಮ್ಮನ ಸಹಾಯ ಪಡೆದು ನೋಡಿದರೆ. ತೆಲುಗಲ್ಲಿ ಪಲ್ಲಿ ಅಂದರೆ ಕನ್ನಡದಲ್ಲಿ ನೆಲಗಡಲೆ ಅಂತಿತ್ತು. ಸದ್ಯ! ಬದುಕಿತು ಬಡ ಜೀವ ಅನ್ನುವ ಹಾಗಾಯಿತು. ಚೆನ್ನಾಗಿದೆ ಪಲ್ಲಿ ಚಿಟ್ಟಿ ಸ್ಟಾಂಜಿ ದೋಸೆ ಎಂದೆ.

**-ಸುಮಾವೀಣಾ**

### ಸ್ಟೇಟಸ್ ಕತೆಗಳು



ನನ್ನ ತಪ್ಪೇನು ಸುಲಭವಾಗಿ ಕೈಗೆಟ್ಟುತ್ತಿದ್ದದ್ದೇ, ಗೊತ್ತಿಲ್ಲ ನಾನು ತುಂಬಾ ಎತ್ತರ ಬೆಳೆಯುವುದಿಲ್ಲ, ನನ್ನ ಎಲೆಗಳು ಇಷ್ಟೊಂದು ಸುಗಂಧ ಪರಿಮಳವನ್ನು ಬೀರಬೇಕು ಅದನ್ನ ನೀವು ಒಗ್ಗರಣೆಗೆ ಹಾಕಿ ನಿಮ್ಮ ಅಡುಗೆಗೆ ಹಾಕಿ ಅದರ ಸ್ವಾದವನ್ನು ಹೆಚ್ಚಿಸಿಕೊಳ್ಳಬೇಕು ಅನ್ನುವ ಆಸೆ ನನ್ನಲ್ಲಿ ಇರಲಿಲ್ಲ, ನಾನು ನೈಜವಾಗಿ ಬೆಳೆದಿದ್ದೆ ನೀವು ಅದನ್ನು ಕಲಿತುಕೊಂಡರೆ ತಪ್ಪಿಲ್ಲ. ನನ್ನ ಬದುಕಿಗೊಂದು ಅರ್ಥ ಸಿಗುತ್ತದೆ. ಆದರೆ ನನ್ನ ಇಡೀ ಮರದಲ್ಲಿ ಎಲ್ಲಾ ಕಡೆಯೂ ಎಲೆಗಳನ್ನು ಬಿಟ್ಟಿದ್ದೇನೆ ಆದರೆ ನೀವು ನಿಮ್ಮ ಕೈಗೆಟುಕುವ ಎಲೆಗಳನ್ನು ಮಾತ್ರ ಕೊಯ್ದುಕೊಂಡು ನಿಮಗೆ ಬೇಕಾದ ಹಾಗೆ ಬಳಸ್ತೀರಿ, ಇನ್ನು ಬದಲಾಗಬೇಕು ಎಲ್ಲಾ ಕಡೆಗೂ ಕೈಗೆಟಕಿ ಬಿಟ್ಟರೆ ಎಲ್ಲಾ ಎಲೆಗಳನ್ನು ಕೊಂದು ಬಿಡುತ್ತೀರಿ, ಕೈಗೆಟುವುದನ್ನು ಮಾತ್ರ ಕೊಯ್ದುಕೊಳ್ತಾ ಇದ್ದರೆ ಉಳಿದದ್ದಾದರೂ ಹಾಗೆ ಉಳಿದುಕೊಂಡಿದೆಯಲ್ಲ ಅನ್ನುವ ನೆಮ್ಮದಿಯ ಲ್ಲಿರಬೇಕೋ ಎರಡರಲ್ಲಿ ಸರಿಯಾದ ಆಲೋಚನೆ ಯಾವುದು ಅಂತ ಗೊತ್ತಿಲ್ಲ ತಿಳಿದವರು ನೀವು ಹೇಳಿದರೆ ಅರ್ಥ ಮಾಡಿ ಕೊಳ್ಳುತ್ತೇನೆ. ಬೇವಿನ ಎಲೆಯ ಮಾತಿಗೆ ನಿರ್ಧಾರ ಏನು ಮಾಡಬೇಕು ಅಂತ ಗೊತ್ತಾಗ್ಲಿಲ್ಲ.

**- ಧೀರಜ್ ಬೆಳ್ಳಾರೆ**

## ಅರ್ಚಕನ ಬೆಲೆ.....



ಒಂದು ದಿನ ಒಂದು ಕೋರ್ಟಿನಲ್ಲಿ ಜಡ್ಜ್ ಮುಂದೆ ಒಂದು ಕೇಸ್ ಬಂದಿತ್ತು. ಒಬ್ಬ ಫಿರ್ಯಾದಿ ತಂದ ಕೇಸ್ ಹೀಗಿತ್ತು.

ಒಬ್ಬ ಮಾಮೂಲಿ ಅರ್ಚಕ, ದೇವಸ್ಥಾನ ದಲ್ಲಿ ಮಂಗಳಾರತಿ ತಟ್ಟೆಯ ಪುಡಿಗಾಸಿ ನಿಂದ ಬದುಕುವವನು, ಸರ್ಕಾರಕ್ಕೆ ಯಾವುದೇ ತೆರಿಗೆ ಕಟ್ಟದೇ ಕೆಲವೇ ಸಮ ಯದಲ್ಲಿ ಶ್ರೀಮಂತನಾದ ಎಂದರೆ ಅವನು ಅಕ್ರಮ ರೀತಿಯಲ್ಲಿ ಧನಸಂಪಾದನೆ ಮಾಡಿರಬೇಕು. ಆದ್ದರಿಂದ ಆ ಅರ್ಚಕನ ಅಕ್ರಮ ಸಂಪಾ ದನೆಯ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಶಿಕ್ಷೆ ವಿಧಿಸಬೇಕೆಂದು ಪ್ರಾರ್ಥನೆ.

ಜಡ್ಜ್ ಮೊದಲು ಆ ಅರ್ಚಕನನ್ನು ಪ್ರಶ್ನೆ ಮಾಡಿದರು ನಿಮ್ಮ ಮೇಲೆ ಅಕ್ರಮ ಧನ ಸಂಪಾದನೆಯ ಆರೋಪವಿದೆ. ನಿಮ್ಮ ಸಂಪಾದನೆ ಸಕ್ರಮವೋ ಅಕ್ರಮವೋ ಸ್ಪಷ್ಟ ಪಡಿಸಿ ಅರ್ಚಕರು ಹೇಳಿದರು ಅಯ್ಯಾ, ನನ್ನ ಬಳಿಯಿರುವ ಧನವೆಲ್ಲಾ ಸಕ್ರಮವಾಗಿ ನನಗೆ ಬಂದಿದ್ದು, ಜಡ್ಜ್ ಸವಾಲು ಹಾಕಿದರು ಸಾಧಾರಣ ಅರ್ಚಕ ವೃತ್ತಿಯಿಂದ ಬದುಕು ತ್ತಿರುವ ನೀವುಗಳಿಸಿದ್ದೆಲ್ಲಾ ಸಕ್ರಮವಾಗಿ ಎಂದು ಹೇಗೆ ನಂಬುವುದು?

ಅರ್ಚಕರು ಹೇಳುತ್ತಾರೆ ಅಯ್ಯಾ, ಒಂದು ದಿನ ನಾನು ಊರಿನ ಕೆರೆಯ ಬಳಿ ಸಂಧ್ಯಾವಂದನೆ ಯಲ್ಲಿರು ವಾಗ ಸಂಜೆಯ ಮಬ್ಬು ಬೆಳ ಕಿನಲ್ಲಿ ಯಾರೋ ಇಬ್ಬರು ಕೆರೆ ಯಂಚಿನಲ್ಲಿ ನಿಂತು ಅಳು ವುದು ಕೇಳಿಸಿ ನಾನು ಅಲ್ಲಿಗೆ ಧಾವಿಸಿದೆ. ದಂಪತಿಗಳು ಇಬ್ಬರು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿ ಕೊಳ್ಳು ವುದರಲ್ಲಿದ್ದರು ಎಂದು ತಿಳಿಯಿತು. ನಾನು ಅವರು ಮಾಡುತ್ತಿರುವುದು ಮಹಾ ಪಾಪದ ಕೆಲಸ, ಹುಟ್ಟಿಸಿದ ದೇವರು ಇಂಥಹ ಹೇಡಿತ ನವನ್ನು ಮೆಚ್ಚುವುದಿಲ್ಲ ಮತ್ತು ದೇವರು ಹುಟ್ಟಿಸಿದ ಮೇಲೆ ನಿಮ್ಮನ್ನು ಕರೆದುಕೊಳ್ಳುವ ಅಧಿಕಾ ರವೂ ಅವನಿಗೇ ಇದೆ. ಅವನು ಕರೆದಾಗ ಹೋಗಬೇಕು ಅಷ್ಟೇ. ಖಂಡಿತಾ ಭಗವಂತನ ಸೃಷ್ಟಿಯ ಯಾವ ಜೀವಿಗೂ ಪ್ರಾಣ ಕಳೆದು ಕೊಳ್ಳುವ ಅಧಿಕಾರವಿಲ್ಲಾ ಮತ್ತು ಅದು ಮಹಾಪಾಪ ಕೂಡಾ. ದಯ ವಿಟ್ಟು ಆತ್ಮಹತ್ಯೆಯ ಯೋಚನೆ ಬಿಟ್ಟು ಮನೆಗೆ ಹೋಗಿ ಪರಸ್ಪರರ ತಪ್ಪುಗಳನ್ನು ಮನ್ನಿಸಿಕೊಂಡು ಅನ್ಯೋನ್ಯವಾಗಿ ಪ್ರೀತಿ ಪ್ರೇಯದಿಂದ ಬಾಳಿರಿ ಖಂಡಿತವಾಗಿಯೂ ನಿಮಗೆ ಕೆಲವು ದಿನಗಳಲ್ಲಿ ಒಳ್ಳೆಯದಾಗುತ್ತದೆ ಎಂದು ಸಮಾಧಾನ ಮಾಡಿ ವಾಪಸ್ ಕಳುಹಿಸಿದೆ.

ನನ್ನ ಮಾತಿನ ಮೇಲೆ ವಿಶ್ವಾಸವಿಟ್ಟು ಆ ದಂಪತಿಗಳು ಮನೆಗೆ ಹಿಂತಿರುಗಿದರು. ಕೆಲವು ತಿಂಗಳುಗಳ ನಂತರ ಆ ದಂಪತಿಗಳು ನನ್ನ ಬಳಿ ಬಂದರು. ಈ ಬಾರಿ ಸಂತೋಷ ಉತ್ಸಾಹಗಳಿಂದ ಇದ್ದರು. ಕಾರಣವೇನೆಂದರೆ ಅವರಿಗೆವಂಶೋದ್ಧಾರಕನೊಬ್ಬನು ಹುಟ್ಟುವ ಸೂಚನೆ ಇತ್ತು. ಮಕ್ಕಳಾಗುವು ದಿಲ್ಲವೆಂಬ ಜಿಗುಪ್ಸೆಯಿಂದ ಅವರು ತಮ್ಮ ಆಸ್ತಿ, ಧನ ಕನಕಾದಿಗಳನ್ನೆಲ್ಲಾ ದೇವಾಲಯಕ್ಕೆ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗುವುದರಲ್ಲಿದ್ದರು. ನಾನು ಅವರಿಗೆ ಸಮಾಧಾನ ಹೇಳಿ ಕಳು ಹಿಸಿದ ಮೇಲೆ ಅವರು ಪುನಃ ಸಾಂಸಾರಿಕ ಜೀವನ ನಡೆಸಲು ಉದ್ಯಮಿಸಿದ್ದರು. ದೇವರ ದಯದಿಂದ ಅವರಿಗೆ ಮಗುವಿನ ಯೋಗ ಬಂದಿತ್ತು. ಅವರು ನನಗೆ ಕೃತಜ್ಞತೆಗ ಳನ್ನು ಹೇಳಿ ಸ್ವಲ್ಪ ಧನವನ್ನು ನಾನು ಎಷ್ಟೋ ಬೇಡವೆಂದರು ಕೇಳದೆ ಕೊಟ್ಟು ಹೋದರು.

ಇನ್ನೂ ಕೆಲವು ತಿಂಗಳುಗಳ ನಂತರ ಆ ದಂಪತಿಗಳು ಪುನಃ ಬಂದು ತಮಗೆ ಪುತ್ರರತ್ನ ಪ್ರಾಪ್ತಿಯಾದ ಸಂತೋಷದ ವಿಷಯ ತಿಳಿಸಿ ಅವತ್ತು ನೀವು ನಮ್ಮನ್ನು ಉಳಿಸಿ ದೇವರು ಒಳ್ಳೆಯದು ಮಾಡುತ್ತಾನೆ ಎಂದು ಆಶೀ ರ್ವದಿಸಿದ್ದಿರಿ ಸ್ವಾಮಿ. ನಿಮ್ಮ ಮಾತು ಇಂದು ನಿಜ ವಾಯಿತು ಎಂದು ಹೇಳಿ ಇನ್ನೂ ಒಂದಿಷ್ಟು ಧನವನ್ನು ಅರ್ಪಿಸಿ ಹೋದರು. ಅವರ ಕೃತಜ್ಞತಾ ಪೂರ್ವಕ ಕಾಣಿಕೆಗಳಿಂದ ನನ್ನ ಬಡತನ ನೀಗಿಸಿಕೊಂಡೆ.

ಕೆಲವು ವರ್ಷಗಳ ನಂತರ ಪುನಃ ಆ ದಂಪತಿಗಳು ತಮ್ಮ ಮಗನೊಂದಿಗೆ ಬಂದು ಅವನಿಗೆ ಅಕ್ಷರಾಭ್ಯಾಸ ಮಾಡಲು ನಾಂದಿ ಹಾಕಬೇಕೆಂದು ಕೋರಿದರು. ಅವರ ಆಶ ಯದಂತೆ ಅವನಿಗೆ ಅಕ್ಷರಾಭ್ಯಾಸ ಪ್ರಾರಂಭಿಸಿ ಮುಂದೆ ದೊಡ್ಡ ವ್ಯಕ್ತಿಯಾಗಿ ಸಮಾಜಕ್ಕೆ ಅನುಕೂಲವಾಗಿ ನಿಮಗೆ ಕೀರ್ತಿ ತರಲಿ ಎಂದು ಆಶೀರ್ವದಿಸಿದೆ. ಆಗ ಕೃತಜ್ಞತಾ ಪೂರ್ವಕವಾಗಿ ಮತ್ತೆ ಒಂದಿಷ್ಟು ಧನ ಕನಕಗಳನ್ನು ಕಾಣಿಕೆಯಾಗಿ ನೀಡಿದರು.

ಎಷ್ಟೋ ವರ್ಷಗಳ ನಂತರ ಅವರ ಮಗ ಓದಿ ಬರೆದು ವಿದ್ಯಾವಂತನಾಗಿ ತಮ್ಮಂತೆ ನ್ಯಾಯಾ ಧೀಶನಾದನೆಂದು ತಿಳಿದುಬಂತು. ಆ ದಂಪತಿಗಳು ಕಾಲವಾದರೆಂದೂ ತಿಳಿಯಿತು. ಆ ಮಗ ಎಲ್ಲಿದ್ದಾನೋ ಏನೋ. ಎಲ್ಲಿದ್ದರೂ ಅವನ ತಂದೆ-ತಾಯಿಗಳ ಆತ್ಮಕ್ಕೆ ಶಾಂತಿ ತಂದು ಕೀರ್ತಿ ಗಳಿಸೇ ಇರುತ್ತಾನೆ. ಅಯ್ಯಾ ಹೀಗೆ ನನಗೆ ಸಂದ ಅವರ ಧನ ಸಹಾಯದಿಂದಇಷ್ಟರಮಟ್ಟಿಗೆ ಬದುಕಿದ್ದೇನೆ.

ಈಗ ನೀವೇ ನಿರ್ಧರಿಸಬೇಕು, ನಾನು ಸಂಪಾದಿಸಿದ್ದು ಅಕ್ರಮವೋ ಸಕ್ರಮವೋ ಎಂದು ಅರ್ಚಕರು ತಮ್ಮ ಹೇಳಿಕೆಯನ್ನು ಮುಗಿಸಿದರು. ಜಡ್ಜ್ ಕಣ್ಣುಮುಚ್ಚಿಕೊಂಡು ಸ್ವಲ್ಪ ಹೊತ್ತು ಧ್ಯಾನಿಸಿ ನಂತರ ತಮ್ಮ ಅಭಿ ಪ್ರಾಯವನ್ನು ತಿಳಿಸಿದರು.

ಆ ದಿನ ನೀವು ಆ ದಂಪತಿಗಳ ಜೀವ ಉಳಿಸಿಲ್ಲದಿದ್ದರೆ ಅವರ ಮಗ ಉನ್ನತ ಸ್ಥಾನಕ್ಕೆ ಏರುತ್ತಿರಲಿಲ್ಲ. ತಮ್ಮ ಜೀವ ಉಳಿಸಿ ತಮ್ಮ ಅಭ್ಯುದಯಕ್ಕೆ ಕಾರಣರಾದ ನಿಮಗೆ ಅವರು ಕೃತಜ್ಞತಾ ಪೂರ್ವಕವಾಗಿ ನೀಡಿದ ಧನ ಅಕ್ರ ಮವೆನಿಸಿಕೊಳ್ಳುವುದಿಲ್ಲ. ಅದು ಸಕ್ರಮವೇ ಎಂದು ಹೇಳಿ ಆ ಕೇಸು ವಜಾ ಮಾಡಿದರು.

ನಂತರ ಅರ್ಚಕರನ್ನು ಕೇಳಿದರು ಆ ದಂಪತಿಗಳ ಹೆಸರು ನೆನಪಿದೆಯೇ?. ಅರ್ಚ ಕರು ಆ ಧನವಂತನ ಹೆಸರನ್ನು ಹೇಳಿದ ಕೂಡಲೇ ಜಡ್ಜ್ ತಮ್ಮ ಆಸನ ಬಿಟ್ಟು ಕೆಳ ಗಿಳಿದು ಬಂದು ಅದು ಕೋರ್ಟ್ ರೂಂ ಎನ್ನುವುದನ್ನೂ ಲೆಕ್ಕಿಸದೆ ಅರ್ಚಕರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ನೀವು ಅಕ್ಷರಾಭ್ಯಾಸ ಮಾಡಿಸಿದ ಬಾಲಕ ನಾನೇ. ಆ ದಂಪತಿಗಳು ನನ್ನ ತಂದೆ ತಾಯಿಗಳು. ನಿಮ್ಮ ಆಶೀರ್ವಾದ ನನಗೂ ಇರಲಿ ಎಂದು ಭಾವುಕರಾಗಿ ನುಡಿದು ಬಾಗಿಲತನಕ ಬಂದು ಅವರನ್ನು ಬೀಳ್ಕೊಟ್ಟರು.

**-ಸಂಪಿಗೆ ವಾಸು, ಬಳ್ಳಾರಿ**

## ಗಡಿ ಇನ್ನಷ್ಟು ಭದ್ರವಾಗಲಿ

ಸ್ವಾತಂತ್ರ್ಯ ಬಂದಾಗಿನಿಂದಲೂ ಭಾರತಕ್ಕೆ ಅಕ್ಕಪಕ್ಕ ದೇಶಗಳ ಒಳ ನುಸುಳುವಿಕೆ ಒಂದು ಶಾಪವಾಗಿ ಪರಿ ಣಮಿಸಿದೆ ಎಂದರೆ ತಪ್ಪಾಗಲಾರದು. ಅದರಲ್ಲೂ ಬಾಂಗ್ಲಾ ಮತ್ತು ಮ್ಯಾನ್ಮಾರ್ ನಿಂದ ಬಂದವರು ಇಲ್ಲಿ ದೇಶದ ಭದ್ರತೆಗೂ ಸವಾಲೆಸೆದು ಕುಳಿತಿದ್ದಾರೆ ಎಂಬುದು ವಿಷಾದ ನೀಯವೇ ಹೌದು. ಹಿಂದಿನಿಂದಲೂ ವೋಟ್ ಬ್ಯಾಂಕ್ ರಾಜಕೀಯಕ್ಕೆ ಬಿದ್ದು, ಅಕ್ಕಪಕ್ಕದ ದೇಶಗಳಿಂದ ಬಂದ ವರಿಗೆ ಗುರುತಿನ ಚೀಟಿ ಕೊಟ್ಟು ಇಲ್ಲೇ ಇರುವಂತೆ ಮಾಡಿದ ರಾಜಕೀಯ ಪಕ್ಷಗಳ ನಡೆಯೂ ಅಪರಾಧವೇ.

ಇತ್ತೀಚೆಗಷ್ಟೇ ಮುಗಿದ ಸಂಸತ್ ಅಧಿವೇಶನದ ವೇಳೆಯಲ್ಲಿ ಕೇಂದ್ರ ಸರ್ಕಾರ 2014ರ ನಂತರದ ಈ ಒಳನುಸುಳುವಿಕೆ ಮತ್ತು ಇದನ್ನು ತಡೆದ ಬಗ್ಗೆ ಒಂದು ದತ್ತಾಂಶವನ್ನು ಒಳಗೊಂಡ ಮಾಹಿತಿ ನೀಡಿದೆ. ಅದರ ಪ್ರಕಾರ, 2014ರಿಂದ ಮೊದಲ್ಗೊಂಡು 2025ರ ನವೆಂಬರ್ ವರೆಗೆ ದೇಶದಲ್ಲಿ ಒಳನುಸುಳಿದ ಸುಮಾರು 25 ಸಾವಿರ ಮಂದಿಯನ್ನು ಬಂಧಿಸಲಾಗಿದೆ. ಹಾಗೆಯೇ, ಇದೇ ಅವಧಿಯಲ್ಲಿ 9,700 ಬಾರಿ ಒಳನುಸುಳುವಿಕೆ ಯತ್ನಗಳು ನಡೆದಿದೆ ಎಂದು ಈ ವರದಿ ಹೇಳಿದೆ.

ಬಾಂಗ್ಲಾದೇಶ, ಮ್ಯಾನ್ಮಾರ್ ಮತ್ತು ಪಾಕಿಸ್ತಾನದ ಕಡೆಗಳಿಂದ ಇಂಥಹ ಪ್ರಯತ್ನಗಳು ಹೆಚ್ಚಾಗಿವೆ. ಭೂತಾನ್ ಮತ್ತು ನೇಪಾಳದ ಕಡೆಗಳಿಂದಲೂ ಇಂಥಹ ಯತ್ನಗಳಾಗಿದ್ದರೂ ಅವು ಕಡಿಮೆ. ಆದರೆ ಚೀನಾದಿಂದ್ಯೆದುವ ರೆಗೆ ಒಂದೇ ಒಂದು ಯತ್ನವೂ ನಡೆ ದಿಲ್ಲ ಎಂದು ಹೇಳುತ್ತಿದೆ ಈ ವರದಿ.



2014ರಿಂದ ಇಲ್ಲಿಯವರೆಗೆ ಬಾಂಗ್ಲಾ ದೇಶದಿಂದಲೇ ಬಹಳಷ್ಟು ಒಳ ನುಸುಳುವಿಕೆ ಯಾಗಿದೆ. ಅಂದರೆ, 8,632 ಪ್ರಯತ್ನಗಳು ಮತ್ತು 21,407 ಮಂದಿಯನ್ನು ಬಂಧಿಸಲಾಗಿದೆ. ಅತ್ತ ಪಾಕ್ ಗಡಿಯಲ್ಲಿ 457 ಪ್ರಯತ್ನಗಳು ಮತ್ತು 605 ಮಂದಿಯನ್ನು ಬಂಧಿಸಲಾಗಿದೆ. ಮ್ಯಾನ್ಮಾರ್ ನಿಂದ 393 ಪ್ರಯತ್ನಗಳು ಹಾಗೂ 2,603 ಮಂದಿಯನ್ನು ಬಂಧಿಸಲಾಗಿದೆ.

ಈ ಅಂಕಿ ಅಂಶವನ್ನು ಗಮನಿಸಿದರೆ ಭಾರತಕ್ಕೆ ನುಗ್ಗಲು ಬಾಂಗ್ಲಾ ಮತ್ತು ಮ್ಯಾನ್ಮಾರ್‌ನ ಕಡೆಯಿಂದ ಬಹಳಷ್ಟು ಪ್ರಯತ್ನಗಳಾಗಿದೆ. ಗಡಿಯಲ್ಲಿ ಸಿಲುಕದೇ ದೇಶದೊಳಗೆ ನುಗ್ಗಿದವರು ಅದೆಷ್ಟೋ ಮಂದಿ ಇದುವರೆಗೆ ಲೆಕ್ಕಕ್ಕೇ ಸಿಕ್ಕಿಲ್ಲ ಎಂಬುದೂ ವಿಷಾದನೀಯ. ಮ್ಯಾನ್ಮಾರ್ ಗಡಿ ಯಲ್ಲಿ ಬೇಲಿ ಹಾಕುವ ಕೆಲಸ ಬಹಳಷ್ಟಿದೆ. ಅಂದರೆ, ಇದುವರೆಗೆ 1,643 ಕಿ.ಮೀ ನಲ್ಲಿ ಬೇಲಿ ಹಾಕಿರುವುದು ಕೇವಲ 9.21 ಕಿ.ಮೀ ಗೆ ಮಾತ್ರ. ಅತ್ತ ಬಾಂಗ್ಲಾದ ಗಡಿಯಲ್ಲೂ ಪ.ಬಂಗಾಳದ ಸರ್ಕಾರದ ಮೊಂಡಾಟದಿಂದ ಬೇಲಿ ಹಾಕುವ ಕಾರ್ಯ ಶೇ.20 ರಷ್ಟು ಬಾಕಿ ಉಳಿದಿದೆ. ಪಾಕಿಸ್ತಾನದ ಜೊತೆಗಿನ ಗಡಿಯಲ್ಲಿ ಒಟ್ಟಾರೆ 2,289 ಕಿ.ಮೀ ನಲ್ಲಿ 2,135 ಕಿ.ಮೀ ಗೆ ಬೇಲಿ ಹಾಕಿದ್ದರೆ, ಉಳಿದ 154 ಕಿ. ಮೀ ಗೆ ಇನ್ನೂ ಬೇಲಿ ಹಾಕಬೇಕಿದೆ.

ಸದ್ಯ ಬಾಂಗ್ಲಾ ಸ್ಥಿತಿ ಇನ್ನಷ್ಟು ವಿಷಮಕ್ಕೆ ತಿರುಗಿದ್ದು, ಅಲ್ಲಿಂದ ಇಲ್ಲಿಗೆ ಒಳನುಸುಳುವವರ ಸಂಖ್ಯೆ ಹೆಚ್ಚಾಗಬಹುದು. ಹೀಗಾಗಿ ಪ.ಬಂಗಾಳ ಸರ್ಕಾರ ರಾಜಕೀಯ ಮತ್ತು ವೋಟ್ ಬ್ಯಾಂಕ್ ರಾಜಕೀಯ ಬದಿಗಿಟ್ಟು ಬೇಲಿ ಹಾಕಲು ಭೂಮಿ ಒದಗಿಸಬೇಕು. ಹಾಗೆಯೇ ಮ್ಯಾನ್ಮಾರ್ ಜೊತೆಗಿನ ಗಡಿಗೆ ಶೀಘ್ರದಲ್ಲಿ ಬೇಲಿ ಹಾಕುವ ಕ್ರಮವಾಗಬೇಕು.

## ಉಡುಪಿ ಪೇಜಾವರ ಮಠದ ಆಚಾರ-ವಿಚಾರ

ಉಡುಪಿಯ ಪೇಜಾವರ ಮಠದ ಶ್ರೀ ವಿಜಯಧ್ವಜ ಜ್ಞಾನಪೀಠ (ರಿ) ವತಿಯಿಂದ ಸುಮಾರು 20 ವರ್ಷಗಳ ಕಾಲ ಪ್ರಕಟವಾಗುತ್ತಿದ್ದ ಮಾಸಪತ್ರಿಕೆಯಾಗಿದೆ ಆಚಾರ -ವಿಚಾರ.

2000ನೇ ಇಸವಿಯಲ್ಲಿ ಪಾಕ್ಷಿಕ ಪತ್ರಿಕೆಯಾಗಿ ಆರಂಭವಾದ ಆಚಾರ-ವಿಚಾರ ನಿರಂತರವಾಗಿ ಪ್ರಕಟಗೊಳ್ಳುತ್ತಾ ಕೊನೆಗೆ ಕೊರೋನಾ ಲಾಕ್‌ಡೌನ್ ಪರಿಣಾಮವಾಗಿ 2020ರಲ್ಲಿ ಸ್ಥಗಿತಗೊಂಡಿತು.

ಪೇಜಾವರ ಮಠದ ಪರವಾಗಿ ಎನ್ .ಭರತೀಶ ಬಳ್ಳಾಲ್ ಪ್ರಕಾಶಕರಾಗಿದ್ದರು. ಪಿ.ಮಾಧವ ಐತಾಳ್ ಮುದ್ರಕರಾಗಿದ್ದರು. ಪೂರ್ವಾರ್ಧದ ವರ್ಷಗಳಲ್ಲಿ ಕಿನ್ನಿಮೂಲ್ಕಿಯ ಶ್ರೀನಿಧಿ ಪ್ರಿಂಟರ್ಸ್‌ನಲ್ಲಿ ಪತ್ರಿಕೆ ಮುದ್ರಣ ವಾಗುತ್ತಿದ್ದರೆ, ಉತ್ತರಾರ್ಧ ವರ್ಷಗಳಲ್ಲಿ ಸೂರ್ಯ ಆಫ್ ಸೆಟ್ ಪ್ರಿಂಟರ್ಸ್‌ನಲ್ಲಿ ಮುದ್ರಣವಾಗುತ್ತಿತ್ತು.




ಪುಸ್ತಕ ರೂಪದಲ್ಲಿ 40 ಪುಟಗಳಲ್ಲಿ ಪ್ರಕಟಗೊಳ್ಳುತ್ತಿದ್ದ ಆಚಾರ-ವಿಚಾರ ಪತ್ರಿಕೆಯ ಬಿಡಿ ಸಂಚಿಕೆಗೆ ಪೂರ್ವಾರ್ಧದ ವರ್ಷಗಳಲ್ಲಿ ಬೆಲೆ ಐದು ರೂಪಾಯಿಗಳಾಗಿತ್ತು. ಮಧ್ಯದ ಅವಧಿ ಯಲ್ಲಿ ಎಂಟು ರೂಪಾಯಿಗಳಾಗಿತ್ತು. ಕೊನೆಗೆ 15 ರೂಪಾಯಿಯಾಗಿತ್ತು. ವಾರ್ಷಿಕ ಚಂದಾ ಮೊತ್ತ ಆರಂಭದ ವರ್ಷಗಳಲ್ಲಿ 50 ರೂಪಾಯಿ, ಮದ್ಯೆ ನೂರು ರೂಪಾಯಿಗಳಾಗಿತ್ತು. ನಂತರ 150 ರೂಪಾಯಿಗಳಾಗಿತ್ತು. ಕೊನೆಗೆ 200 ರೂಪಾಯಿಗಳಾಗಿತ್ತು. ಆಜೀವ ಸದಸ್ಯತ್ವ ಮೊತ್ತ 1000 ರೂಪಾಯಿಯಾಗಿತ್ತು. ಪೋಷಕತ್ವ ಮೊತ್ತ ಆರಂಭದಲ್ಲಿ 2000 ರೂಪಾಯಿಗಳಾಗಿತ್ತು. ಕೊನೆಗೆ ಈ ಮೊತ್ತವನ್ನು 3000 ರೂಪಾಯಿಗಳಿಗೆ ಹೆಚ್ಚಿಸಲಾಗಿತ್ತು.

ಪೇಜಾವರ ಮಠದ ಅಂದಿನ ಹಿರಿಯ ಯತಿಗಳಾಗಿದ್ದ ವಿಶ್ವೇಶತೀರ್ಥ ಶ್ರೀಪಾದರು ಮಹಾ ಪೋಷಕರಾಗಿದ್ದರು. ಕಿರಿಯ ಯತಿ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಸಂಚಾಲಕರಾಗಿದ್ದರು. ವಿದ್ಯಾವಲ್ಲಭ ತೀರ್ಥ ಶ್ರೀಪಾದರು ನಿರ್ವಾಹಕರಾಗಿದ್ದರು. ರಾಘವೇಂದ್ರ, ಆಚಾರ್ಯ, ಪ್ರದೀಪ ಕಲ್ಕೂರ, ವಿಶ್ವೇಶ ಭಟ್ ಹಾಗೂ ನಾಗರಾಜ ಬಲ್ಲಾಳ್ ಪೋಷಕ ಮಂಡಳಿ ಸದಸ್ಯರಾಗಿದ್ದರು. ವಿ.ಹರಿದಾಸ ಉಪಾಧ್ಯಾಯ, ವಿ.ಪಿ.ಲಕ್ಷ್ಮೀನಾರಾಯಣ ಶರ್ಮ, ವಿ.ಸಗ್ರಿ ರಾಘವೇಂದ್ರ ಉಪಾಧ್ಯಾಯ, ವಿ.ಕೆ.ವಾದಿರಾಜ ಉಪಾಧ್ಯಾಯ ಹಾಗೂ ದಾಮೋದರ ಐತಾಳ ಸಲಹಾ ಮಂಡಳಿ ಸದಸ್ಯರಾಗಿದ್ದರು.

ಡಾ.ಹೆಚ್.ಕೆ.ಸುರೇಶ ಆಚಾರ್ಯ ಪ್ರಧಾನ ಸಂಪಾದಕರಾಗಿದ್ದರು. ವಿ. ಅಮೃತೇಶ ಡಿ. ಎಸ್. ಹಾಗೂ ವಿ.ವಿ. ಸತ್ಯನಾರಾಯಣ ಆಚಾರ್ಯ ಸಹ ಸಂಪಾದಕರಾಗಿದ್ದರು. 2014ರ ನಂತರ ಅಮೃತೇಶರ ಬದಲು ಜಲಂಚಾರು ರಘುಪತಿ ತಂತ್ರಿ ಸಹ ಸಂಪಾದಕ ರಾಗಿದ್ದರು.

2000ನೇ ಇಸವಿಯ ಆರಂಭದ ಸಂಚಿಕೆಯಿಂದ ಮೊದಲ್ಗೊಂಡು 2009ರ ವರೆಗೆ ಯು. ಆರ್.ಮಧುಸೂದನ ಸಾಮಗ ಮುದ್ರಣ, ಪ್ರಸರಣ ಇತ್ಯಾದಿ ನಿರ್ವಹಿಸುತ್ತಿದ್ದರು. ಅವರ ನಂತರ ಮೈಲಾರ ರಾವ್ ಕುಲಕರ್ಣಿ ನಿರ್ವಹಿಸುತ್ತಿದ್ದರು. ಪತ್ರಿಕೆಯಲ್ಲಿ ಪೇಜಾವರ ಮಠದ ಹಿರಿಯ ಯತಿಗಳಾಗಿದ್ದ ವಿಶ್ವೇಶ ತೀರ್ಥರ ಶ್ರೀನುಡಿ ಮತ್ತು ಪೇಜಾವರ ಕಿರಿಯ ಯತಿಗಳಾದ ವಿಶ್ವಪ್ರಸನ್ನ ತೀರ್ಥರ ಶ್ರೀಮುಖ ಖಾಯಂ ಅಂಕಣಗಳಾಗಿತ್ತು. ಶ್ರೀ ಭಂಡಾರಕೇರಿ ಮಠದ ವಿದ್ಯೇಶ ತೀರ್ಥರು, ದಂಡಿ ಕಾವ್ಯ ನಾಮಾಂಕಿತರ ಲೇಖನ, ಉಡುಪಿ ಶ್ರೀಮನ್ಮಧ್ವ ಸಿದ್ಧಾಂತ ಪ್ರಬೋಧಿನಿ ಸಂಸ್ಕೃತ ಮಹಾ ಪಾಠಶಾಲೆಯ ಪ್ರಾಂಶುಪಾಲರಾದ ಡಾ.ಹೆಚ್.ಕೆ.ಸುರೇಶ ಆಚಾರ್ಯ, ಪ್ರಾಧ್ಯಾಪಕರಾದ ಸಗ್ರಿ ರಾಘವೇಂದ್ರ ಉಪಾಧ್ಯಾಯ, ಅಮೃತೇಶ ಡಿ.ಎಸ್., ಡಿ.ಶಿವಪ್ರಸಾದ ತಂತ್ರಿ, ವಿ.ಸತ್ಯನಾರಾಯಣ ಆಚಾರ್ಯ, ಚಿತ್ರಾಪುರ ಗೋಪಾಲಕೃಷ್ಣ ಆಚಾರ್ಯ ಕುಳಾಯಿ, ಅವಿಲಃ ಉಡುಪಿ, ಶುಚಿಷತ್, ಕಡಿಯಾಳಿ ವಾದಿರಾಜ ಉಪಾಧ್ಯಾಯ, ಕೊರಂಗ್ರಪಾಡಿ ಕುಮಾರಗುರು ತಂತ್ರಿ, ಬೆಂಗಳೂರಿನ ಜಿ. ಹೆಚ್.ಜಗನ್ನಾಥ್, ಮಣಿಪಾಲದ ಮುನಿಯಾಲು ಆಯುರ್ವೇದ ಮಹಾ ವಿದ್ಯಾಲಯದ ಉಪನ್ಯಾಸಕರಾದ ಡಾ.ಡಿ.ಗುರುರಾಜ ತಂತ್ರಿ, ಹೆರ್ಗ ಹರಿಪ್ರಸಾದ ಭಟ್, ಸತ್ಯನಾರಾಯಣ ವೆಂಕಟರಾವ್, ಡಾ.ಕಡಂದಲೆ ಗಣಪತಿ ಭಟ್, ಎಸ್.ವೇದವ್ಯಾಸಾಚಾರ್ಯ ಮೊದಲಾದ ವಿದ್ವಾಂಸರು ಪತ್ರಿಕೆಯ ಖಾಯಂ ಬರೆಹಗಾರರಾಗಿದ್ದರು.

ಶ್ರುತಿ, ಸ್ಮೃತಿ, ಉಪನಿಷತ್ತು, ಪುರಾಣ ಸಹಿತ ವಿವಿಧ ಧಾರ್ಮಿಕ ಗ್ರಂಥಗಳ ವ್ಯಾಖ್ಯಾನಗಳು, ಸಂಬಂಧಿತ ಲೇಖನಗಳು ಪತ್ರಿಕೆಯಲ್ಲಿ ಪ್ರಕ ಟವಾಗುತ್ತಿದ್ದುವು. ರಾಮಕೃಷ್ಣ ಜೋಷಿಯವರ ಪದಬಂಧವೂ ಇತ್ತು.

**ಶ್ರೀರಾಮ ದಿವಾಣ**

# ಸಕಲೇಶಪುರದಲ್ಲಿ ಸದ್ದಿಲ್ಲದೆ ಶುರುವಾಗಿದೆ ಎಸ್ಐಆರ್

## ಹಾರಿಕೆ ಉತ್ತರ ನೀಡುತ್ತಿರುವ ಬಿಎಲ್ಒಗಳು | ಮತದಾರರ ಗೊಂದಲ

• ಪ್ರಜೋದಯ ವರದಿ

**ಸಕಲೇಶಪುರ:** ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆ ಆರಂಭಿಸುವ ಕುರಿತು ಚುನಾವಣಾ ಆಯೋಗ ಅಧಿ ಕೃತ ಸೂಚನೆ ನೀಡುವ ಮೊದಲೇ ತಾಲ್ಲೂಕಿನಲ್ಲಿ ಕಾರ್ಯಕ್ಕೆ ಚಾಲನೆ ನೀಡಿರುವುದು ಚರ್ಚೆಗೆ ಗ್ರಾಸವಾಗಿದೆ.

ಸಕಲೇಶಪುರ ಕ್ಷೇತ್ರದಲ್ಲಿ ಎಸ್ಐಆರ್ ಪ್ರಕ್ರಿಯೆ ಸದ್ದು-ಗದ್ದಲವಿಲ್ಲದೆ ನಡೆ ಯುತ್ತಿರು ವುದರಿಂದ ಮತದಾರರಲ್ಲಿ ಗೊಂದಲ ಉಂಟಾ ಗಿದೆ. 2002ರ ಮೂಲ ಮತದಾರರ ಪಟ್ಟಿಗೆ ಮ್ಯಾಪ್ ಮಾಡುವ ಮೂಲಕ ಪರಿಷ್ಕರಣೆ ನಡೆ ಸಲಾಗುತ್ತಿದ್ದು, ಈ ಬಗ್ಗೆ ಚುನಾವಣಾ ಆಯೋ ಗವಾಗಲಿ, ತಾಲ್ಲೂಕು ಆಡಳಿತವಾಗಲಿ ಸ್ಪಷ್ಟ ಮಾಹಿತಿ ಅಥವಾ ಸಾರ್ವಜನಿಕ ಜಾಗೃತಿ ಕಾರ್ಯ ಕೈಗೊಂಡಿಲ್ಲವೆಂಬ ಆರೋಪ ಕೇಳಿಬರುತ್ತಿದೆ.

ಬಿಎಲ್ಒಗಳನ್ನು ಸಂಪರ್ಕಿಸಿದಾಗ, ನಿಮ್ಮ ವಾರ್ಡ್ ನಮಗೆ ಸೇರಿಲ್ಲ, ಬೇರೆ ಬಿಎಲ್ಒ ನೇಮಕ ವಾಗಿದೆ ಎಂದು ಹೇಳುತ್ತಿದ್ದಾರೆ. ಸಂಬಂಧಿಸಿದ ಬಿಎಲ್ಒಗಳು ಹಾರಿಕೆಯ ಉತ್ತರ ನೀಡುತ್ತಿದ್ದಾರೆಂದು ಮತದಾರರು ಆರೋಪಿಸಿ ದ್ದಾರೆ. ಈ ಕುರಿತು ಪ್ರತಿಕ್ರಿಯೆಗೆ ಪ್ರಯತ್ನಿಸಿದರೂ ತಹಶೀಲ್ದಾರ್ ಸುಪ್ರಿತಾ ಕರೆ ಸ್ವೀಕರಿಸಲಿಲ್ಲ.




**ಎಸ್ಐಆರ್ ಎಂದರೇನು**

ಭಾರತೀಯ ಚುನಾವಣಾ ಆಯೋಗ ನಡೆಸುವ ಎಸ್ಐಆರ್ ಎಂದರೆ ಮತ ದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ. ಈ ಪ್ರಕ್ರಿಯೆಯ ಮೂಲಕ ಮರಣ ಹೊಂದಿದವರು, ಎರಡು ಕಡೆಗಳಲ್ಲಿ ನೋಂದಾಯಿತರಾದವರು, ಸ್ಥಳಾಂತರ ಗೊಂಡವರು ಹಾಗು ಅರ್ಹರಲ್ಲದ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗುತ್ತದೆ. ಮತದಾರರ ಪಟ್ಟಿಯ ನಿಖರತೆ ಹೆಚ್ಚಿಸಿ, ಚುನಾವಣೆ ಸಂದರ್ಭ ದಲ್ಲಿನ ನಕಲಿ ಮತದಾನವನ್ನು ತಡೆಯುವುದು ಇದರ ಮುಖ್ಯ ಉದ್ದೇಶವಾಗಿದೆ.

**ರಾಜ್ಯ ಮಟ್ಟದ ಸಿದ್ಧತೆ**

ದೇಶದ ವಿವಿಧ ರಾಜ್ಯಗಳಲ್ಲಿ ಎಸ್ಐಆರ್ ನಡೆಸಲು ಚುನಾವಣಾ ಆಯೋಗ ಮುಂದಾಗಿದ್ದು, ಕರ್ನಾಟಕದಲ್ಲಿಯೂ ಈ ಪ್ರಕ್ರಿಯೆ ಕೈಗೊಳ್ಳಲು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ಸಿದ್ಧತೆ ಆರಂಭಿಸಿದೆ. ರಾಜ್ಯದಲ್ಲಿ 2002ರಲ್ಲಿ ಈ ರೀತಿಯ ವಿಶೇಷ ಪರಿಷ್ಕರಣೆ ನಡೆದಿದ್ದು, ಇದೀಗ ಸುಮಾರು 23 ವರ್ಷಗಳ ಬಳಿಕ ಮತ್ತೆ ಎಸ್ಐಆರ್ ನಡೆಸಲು ಉದ್ದೇಶಿಸಲಾಗಿದೆ. 2002ರಲ್ಲಿ ರಾಜ್ಯದಲ್ಲಿ 3.40 ಕೋಟಿ ಮತದಾರರಿದ್ದರೆ, 2024ರ ಲೋಕ ಸಭಾ ಚುನಾವಣೆ ವೇಳೆಗೆ ಈ ಸಂಖ್ಯೆ 5.40 ಕೋಟಿ ತಲುಪಿದೆ.

**ಬಿಎಲ್ಒಗಳ ಮೂಲಕ ಪರಿಶೀಲನೆ**

ರಾಜ್ಯದಲ್ಲಿ ಸುಮಾರು 58 ಸಾವಿರ ಮತಗಟ್ಟೆಗಳಿದ್ದು, ಶಿಕ್ಷಕರು, ಅಂಗನವಾಡಿ ಕಾರ್ಯ ಕರ್ತೆಯರು ಸೇರಿ ವಿವಿಧ ಇಲಾಖೆಯ ಸಿಬ್ಬಂದಿಯನ್ನು ಬೂತ್ ಮಟ್ಟದ ಅಧಿಕಾರಿ ಗಳಾಗಿ (ಬಿಎಲ್ಒ) ನೇಮಿಸಿ ಈ ಕಾರ್ಯ ನಡೆಸಲಾಗುತ್ತಿದೆ. ಈಗಾಗಲೇ ಬಿಎಲ್ಒಗಳಿಗೆ ಎಸ್ಐಆರ್ ಪ್ರಕ್ರಿಯೆ ಕುರಿತು ತರಬೇತಿ ನೀಡಲಾಗಿದೆ ಎಂದು ತಿಳಿದುಬಂದಿದೆ.

### ಮನೆಗೆ ಭೇಟಿ, ಆನ್‌ಲೈನ್ ಅವಕಾಶ

ಬಿಎಲ್ಒಗಳ ಭೇಟಿ ವೇಳೆ ಮನೆಗೆ ಯಾರೂ ಲಭ್ಯವಿರದಿದ್ದರೆ, ಎರಡನೇ ಬಾರಿ ಭೇಟಿ ನೀಡಲಾಗುತ್ತದೆ. ಅಗತ್ಯವಿದ್ದಲ್ಲಿ ನೆರೆಹೊರೆಯವರ ಸಹಾಯದಿಂದ ಸಂಪರ್ಕ ಸಾಧಿಸಲಾಗುತ್ತದೆ. ಆದರೂ ಸಂಪರ್ಕ ಸಾಧ್ಯವಾಗದ ಮತದಾರರಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಕಾಶವೂ ಕಲ್ಪಿಸಲಾಗಿದೆ.
ಒಂದಕ್ಕಿಂತ ಹೆಚ್ಚು ಮತಗಟ್ಟೆಗಳಲ್ಲಿ ಹೆಸರು ಇರುವ ಮತದಾರರನ್ನು ಫೋಟೋ ಸ್ಕ್ಯಾನಿಂಗ್ ತಂತ್ರಜ್ಞಾನದ ಮೂಲಕ ಪತ್ತೆಹಚ್ಚಿ ಕ್ರಮ ಕೈಗೊಳ್ಳಲಾಗುತ್ತದೆ. ಗುರುತಿನ ಚೀಟಿಯಲ್ಲಿನ ಭಾವಚಿತ್ರ ಸ್ಪಷ್ಟವಾಗಿರದಿದ್ದರೆ, ಹೊಸ ಭಾವಚಿತ್ರ ನೀಡುವುದು ಕಡ್ಡಾಯವಾಗಿದೆ. ಪ್ರತಿಯೊಬ್ಬ ಮತದಾರರು ಚುನಾವಣಾ ಆಯೋಗ ನಿಗದಿಪಡಿಸಿರುವ ಅಗತ್ಯ ದಾಖಲೆಗಳನ್ನು ಬಿಎಲ್ಒಗಳಿಗೆ ಸಲ್ಲಿಸಬೇಕು. ಎಸ್ಐಆರ್‌ಪ್ರಕ್ರಿಯೆ ನಂತರ ಯಾರಾದರೂ ಮತದಾರರ ಹೆಸರು ತಪ್ಪಾಗಿ ಕೈಬಿಟ್ಟಿದ್ದರೆ, ಬಿಎಲ್ಒ ಸಹಿ ಮಾಡಿದ ಅರ್ಜಿ ನಮೂನೆಯ ಮೂಲಕ ಚುನಾವಣಾ ಆಯೋಗಕ್ಕೆ ಆಕ್ಷೇಪ ಸಲ್ಲಿಸಲು ಅವಕಾಶವಿದೆ.

## ಶತಾಯುಷಿ ಹುಲುಕೋಡಮ್ಮ ನಿಧನ



• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಕೊಣನೂರಿನ ಶತಾಯುಷಿ ಹುಲುಕೋಡಮ್ಮ (102) ಅವರು ಭಾನುವಾರ ನಿಧನರಾದರು.

ಮೃತರು ಪತ್ರಕರ್ತ ಚನ್ನಕೇಶವಯ್ಯ ಸೇರಿ ನಾಲ್ವರು ಪುತ್ರರು, ಮೊಕ್ಕಳು ಹಾಗು ಬಂಧು ಮಿತ್ರರನ್ನು ಅಗಲಿದ್ದಾರೆ. ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.

## ವಿದ್ಯುತ್ ವ್ಯತ್ಯಯ

**ಅರಸೀಕೆರೆ:** ಗಂಡಸಿ ಉಪವಿಭಾಗ ವ್ಯಾಪ್ತಿಯ ಕೊಂಡೆನಾಳು 110/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಕೈಗೊಂಡಿರುವ ಹಿನ್ನಲೆಯಲ್ಲಿ ಜ. 6ರ ಬೆಳಿಗ್ಗೆ 10 ರಿಂದ ಸಂಜೆ 6ರ ವರೆಗೆ ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಯವಾಗಲಿದೆ.

11 ಕೆ.ವಿ. ಮಾರ್ಗಗಳಾದ ಬಾಗಿವಾಳು, ಬಾಗೂರನಹಳ್ಳಿ, ಚಿಂದೆನಹಳ್ಳಿ ಗಡಿ, ಹುಲ್ಲೇಕೆರೆ, ಕೆಂಕೆರೆ, ರಾಮೇನಹಳ್ಳಿ, ಆಲದಹಳ್ಳಿ, ಲಿಂಗಾಪುರ, ಗಂಡಸಿ ಹ್ಯಾಂಡ್‌ಪೋಸ್ಟ್, ಶಿವಪುರ, ಗಾಂಧಿನಗರ, ಕೊಂಡೆನಾಳು ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಸಾರ್ವಜನಿಕರು ಸಹಕರಿಸಬೇಕೆಂದು ಸೆಸ್ಕಾಂ ಸಹಾಯಕ ಅಭಿಯಂತರ ಕೆ.ವಿ.ಪರಮೇಶ್ ಅವರು ತಿಳಿಸಿದ್ದಾರೆ.

## ಸೇತುವೆ ಸಂಪರ್ಕ ರಸ್ತೆ ಕಾಮಗಾರಿ ಕೈಗೊಳ್ಳಲು ಎ.ಮಂಜು ತಾಕೀತು



• ಪ್ರಜೋದಯ ವರದಿ

**ಕೊಣನೂರು:** ನನೆಗುದಿಗೆ ಬಿದ್ದಿರುವ ರಾಮನಾಥಪುರ ಸೇತುವೆಯ ಸಂಪರ್ಕ ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳುವಂತೆ ಶಾಸಕ ಎ.ಮಂಜು ಗುತ್ತಿಗೆದಾರ ಮತ್ತು ಇಂಜಿನೀಯರ್‌ಗಳಿಗೆ ತಾಕೀತು ಮಾಡಿದರು.

ರಾಮನಾಥಪುರದಲ್ಲಿ ಕಾವೇರಿ ನದಿಗೆ ನಿರ್ಮಿಸುತ್ತಿರುವ ಸೇತುವೆಯ ಸ್ಥಳಕ್ಕೆ ಕೆಆರ್‌ಡಿಸಿಎಲ್ ಇಂಜಿನೀಯರ್ ಹಾಗೂ ಗುತ್ತಿಗೆದಾರರನ್ನು ಕರೆಸಿ ಕಾಮಗಾರಿ ನನೆಗುದಿಗೆ ಬಿದ್ದಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಬಾರಿ ಸಚಿವನಾಗಿದ್ದ ವೇಳೆ ಮಂಜೂರಾಗಿದ್ದ ಸೇತುವೆ ಕಾಮಗಾರಿಯ ಗುತ್ತಿಗೆ ವಹಿಸಿಕೊಂಡಿರುವ ಆಂಧ್ರಪ್ರದೇಶ ಮೂಲದ ಬಿ.ಎಸ್.ಆರ್. ಕನ್‌ಸ್ಟ್ರಕ್ಷನ್ ಕಂಪನಿ ಇಂದಿಗೂ ಪೂರ್ಣಗೊಳಿಸದೆ ಸ್ಥಗಿತಗೊಂಡಿದೆ. ಅದಕ್ಕೆ ಇಂಜಿನೀಯರ್ ಮತ್ತು ಗುತ್ತಿಗೆದಾರರ ಬೇಜವಾಬ್ದಾರಿಯೇ ಕಾರಣ. ಮೀನುಗಾರಿಕೆ ಇಲಾಖೆಗೆ ಸೇರಿದ ಕಟ್ಟಡಗಳನ್ನು ನೆಲಸಮಗೊಳಿಸಿದರೂ ಇಲಾಖೆಗೆ ಪರ್ಯಾಯ ವ್ಯವಸ್ಥೆ ಕೈಗೊಂಡು ಕಾಮಗಾರಿ ಕೈಗೆತ್ತಿಕೊಂಡಿಲ್ಲ ಎಂದು ಗುತ್ತಿಗೆದಾರ ಮತ್ತು ಇಂಜಿನೀಯರ್ ಅವರನ್ನು ತರಾಟೆಗೆ ತೆಗೆದುಕೊಂಡರು.

ಕೆಆರ್‌ಡಿಸಿಎಲ್ ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಲಕ್ಷ್ಮೀ, ಸಹಾಯಕ ಇಂಜಿನೀಯರ್ ರಾಜು ಇದ್ದರು.

# ಮದ್ಯ ವ್ಯಸನಿಯಿಂದ ಕುಟುಂಬದ ಗೌರವ ಹಾಳು



• ಪ್ರಜೋದಯ ವರದಿ

**ಹಗರೆ:** ಕುಟುಂಬದ ಒಬ್ಬ ವ್ಯಕ್ತಿ ಮದ್ಯ ವ್ಯಸನಿಯಾದರೆ ಇಡೀ ಸಂಸಾರದ ಗೌರವ ಬೀದಿಗೆ ಬರುತ್ತದೆಂದು ಹಗರೆ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಶಿವರಾಜು ಅವರು ಹೇಳಿದರು.

ಬೇಲೂರು ತಾಲ್ಲೂಕು ಮಾದಿಹಳ್ಳಿ ಹೋಬಳಿ ಹಗರೆಯ ಸತ್ಯನಾರಾಯಣಸ್ವಾಮಿ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿರುವ 2033ನೇ ಮದ್ಯ ವರ್ಜನ ಶಿಬಿರ ಉದ್ಘಾಟಿಸಿ ಮಾತನಾಡಿ, ಸಾರಾಯಿ ಸಹವಾಸ ಹೆಂಡತಿ ಮಕ್ಕಳ ವನವಾಸ ಎಂಬ ಮಾತು ಸತ್ಯ. ಅಂತಹ ಕುಟುಂಬ ಮಾನಸಿಕವಾಗಿ ತೀವ್ರ ತೊಂದರೆ ಅನುಭವಿಸಬೇಕಾಗುತ್ತದೆಂದರು.

ಸ್ವಯಂ ಪ್ರೇರಿತವಾಗಿ ದುಶ್ಚಟಗಳನ್ನು ಬಿಡಬೇಕು. ಈ ಶಿಬಿರದಲ್ಲಿ ಔಷಧಿ ಚುಚ್ಚುಮದ್ದು ನೀಡದೆ ಭಜನೆ, ಯೋಗ, ಧ್ಯಾನ ಮಾಡಿಸುವುದು, ಸಾಂಸ್ಕೃತಿಕ ಕಾರ್ಯಕ್ರಮ ನೀಡುವ ಮೂಲಕ ಮನ ಪರಿವರ್ತನೆ ಮಾಡುತ್ತಾರೆ. ಶಿಬಿರಾರ್ಥಿಗಳು ಪ್ರಯೋಜನ ಪಡೆಯಬೇಕು. ಸೋಮಾರಿಗಳಿಗೆ ದುಶ್ಚಟಗಳು ಬೇಗ ಅಂಟಿಕೊಳ್ಳುತ್ತವೆ.ಆದ್ದರಿಂದ ಮನುಷ್ಯ ಕೆಲಸಗಳಲ್ಲಿ ತೊಡಗಬೇಕೆಂದರು.

ಬಿಜೆಪಿ ತಾಲ್ಲೂಕು ಉಪಾಧ್ಯಕ್ಷ ಡಿಶಾಂತ ಕುಮಾರ್ ಅವರು ಮಾತನಾಡಿ, ಮಹಾತ್ಮ ಗಾಂಧೀಜಿ ಅವರ ಗ್ರಾಮ ಸ್ವರಾಜ್ಯ ಕನಸು ನನಸಾಗಬೇಕೆಂದರೆ ಸಾರಾಯಿ ನಿಷೇಧವಾಗಬೇಕು. ಆದರೆ ಇಂದು ಹಳ್ಳಿಗಳಲ್ಲೂ ಮದ್ಯ ಮಾರಾಟ ಜೋರಾಗಿದೆ. ಸಮಾಜವನ್ನು ಸರಿ ದಾರಿಗೆ ತರಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಮಾಡುತ್ತಿರುವ ಕೆಲಸ ಶ್ಲಾಘನೀಯವೆಂದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಮಂಜುಳ, ಶಿಬಿರಾಧಿಕಾರಿ ರಮೇಶ್, ಮೋಹನ್, ಮಂಜೇಗೌಡ, ಕಾಂತರಾಜು, ಎಸ್. ಗೌಡ, ಡಾ.ಪ್ರಸನ್ನ ಇತರರಿದ್ದರು.

# ವೆನಿಜುವೆಲಾ-ಅಮೇರಿಕಾ ಸಂಘರ್ಷ: ಭಾರತಕ್ಕೆ ಅತ್ಯಲ್ಪ ನಷ್ಟ

• ಪ್ರಜೋದಯ ವರದಿ

**ನವದೆಹಲಿ:** ಅಮೇರಿಕಾ-ವೆನೆಜುವೆಲಾ ಸಂಘರ್ಷದಿಂದಾಗಿ ಭಾರತದೊಂದಿಗಿನ ವ್ಯಾಪಾರವಹಿವಾಟಿನ ಮೇಲೆ ಅತ್ಯಲ್ಪ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಜಿಟಿಆರ್ಐ) ತಿಳಿಸಿದೆ.

2025ರ ಹಣಕಾಸು ವರ್ಷದಲ್ಲಿ ಭಾರತ ಮತ್ತು ವೆನೆಜುವೆಲಾದೊಂದಿಗಿನ ವ್ಯಾಪಾರವು ಶೇ. 81.3ರಷ್ಟು ಕಡಿಮೆಯಾಗಿದೆ. ಒಟ್ಟಾರೆ ದ್ವಿಪಕ್ಷೀಯ ವ್ಯಾಪಾರವು ಕಡಿಮೆ ಪ್ರಮಾಣದಲ್ಲಿರುವುದರಿಂದ ಅಮೇರಿಕಾ -ವೆನೆಜುವೆಲಾ ಸಂಘರ್ಷದಿಂದಾಗಿ ಭಾರತವು ಅತ್ಯಲ್ಪ ಪರಿಣಾಮವನ್ನು ಎದುರಿಸಲಿದೆ ಎಂದು ಜಿಟಿಆರ್ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

ಅಮೇರಿಕಾ-ವೆನೆಜುವೆಲಾ ಸಂಘರ್ಷದಿಂದಾಗಿ ಭಾರತಕ್ಕೆ ಆರ್ಥಿಕ ಅಥವಾ ಇಂಧನ ಪರಿಣಾಮ ಬೀರುವ ಸಾಧ್ಯತೆಯಿಲ್ಲ ಎಂದೂ ಅವರು ತಿಳಿಸಿದ್ದಾರೆ. 2000-2010ರ ಅವಧಿಯಲ್ಲಿ ಭಾರತವು ವೆನೆಜುವೆಲಾದ



ಕಚ್ಚಾ ತೈಲದ ಪ್ರಮುಖ ಖರೀದಿದಾರ ದೇಶವಾಗಿದ್ದರೂ, 2019ರಿಂದ ಅಮೇರಿಕಾದ ನಿರ್ಬಂಧಗಳಿಂದಾಗಿ ಭಾರತ-ವೆನೆಜುವೆಲಾ ದ್ವಿಪಕ್ಷೀಯ ವ್ಯಾಪಾರ ತೀವ್ರವಾಗಿ ದುರ್ಬಲಗೊಂಡಿದೆ. ಭಾರತವು ವೆನೆಜುವೆಲಾದಿಂದ ಆಮದು ಮಾಡಿಕೊಳ್ಳುತ್ತಿದ್ದ ತೈಲವನ್ನು ಗಣನೀಯವಾಗಿ ತಗ್ಗಿಸಲಾಗಿದೆಂದು ಶ್ರೀವಾಸ್ತವ ವಿವರಿಸಿದ್ದಾರೆ.

ಕಡಿಮೆ ವ್ಯಾಪಾರ, ಅಸ್ತಿತ್ವದಲ್ಲಿರುವ ನಿರ್ಬಂಧಗಳು ಸೇರಿ ಭೌಗೋಳಿಕ ಅಂತರವನ್ನು ಗಮನಿಸಿದರೆ, ವೆನೆಜುವೆಲಾದಲ್ಲಿನ ಪ್ರಸ್ತುತ ಬೆಳವಣಿಗೆಗಳು ಭಾರತದ ಆರ್ಥಿಕತೆ ಅಥವಾ ಇಂಧನ ಭದ್ರತೆಯ ಮೇಲೆ ಯಾವುದೇ ಪರಿಣಾಮ ಬೀರುವ ನಿರೀಕ್ಷೆಯಿಲ್ಲ. 2025ನೇ ಹಣ ಕಾಸು ವರ್ಷದಲ್ಲಿ ವೆನೆಜುವೆಲಾದಿಂದ ಭಾರತದ ಒಟ್ಟು ಆಮದು 3,276 ಕೋಟಿ ರೂ. ಆಗಿತ್ತು. ಅದರಲ್ಲಿ ಕಚ್ಚಾ ತೈಲವು 2,295 ಕೋಟಿ ರೂ.ನಷ್ಟಿತ್ತು. ಇದು 2024ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ ಆಮದು ಮಾಡಿಕೊಂಡ ತೈಲ ಪ್ರಮಾಣ ಶೇ.81.3ರಷ್ಟು ಕುಸಿದಿತ್ತು. ವೆನೆಜುವೆಲಾ ವಿಶ್ವದ ತೈಲ ನಿಕ್ಷೇಪಗಳಲ್ಲಿಶೇ.18ರಷ್ಟುಪಾಲು ಹೊಂದಿದೆ. ಇದು ಸೌದಿ ಅರೇಬಿಯಾ, ರಷ್ಯಾ ಅಥವಾ ಅಮೆರಿಕಗಿಂತಲೂ ಹೆಚ್ಚಿದೆ.

### ಅಮೇರಿಕಾ-ವೆನೆಜುವೆಲಾ ಸಂಘರ್ಷ: ಭಾರತ ತೀವ್ರ ಕಳವಳ

ನವದೆಹಲಿ: ವೆನೆಜುವೆಲಾದಲ್ಲಿನ ಪರಿಸ್ಥಿತಿ ಬಗ್ಗೆ ಭಾರತ ಭಾನುವಾರ ತೀವ್ರ ಕಳವಳ ವ್ಯಕ್ತಪಡಿಸಿದೆ. ವೆನಿಜುವೆಲಾದ ಜನರ ಯೋಗಕ್ಷೇಮ ಮತ್ತು ಸುರಕ್ಷತೆಗೆ ಬೆಂಬಲ ನೀಡು ವುದಾಗಿಯೂ ಪುನರುಚ್ಚರಿಸಿದೆ.
ವೆನೆಜುವೆಲಾದಲ್ಲಿನ ಇತ್ತೀಚಿನ ಬೆಳವಣಿಗೆಗಳು ತೀವ್ರ ಕಳವಳಕಾರಿ ವಿಷಯವಾಗಿದೆ. ನಾವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ ಎಂದು ಭಾರತ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಪ್ರಕಟಣೆಯಲ್ಲಿ ತಿಳಿಸಿದೆ.
ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡಿಕೊಳ್ಳಲು ಮಾತುಕತೆಯ ಮೂಲಕ ಶಾಂತಿಯುತವಾಗಿ ಸಮಸ್ಯೆಗಳನ್ನು ಪರಿಹರಿಸಲು ನಾವು ಸಂಬಂಧಪಟ್ಟ ಎಲ್ಲರಿಗೂ ಕರೆ ನೀಡುತ್ತೇವೆ ಎಂದು ಎಂಇಎ ಹೇಳಿದೆ.
ಕರಾಕಸ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಭಾರತೀಯ ಸಮುದಾಯ ದವರೊಂದಿಗೆ ಸಂಪರ್ಕದಲ್ಲಿದೆ ಮತ್ತು ಅವರಿಗೆ ಸಾಧ್ಯವಿರುವ ಎಲ್ಲ ನೆರವನ್ನು ಒದಗಿಸಲಿದೆ ಎಂದೂ ಎಂಇಎ ಭರವಸೆ ನೀಡಿದೆ.
ನಿಕೊಲಸ್ ಮಡೂರೊ ಅವರು ಮಾದಕವಸ್ತು ಕಳ್ಳಸಾಗಣೆಯಲ್ಲಿ ಭಾಗಿಯಾಗಿದ್ದಾರೆ ಎಂದು ನಿರಂತರವಾಗಿ ಆರೋಪಿಸಿದ ನಂತರ ಅಮೇರಿಕ, ವೆನೆಜುವೆಲಾದ ರಾಜಧಾನಿ ಕ್ಯಾರಕಾಸ್ ಮೇಲೆ ಶುಕ್ರವಾರ ರಾತ್ರಿ ವಾಯು ದಾಳಿ ನಡೆಸಿತ್ತು. ಬಳಿಕ ಮಡೂರೊ ಮತ್ತು ಅವರ ಪತ್ನಿ ಸಿಲಿಯಾ ಪ್ಲೋರ್ಸ್ ಅವರನ್ನು ಸೆರೆ ಹಿಡಿದಿತ್ತು.
ಅಮೇರಿಕ ಸೇನಾಪಡೆಗಳು ಮಡುರೊ ಮತ್ತು ಸಿಲಿಯಾ ಪ್ಲೋರ್ಸ್ ಅವರನ್ನು ನ್ಯೂಯಾರ್ಕ್‌ಗೆ ಕರೆದೊಯ್ದಿವೆ. ಅಮೇರಿಕದ ಕ್ರಮದ ಬೆನ್ನಲ್ಲೇ ವೆನಿಜುವೆಲಾದಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ.

## ರಾಜಕೀಯದಲ್ಲಿ ಗೂಗ್ಲಿ ಬಾಲ್ ಹಾಕಬೇಕು: ಸಚಿವ ಸತೀಶ್



• ಪ್ರಜೋದಯ ವರದಿ

**ಶಿವಮೊಗ್ಗಾ:** ಕ್ರಿಕೆಟ್‌ನಲ್ಲಿ ನಾನು ಬ್ಯಾಟಿಂಗ್ ಚೆನ್ನಾಗಿ ಆಡುತ್ತೇನೆ. ಅದೇ ರೀತಿ ರಾಜ ಕೀಯದಲ್ಲೂ ಗೂಗ್ಲಿ ಬಾಲ್ ಹಾಕಲೇಬೇಕು. ಇಲ್ಲವಾದರೆ ಯಶಸ್ಸು ಸಿಗುವುದಿಲ್ಲವೆಂದು ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿ, ರಾಜ್ಯದಲ್ಲಿ ಬಜೆಟ್ ನಂತರ ಅಧಿಕಾರದ ಹಸ್ತಾಂತರದ ಬಗ್ಗೆ ದೆಹಲಿಮಟ್ಟದಲ್ಲಿ ನಿರ್ಧಾರ ಕೈಗೊಳ್ಳಲಾಗುತ್ತದೆ. ನೀವು (ಮಾಧ್ಯಮದವರು) ಯಾರನ್ನ ತೆಗಿಬೇಕು ಅಂತಿರಾ, ಇಡಬೇಕು ಅಂತಿರಾ ಎಲ್ಲವೂ ನಿರ್ಧಾರ ಹೈಕಮಾಂಡ್ ಅವರದ್ದು. ಅಲ್ಲಿ ಕೇಳಿದರೆ ಸರಿಯಾದ ಉತ್ತರ ಸಿಗಲಿದೆ. ಹಾಗೆಂದು ಸದ್ಯ ಮುಖ್ಯಮಂತ್ರಿ ಸ್ಥಾನದ ರೇಸ್‌ನಲ್ಲಿ ನಾನು ಇಲ್ಲ. ಅವಕಾಶ ಬಂದಾಗ ನೋಡೋಣ. ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಈಗ ಮಾತಾಡುವುದಿಲ್ಲ. ನೋಡೋಣ ಅದು ಇನ್ನೂ ದೊಡ್ಡ ಮ್ಯಾಚ್ ಇದೆ ಎಂದರು.

ಬಳ್ಳಾರಿಯಲ್ಲಿನ ಗಲಭೆ ಘಟನೆಯನ್ನು ಸಿಐಡಿ ತನಿಖೆಗೆ ವಹಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆದಿದೆ. ತನಿಖಾ ಸಂಸ್ಥೆಯ ವರದಿ ಬಂದ ಬಳಿಕ ಆ ಬಗ್ಗೆ ಚರ್ಚೆ ಮಾಡಬಹುದು. ಆ ಘಟನೆ ರಾಜ್ಯ ಸರ್ಕಾರಕ್ಕೆ ಮುಜುಗರ ತರುವ ವಿಚಾರ. ಅದು ಬಹಳ ಸಣ್ಣ ಘಟನೆ. ಆದರೆ ಅಷ್ಟು ದೊಡ್ಡದು ಆಗಬಾರದಿತ್ತು. ಪೊಲೀಸರ ತನಿಖೆ ಬಳಿಕ ತಪ್ಪಿತಸ್ಥರು ಯಾರೆಂದು ತಿಳಿಯಲಿದೆ ಎಂದು ಹೇಳಿದ ಜಾರಕಿಹೊಳಿ, ಅಲ್ಲಿನ ಪರಿಸ್ಥಿತಿಯನ್ನು ಸರಿಯಾಗಿ ನಿರ್ವಹಣೆ ಮಾಡಲು ಆಗದೇ ಇರುವುದೇ ಎಸ್ಪಿ ಅವರನ್ನು ಸಸ್ಪೆಂಡ್ ಮಾಡಲು ಕಾರಣ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ನರೇಗಾ ಸ್ವರೂಪವನ್ನು ಬದಲಾಯಿಸಿ ಜಿರಾಮ್ ಜಿ ಎಂದು ನಾಮಕರಣ ಮಾಡಿರು ವುದು ಬಡವರ ವಿರೋಧಿ ಕ್ರಮ. ಮೊದಲು ಪಂಚಾಯಿತಿ ಮಟ್ಟದಲ್ಲಿ ಅಧಿಕಾರ ಇತ್ತು. ಈಗ ದೆಹಲಿಯಲ್ಲಿ ಅಧಿಕಾರ ಕೇಂದ್ರೀಕೃತವಾಗಿದೆ. ಯೋಜನೆಗೆ ಕೇಂದ್ರದ ಪಾಲು ಹೆಚ್ಚಿದೆ. ಯಾವ ಪಂಚಾಯಿತಿಗೆ ಹಣ ಬಿಡುಗಡೆ ಮಾಡಬೇಕು ಎಂಬ ತೀರ್ಮಾನ ಅವ ರದ್ದು. ನಮ್ಮ ಬಲ ಹೆಚ್ಚಿಲ್ಲ. ಹೇಗೆ ವಿರೋಧ ಮಾಡೋದು. ಆದರೂ ವಿರೋಧ ಮಾಡಲೇಬೇಕು ಹೀಗಾಗಿ ಮಾಡುತ್ತಿದ್ದೇವೆಂದರು.

## ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಪ್ರತಿಭಟನೆ



• ಪ್ರಜೋದಯ ವರದಿ

**ಬೇಲೂರು:** ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳ ಕಾರ್ಯ ಕರ್ತರು ಟಯರ್‌ಗೆ ಬೆಂಕಿ ಹಚ್ಚಿ ಪಂಜಿನ ಮೆರವಣಿಗೆಯೊಂದಿಗೆ ಬೃಹತ್ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಹಿಂದೂಪರ ಸಂಘಟನೆ ಮುಖಂಡ ಸಂತೋಷ್, ಬಾಂಗ್ಲಾದೇಶದಲ್ಲಿ ಪದೇಪದೇ ಹಿಂದೂಗಳ ಮೇಲೆ ದೌರ್ಜನ್ಯ ನಡೆಯುತ್ತಿರುವುದು ಅರಿಯಲ್ಲ. ಈ ಘಟನೆಯನ್ನು ಭಾರತ ದೇಶದ ಹಿಂದೂಗಳಾದ ನಾವು ಇಂತಹ ಅಮಾನವೀಯ ಕೃತ್ಯವನ್ನು ತೀವ್ರವಾಗಿ ಖಂಡಿಸುತ್ತೇವೆ. ಭಾರತದವರ ಸಹನೆ ಮತ್ತು ತಾಳ್ಮೆಯನ್ನು ನಿರಂತರವಾಗಿ ಕೆಣಕುತ್ತಿರುವ ಬಾಂಗ್ಲಾದೇಶಕ್ಕೆ ಭಾರತ ಸರ್ಕಾರ ಒಮ್ಮೆ ಮಧ್ಯಪ್ರವೇಶಿಸಿದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆಂದು ಎಚ್ಚರಿಸಿದ ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಬಾಂಗ್ಲಾದೇಶದ ಹಿಂದೂಗಳ ರಕ್ಷಣೆಗೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಬಜರಂಗದಳ ಪ್ರಧಾನ ಕಾರ್ಯದರ್ಶಿ ನಾಗೇಶ್(ಗುಂಡ) ಅವರು ಮಾತನಾಡಿ, ಬಾಂಗ್ಲಾದೇಶದಲ್ಲಿರುವ ಹಿಂದೂಗಳ ಮೇಲಿನ ದೌರ್ಜನ್ಯವನ್ನು ಯಾರೂ ಸಹಿಸುವುದಿಲ್ಲ. ಕೇಂದ್ರ ಸರ್ಕಾರ ತಕ್ಷಣ ಮಧ್ಯ ಪ್ರವೇಶಿಸಿ ಬಾಂಗ್ಲಾದೇಶದಲ್ಲಿ ನೆಲೆಸಿರುವ ಹಿಂದೂಗಳ ರಕ್ಷಣೆಗೆ ಮುಂದಾಗಬೇಕು. ಪ್ರತಿಭಟನೆಗೆ ಮುಂದಾದ ಸಂದರ್ಭ ಪೊಲೀಸರು ನೆಹರು ನಗರ ಮತ್ತು ಜೆ.ಪಿ. ನಗರಕ್ಕೆ ಹೋಗಬಾರದೆಂದು ನಿರ್ಬಂಧ ವಿಧಿಸುತ್ತಿರುವುದು ಎಷ್ಟು ಸರಿ. ನಾವು ಭಾರತದಲ್ಲಿದ್ದೇವೆಯೋ ಅಥವಾ ಪಾಕಿಸ್ತಾನದಲ್ಲಿದ್ದೇವೆಯೋ ಎಂಬ ಅನುಮಾನ ಉಂಟಾಗಿದೆ ಎಂದರು.

ಹೊಯ್ಸಳ ಆಟೋ ಚಾಲಕರ ಸಂಘದ ಅಧ್ಯಕ್ಷ ದಿವಾಕರ್, ಬಿಜೆಪಿ ಮುಖಂಡರಾದ ಶೋಭಾಗಣೇಶ್, ಪುರಸಭೆ ಸದಸ್ಯಪ್ರಭಾಕರ್, ಶ್ರೀರಾಮ ಸೇನೆ, ಬಜರಂಗದಳ ಮುಖಂಡರಾದ ಭರತ್, ಅಶೋಕ, ಲೋಕೇಶ್, ಅರುಣ್, ಯೋಗೇಶ್ ಇದ್ದರು.

## ಪ.ಬಂಗಳಾದಲ್ಲಿ ಎಸ್ಐಆರ್ ಕರ್ತವ್ಯಕ್ಕೆ ಅಡ್ಡಿ: ವರದಿ ನೀಡಲು ಪೊಲೀಸರಿಗೆ ಸೂಚನೆ

**ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿನ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್ಐಆರ್) ವಿಚಾರಣಾ ಕೇಂದ್ರ ವೊಂದಕ್ಕೆ ಚುನಾವಣಾ ನೋಂದಣಾಧಿಕಾರಿ (ಇಆರ್ಒ) ತೆರಳುತ್ತಿದ್ದಾಗ ಗಂಭೀರ ಭದ್ರತಾಲೋಪವಾಗಿದ್ದು, ಈ ಬಗ್ಗೆ ಜನವರಿ 6 ರೊಳಗಾಗಿ ಸಮಗ್ರ ವರದಿ ನೀಡಬೇಕು ಎಂದು ಚುನಾವಣಾ ಆಯೋಗ ರಾಜ್ಯ ಪೊಲೀಸರಿಗೆ ಸೂಚಿಸಿದೆ.

ಹಿರಿಯ ಅಧಿಕಾರಿ ಮುರುಗನ್ ಅವರು ಡಿಸೆಂಬರ್ 29ರಂದು ಎಸ್ಐಆರ್ ವಿಚಾರಣಾ ಕೇಂದ್ರಕ್ಕೆ ತೆರಳುತ್ತಿದ್ದಾಗ ಭದ್ರತಾ ಲೋಪ ಸಂಭವಿಸಿದೆ. ಇಂಥಹ ಹಲವು ಘಟನೆಗಳು ನಡೆದಿದ್ದು, ಈ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿ ನೀಡಬೇಕೆಂದು ಆಯೋಗವು ಪೊಲೀಸ್ ಮಹಾ ನಿರ್ದೇಶಕರಿಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದೆ.

ಘೋಷಣೆ ಕೂಗುವುದು, ಗುಂಪು ಸೇರುವುದು, ಕೆಲಸಕ್ಕೆ ಅಡ್ಡಿಪಡಿಸುವುದು ಮತ್ತು ಅಧಿಕಾರಿಗಳ ವಾಹನಕ್ಕೆ ಅಡ್ಡಿಪಡಿಸಿರುವ ಕುರಿತು ವರದಿಗಳಾಗಿವೆ. ಚುನಾವಣಾ ಅಧಿಕಾರಿಗಳ ಪ್ರವಾಸದ ಬಗ್ಗೆ ಮುಂಚಿತವಾಗಿ ಮಾಹಿತಿ ನೀಡಿದ್ದರೂ ಸೂಕ್ತ ಭದ್ರತೆ ನೀಡಲಾಗಿಲ್ಲ.

## 2036ರ ಒಲಿಂಪಿಕ್ಸ್ ಆತಿಥ್ಯಕ್ಕೆ ಪೂರ್ಣ ಸಾಮರ್ಥ್ಯದೊಂದಿಗೆ ತಯಾರಿ



• ಪ್ರಜೋದಯ ವರದಿ

**ವಾರಣಾಸಿ:** 2036ರಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಆತಿಥ್ಯ ವಹಿಸಲು ಭಾರತವು ಪೂರ್ಣ ಸಾಮರ್ಥ್ಯದೊಂದಿಗೆ ತಯಾರಿ ನಡೆಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು.

ಇಲ್ಲಿ ಭಾನುವಾರ 72ನೇ ರಾಷ್ಟ್ರೀಯ ವಾಲಿಬಾಲ್ ಚಾಂಪಿಯನ್‌ಷಿಪ್‌ನ ಉದ್ಘಾಟನಾ ಸಮಾರಂಭದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, 2030ರ ಕಾಮನ್‌ವೆಲ್ತ್ ಕ್ರೀಡಾಕೂಟವು ಭಾರತದಲ್ಲಿ ನಡೆಯಲಿದೆ. ಮೆಗಾ ಕ್ರೀಡಾಕೂಟಗಳನ್ನು ಆಯೋಜಿಸುವ ಮೂಲಕ ದೇಶದ ಹೆಚ್ಚು ಹೆಚ್ಚು ಆಟಗಾರರಿಗೆ ಅವಕಾಶ ಒದಗಿಸಲು ತಮ್ಮ ಸರ್ಕಾರ ಬದ್ಧವಾಗಿದೆ ಎಂದರು.

ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆ (ಟಾಪ್ಸ್)ನಂತಹ ಉಪಕ್ರಮಗಳು ಕ್ರೀಡಾಪಟುಗಳಿಗೆ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಲು ಸಹಕಾರಿಯಾಗಿದೆ. ಕೇಂದ್ರ ಸರ್ಕಾರವು ಕ್ರೀಡಾ ಬಜೆಟ್ ಅನ್ನೂ ಗಣನೀಯವಾಗಿ ಹೆಚ್ಚಿಸಿದೆ ಎಂದು ತಿಳಿಸಿದರು.

ಉದಯೋನ್ಮುಖ ಕ್ರೀಡಾಪಟುಗಳಿಗೆ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಎಲ್ಲಾ ರೀತಿಯ ನೆರವನ್ನು ಸರ್ಕಾರ ನೀಡುತ್ತಿದೆ. ಖೇಲೋ ಇಂಡಿಯಾದಂತಹ ಯೋಜನೆಗಳು ಕ್ರೀಡಾ ಪ್ರತಿಭೆಗಳ ಬದುಕಿನ ದಿಕ್ಕನ್ನೇ ಬದಲಿಸುತ್ತಿದೆ ಎಂದು ಅಭಿಪ್ರಾಯಪಟ್ಟರು.

ಕಳೆದ ಒಂದು ದಶಕದಲ್ಲಿ 17 ವರ್ಷದೊಳಗಿನವರ ಫಿಫಾ ವಿಶ್ವಕಪ್, ಹಾಕಿ ವಿಶ್ವಕಪ್ ಮತ್ತು ಚೆಸ್ ಟೂರ್ನಿಗಳು ಸೇರಿ 20ಕ್ಕೂ ಹೆಚ್ಚು ಪ್ರಮುಖ ಅಂತರರಾಷ್ಟ್ರೀಯ ಕೂಟಗಳು ದೇಶದ ವಿವಿಧ ನಗರಗಳಲ್ಲಿ ನಡೆದಿವೆ ಎಂದು ಮೋದಿ ತಿಳಿಸಿದರು.

ಇದೇ 11ರವರೆಗೆ ನಡೆಯಲಿರುವ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ದೇಶದಾದ್ಯಂತ 58 ತಂಡಗಳು ಭಾಗವಹಿಸಿವೆ.

## ರೂಟ್-ಬ್ರೂಕ್ ಜೊತೆಯಾಟ: ಇಂಗ್ಲೆಂಡ್ 211ಕ್ಕೆ 3

• ಪ್ರಜೋದಯ ವರದಿ

**ಸಿಡ್ನಿ:** ಜೋ ರೂಟ್ ಮತ್ತು ಹ್ಯಾರಿ ಬ್ರೂಕ್ ಅವರಿಬ್ಬರ ಶತಕದ ಜೊತೆಯಾಟವು ಭಾನುವಾರ ಆರಂಭವಾದ ಆ್ಯಷಸ್ ಟೆಸ್ಟ್ ಸರಣಿಯ ಕೊನೆಯ ಪಂದ್ಯದ ಮೊದಲ ದಿನದಾಟದಲ್ಲಿ ಇಂಗ್ಲೆಂಡ್ ತಂಡಕ್ಕೆ ಆಸರೆಯಾಯಿತು.

ಈಚೆಗೆ ನಡೆದ ಬೊಂಡಿ ಭಯೋತ್ಪಾದನಾ ದಾಳಿಯಲ್ಲಿ ಮೃತರಾದವರಿಗೆ ಶ್ರದ್ಧಾಂಜಲಿ ಸಲ್ಲಿಸುವುದ ರೊಂದಿಗೆ ಪಂದ್ಯ ಆರಂಭವಾಯಿತು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಇಂಗ್ಲೆಂಡ್ ತಂಡವು 57 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಜೊತೆಯಾದ ರೂಟ್ ಮತ್ತು ಬ್ರೂಕ್ ಅವರು ಮುರಿಯದ 4ನೇ ವಿಕೆಟ್ ಜೊತೆಯಾಟದಲ್ಲಿ 154ರನ್ ಸೇರಿಸಿದರು.

ಮಂದಬೆಳಕಿನ ಕಾರಣಕ್ಕೆ ದಿನದಾಟ ಮುಕ್ತಾಯವಾದಾಗ ಇಂಗ್ಲೆಂಡ್ 45 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 211 ರನ್ ಗಳಿಸಿತು. ರೂಟ್ (ಬ್ಯಾಟಿಂಗ್ 72ರನ್, 103 ಎಸೆತ) ಮತ್ತು ಬ್ರೂಕ್ (ಬ್ಯಾಟಿಂಗ್ 78ರನ್ 92ಎಸೆತ) ಕ್ರೀಸ್‌ನಲ್ಲಿದ್ದಾರೆ.

ಐದು ಪಂದ್ಯಗಳ ಈ ಸರಣಿಯಲ್ಲಿ ಇಂಗ್ಲೆಂಡ್ ತಂಡದಿಂದ ಹೊರಹೊಮ್ಮಿದ ಅತ್ಯಧಿಕ ರನ್‌ಗಳ ಜೊತೆಯಾಟ ಇದಾಗಿದೆ. ರೂಟ್ ಅವರಿಗೆ ಇದು ಟೆಸ್ಟ್ ಕ್ರಿಕೆಟ್‌ನಲ್ಲಿ 67ನೇ ಅರ್ಧಶತಕ. ಹ್ಯಾರಿಗೆ 15ನೇಯದ್ದು.



ಪ್ರವಾಸಿ ಬಳಗವು ಆರಂಭದಲ್ಲಿಯೇ ಎಡವಿತ್ತು. ಬೆನ್ ಡಕೆಟ್ (27 ರನ್, 24 ಎಸೆತ, 5 ಬೌಂಡರಿ) ಮತ್ತು ಜಾಕ್ ಕ್ರಾಲಿ (16ರನ್, 29 ಎಸೆತ, 3ಬೌಂಡರಿ) ಮೊದಲ ವಿಕೆಟ್ ಜೊತೆಯಾಟದಲ್ಲಿ 35 ರನ್ ಸೇರಿಸಿದರು. ಮಿಚೆಲ್ ಸ್ಟಾರ್ಕ್ ಅವರು 7ನೇ ಓವರ್‌ನಲ್ಲಿ ಡಕೆಟ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ನಾಲ್ಕು ಓವರ್‌ಗಳ ನಂತರ ಮೈಕೆಲ್ ನೆಸರ್ ಅವರು ಬೀಸಿದ ಎಲ್‌ಬಿಡಬ್ಲ್ಯು ಬಲೆಯಲ್ಲಿ ಕ್ರಾಲಿ ಬಿದ್ದರು. ಆತಿಥೇಯ ವೇಗಿ ಸ್ಕಾಟ್ ಬೊಲ್ಯಾಂಡ್ ಎಸೆತದಲ್ಲಿ ಅಲೆಕ್ಸ್ ಕ್ಯಾರಿಗೆ ಕ್ಯಾಚ್ ಕೊಟ್ಟ ಜೇಕಬ್ ಬೆಥೆಲ್ ಆಟಕ್ಕೆ ತೆರೆ ಬಿತ್ತು. ಈ ಹೊತ್ತಿನಲ್ಲಿ ರೂಟ್ ಮತ್ತು ಬ್ರೂಕ್ ಎಚ್ಚರಿಕೆಯ ಆಟವಾಡುತ್ತ ಇನಿಂಗ್ಸ್‌ಗೆ ಚೇತರಿಕೆ ನೀಡಿದರು.

ಸರಣಿಯ ಕಳೆದ ನಾಲ್ಕು ಪಂದ್ಯಗಳಲ್ಲಿ ಆಸ್ಟ್ರೇಲಿಯಾ 3 ಗೆದ್ದಿದೆ. ಒಂದರಲ್ಲಿ ಮಾತ್ರ ಇಂಗ್ಲೆಂಡ್ ಗೆದ್ದಿತ್ತು.

**ಸಂಕ್ಷಿಪ್ತ ಸ್ಕೋರು**

ಇಂಗ್ಲೆಂಡ್: 45 ಓವರ್‌ಗಳಲ್ಲಿ 3ಕ್ಕೆ211 (ಬೆನ್ ಡಕೆಟ್ 27, ಜೋ ರೂಟ್ ಬ್ಯಾಟಿಂಗ್ 72, ಹ್ಯಾರಿ ಬ್ರೂಕ್ ಬ್ಯಾಟಿಂಗ್ 78, ಮಿಚೆಲ್ ಸ್ಟಾರ್ಕ್ 53ಕ್ಕೆ1, ಮೈಕೆಲ್ ನೆಸರ್ 36ಕ್ಕೆ1, ಸ್ಕಾಟ್ ಬೊಲ್ಯಾಂಡ್ 48ಕ್ಕೆ1) ವಿರುದ್ಧ ಆಸ್ಟ್ರೇಲಿಯಾ.

# ಭಾರತಕ್ಕೆ ತಂಡ ಕಳುಹಿಸದಿರಲು ಬಾಂಗ್ಲಾ ನಿರ್ಧಾರ

• ಪ್ರಜೋದಯ ವರದಿ

**ಢಾಕಾ:** ಭಾರತದಲ್ಲಿ ನಡೆಯಲಿರುವ ಐಸಿಸಿ ಟಿ-20 ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಗೆ ತಂಡ ವನ್ನು ಕಳುಹಿಸದಿರಲು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯು(ಬಿಸಿಬಿ) ನಿರ್ಧರಿಸಿದೆ ಎಂದು ಬಾಂಗ್ಲಾದ ಸ್ಥಳೀಯ ಮಾಧ್ಯಮ ಡೈಲಿ ಸ್ಟಾರ್ ವರದಿ ಉಲ್ಲೇಖಿಸಿ ಎಎನ್ಐ ವರದಿ ಮಾಡಿದೆ.

ಬಾಂಗ್ಲಾದೇಶ ತಂಡ ಆಡಲಿರುವ ಪಂದ್ಯಗಳನ್ನು ಶ್ರೀಲಂಕಾಗೆ ಸ್ಥಳಾಂತರಿಸುವಂತೆಯೂ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಗೆ(ಐಸಿಸಿ) ಬಿಸಿಬಿ ಒತ್ತಾಯಿಸಿದೆ. ಈ ಕುರಿತಂತೆ ಬಿಸಿಬಿ ಅಧಿಕೃತ ಹೇಳಿಕೆಯನ್ನೂ ಬಿಡುಗಡೆ ಮಾಡುವ ಸಾಧ್ಯತೆ ಇದೆ.

ಬಿಸಿಸಿಐ ನಿರ್ದೇಶನದ ಬಳಿಕ ಬಾಂಗ್ಲಾ ಕ್ರಿಕೆಟ್ ಆಟಗಾರ, ವೇಗಿ ಮುಸ್ತಫಿಝುರ್ ರೆಹಮಾನ್ ಅವರನ್ನು ಐಪಿಎಲ್‌ನ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದಿಂದ ಕೈಬಿಟ್ಟಿರುವುದಾಗಿ ಫ್ರಾಂಚೈಸಿ ಘೋಷಿಸಿದ ಬಳಿಕ ಈ ಬೆಳವಣಿಗೆ ಆಗಿದೆ. ಮುಸ್ತಫಿಝುರ್ ರೆಹಮಾನ್ ಅವರನ್ನು ತಂಡದಿಂದ ಕೈಬಿಡುವಂತೆ ಬಿಸಿಸಿಐ ನಿರ್ದೇಶಿಸಿದೆ ಎಂದು ಕೆಕೆಆರ್ ಪ್ರಕಟಣೆಯಲ್ಲಿ ತಿಳಿಸಿತ್ತು.




ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ದಾಳಿ ತೀವ್ರಗೊಂಡಿರುವ ಬೆನ್ನಲ್ಲೇ ಬಾಂಗ್ಲಾದ ಆಟ ಗಾರನನ್ನು ಕೈಬಿಡುವಂತೆ ಒತ್ತಡ ಹೆಚ್ಚಾದ ಹಿನ್ನೆಲೆ ಬಿಸಿಸಿಐ, ಕೆಕೆಆರ್‌ಗೆ ನಿರ್ದೇಶನ ನೀಡಿತು. ಅಲ್ಲದೆ, ಯಾವುದೇ ಪರ್ಯಾಯ ಆಯ್ಕೆಯನ್ನು ಅನುಮೋದಿಸುವುದಾಗಿಯೂ ಭರವಸೆ ನೀಡಿದೆ ಎಂಬುದಾಗಿ ದೇವಜಿತ್ ಸೈಕಿಯಾ ಎಎನ್ಐಗೆ ತಿಳಿಸಿದ್ದಾರೆ.

ಕಳೆದ ವರ್ಷ ಡಿಸೆಂಬರ್‌ನಲ್ಲಿ ನಡೆದ ಐಪಿಎಲ್ ಆಟಗಾರರ ಹರಾಜಿನಲ್ಲಿ ಕೆಕೆಆರ್ ತಂಡ 9.20 ಕೋಟಿಗೆ ಮುಸ್ತಫಿಝುರ್ ಅವರನ್ನು ಖರೀದಿಸಿತ್ತು. ಫೆ.7ರಂದು ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ನಡೆಯಲಿರುವ ವೆಸ್ಟ್‌ಇಂಡೀಸ್ ವಿರುದ್ಧದ ಪಂದ್ಯದ ಮೂಲಕ ಬಾಂಗ್ಲಾದೇಶ ತನ್ನ ಟಿ-20 ವಿಶ್ವಕಪ್ ಅಭಿಯಾನವನ್ನು ಆರಂಭಿಸಲಿದೆ. ಬಳಿಕ ಫೆ.9 ರಂದು ಇಟಲಿಯನ್ನು ಎದುರಿಸಲಿದೆ.

## ಐಪಿಎಲ್‌ನಲ್ಲಿ ಬಾಂಗ್ಲಾದೇಶಿಗರಿಗೆ ಅವಕಾಶ ಬೇಡ: ದಿಲೀಪ್ ಘೋಷ್

• ಪ್ರಜೋದಯ ವರದಿ

**ಕೋಲ್ಕತ್ತಾ:** ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಐಪಿಎಲ್) ಪಾಕಿಸ್ತಾನದ ಕ್ರಿಕೆಟಿಗರಿಗೆ ಅವಕಾಶ ನಿರಾಕರಿಸಿರುವಂತೆಯೇ, ಬಾಂಗ್ಲಾದೇಶದ ಕ್ರಿಕೆಟಿಗರಿಗೂ ಅವಕಾಶ ನೀಡಬಾರದು ಎಂದು ಪಶ್ಚಿಮ ಬಂಗಾಳ ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ದಿಲೀಪ್ ಘೋಷ್ ಹೇಳಿದ್ದಾರೆ.

ಬಾಂಗ್ಲಾದ ವೇಗದ ಬೌಲರ್ ಮುಸ್ತಫಿಝುರ್ ರೆಹಮಾನ್ ಅವರನ್ನು 2026ರ ಐಪಿಎಲ್ ತಂಡದಿಂದ ಬಿಡುಗಡೆ ಮಾಡುವಂತೆ ಕೋಲ್ಕತ್ತಾ ನೈಟ್ ರೈಡರ್ಸ್‌ಗೆ (ಕೆಕೆಆರ್) ಬಿಸಿಸಿಐ ನೀಡಿದ ಆದೇಶವನ್ನು ಘೋಷ್ ಸ್ವಾಗತಿಸಿದ್ದಾರೆ.

ಬಾಂಗ್ಲಾದಲ್ಲಿ ನಡೆಯುತ್ತಿರುವುದು ಯಾರಿಗೂ ಒಳ್ಳೆಯದಲ್ಲ. ಹಿಂದೂಗಳ ವಿರುದ್ಧ ನಡೆಯುತ್ತಿರುವ ದೌರ್ಜನ್ಯದಿಂದ ಪಶ್ಚಿಮ ಬಂಗಾಳದ ಜನರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದು ಅಮಾನವೀಯ ಎಂದು ಪಶ್ಚಿಮ ಮೇದಿನಿಪುರ ಜಿಲ್ಲೆಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.



ಬಾಂಗ್ಲಾದಲ್ಲಿ ಚುನಾವಣೆ ನಡೆದು ಸ್ಥಿರ ಸರ್ಕಾರ ರಚನೆಯಾಗಲಿ. ಕಾನೂನು ಮತ್ತು ಸುವ್ಯವಸ್ಥೆ ಪುನರ್ ಸ್ಥಾಪನೆಯಾಗಲಿ ಎಂದು ನಾವು ಬಯಸುತ್ತೇವೆ. ಅದರಿಂದ ಜೀವಗಳು ಮತ್ತು ಆಸ್ತಿಯ ರಕ್ಷಣೆಯಾಗುತ್ತದೆ. ಗಡಿಯಲ್ಲಿನ ಉದ್ವಿಗ್ನತೆಯೂ ಕಡಿಮೆಯಾಗಲಿದೆ ಎಂದು ಹೇಳಿದ್ದಾರೆ.

ಪಶ್ಚಿಮ ಬಂಗಾಳದ ಬೇಡಿಕೆಯನ್ನು ಪರಿಗಣಿಸಿ, ಐಪಿಎಲ್‌ನಿಂದ ಬಾಂಗ್ಲಾದ ಕ್ರಿಕೆಟಿಗನನ್ನು ಹೊರಗಿಟ್ಟ ಬಿಸಿಸಿಐಗೆ ಧನ್ಯವಾದ ಹೇಳುತ್ತೇನೆ ಎಂದಿದ್ದಾರೆ.

# ವೈಟ್ ಕಾಲರ್ ಭಯೋತ್ಪಾದನೆ ಆತಂಕಕಾರಿ

• ಪ್ರಜೋದಯ ವರದಿ



**ನವದೆಹಲಿ :** ದೇಶದಲ್ಲಿ ವೈಟ್ ಕಾಲರ್ ಭಯೋತ್ಪಾದನೆಯ ಆತಂಕಕಾರಿ ಪ್ರವೃತ್ತಿ ಹೊರಹೊಮ್ಮುತ್ತಿದ್ದು, ಉನ್ನತ ಶಿಕ್ಷಣ ಪಡೆದ ವ್ಯಕ್ತಿಗಳು ಸಮಾಜ ವಿರೋಧಿ ಮತ್ತು ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಎಚ್ಚರಿಸಿದ್ದಾರೆ.

ಭೂಪಾಲ್ ನೋಬಲ್ ವಿಶ್ವ ವಿದ್ಯಾಲಯದ 104ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನವೆಂಬರ್ 10ರಂದು ದೆಹಲಿಯ ಕೆಂಪು ಕೋಟೆಯ ಬಳಿ ನಡೆದ ಕಾರ್ ಬಾಂಬ್ ಸ್ಫೋಟವನ್ನು ಉಲ್ಲೇಖಿಸಿ ಆರೋಪಿಗಳು ವೈದ್ಯರು ಎಂದು ಕಂಡು ಬಂದಿರುವುದು ಆಘಾತಕಾರಿ ಬೆಳವಣಿಗೆ. ಇಂದು, ದೇಶದಲ್ಲಿ ವೈಟ್ ಕಾಲರ್ ಭಯೋತ್ಪಾದನೆಯ ಆತಂಕಕಾರಿ ಪ್ರವೃತ್ತಿ ಹೊರಹೊಮ್ಮುತ್ತಿದೆ. ಉನ್ನತ ವಿದ್ಯಾವಂತರು ಸಮಾಜ ಮತ್ತು ದೇಶದ ವಿರುದ್ಧ ಕೆಲಸ ಮಾಡುತ್ತಿದ್ದಾರೆಂದು ಸಚಿವರು ಹೇಳಿದರು.

ದೆಹಲಿ ಬಾಂಬ್ ಸ್ಫೋಟದ ಸಂಚುಕೋರರು ವೈದ್ಯರು, ಪ್ರಿಸ್ಕ್ರಿಪ್ಷನ್ ಮೇಲೆ ಆರ್‌ಎಕ್ಸ್ ಬರೆಯುವವರು. ಆದರೆ, ಅವರ ಕೈಯಲ್ಲಿ ಆರ್‌ಡಿಎಕ್ಸ್ ಇದೆ. ಇದು ಮೌಲ್ಯಗಳು ಮತ್ತು ಚಾರಿತ್ರ್ಯದೊಂದಿಗೆ ಜ್ಞಾನದ ಅಗತ್ಯವನ್ನು ಎತ್ತಿ ತೋರಿಸುತ್ತದೆ. ಶಿಕ್ಷಣದ ಉದ್ದೇಶವು ವೃತ್ತಿಪರ ಯಶಸ್ಸನ್ನು ಮೀರಿದೆ ಮತ್ತು ನೈತಿಕತೆ ಹಾಗೂ ಮಾನವ ಪಾತ್ರದ ಬೆಳವಣಿಗೆಯನ್ನು ಒಳಗೊಂಡಿರಬೇಕೆಂದು ಸಿಂಗ್ ಹೇಳಿದರು.

ಶಿಕ್ಷಣದ ಉದ್ದೇಶವು ವೃತ್ತಿಪರ ಯಶಸ್ಸು ಮಾತ್ರವಲ್ಲದೆ ನೈತಿಕತೆ ಮತ್ತು ಮಾನವ ಪಾತ್ರದ ಅಭಿವೃದ್ಧಿಯೂ ಆಗಿದೆ. ನವೆಂಬರ್ 10ರಂದು ಕೆಂಪು ಕೋಟೆಯ ಹೊರಗೆ ಸ್ಫೋಟಗೊಂಡ ಸ್ಫೋಟಕಗಳನ್ನು ತುಂಬಿದ ಐ-20 ಕಾರು 15 ಜನರ ಸಾವಿಗೆ ಕಾರಣವಾಯಿತು. ಈ ಆತ್ಮಾಹುತಿ ಕಾರನ್ನು ಡಾ.ಉಮರ್ ಉನ್ ನಬಿ ಅವರು ಚಾಲನೆ ಮಾಡುತ್ತಿದ್ದನು. ತನಿಖಾಧಿಕಾರಿಗಳು ನಂತರ ವೈಟ್ ಕಾಲರ್ ಭಯೋತ್ಪಾದಕ ಮಾಡ್ಯೂಲ್ ಅನ್ನು ಬಹಿರಂಗಪಡಿಸಿದರು. ಇದು ಮುಜಮ್ಮಿಲ್ ಗನ್ನೈ, ಅದೀಲ್ ರಾಥರ್ ಮತ್ತು ಶಾಹೀನಾ ಸಯೀದ್ ಸೇರಿ ಮೂವರು ವೈದ್ಯರನ್ನು ಬಂಧಿಸಲು ಕಾರಣವಾಯಿತು ಎಂದರು.

ಜ್ಞಾನವು ಸಾಮರ್ಥ್ಯಕ್ಕೆ, ಸಾಮರ್ಥ್ಯವನ್ನು ಸಮೃದ್ಧಿಗೆ ಮತ್ತು ಸಮೃದ್ಧಿಯನ್ನು ಸದಾಚಾರಕ್ಕೆ ಕರೆದೊಯ್ಯುತ್ತದೆ ಎಂದು ರಾಜನಾಥ್ ಸಿಂಗ್ ಹೇಳಿದರು. ನಿಜವಾದ ಸಂತೋಷವು ಅಂತಿಮವಾಗಿ ಸದಾಚಾರದಿಂದ ಬರುತ್ತದೆ. ಈ ಉದ್ದೇಶವನ್ನು ಪೂರೈಸಲು ಸಾಧ್ಯವಾಗದ ಯಾವುದೇ ಶಿಕ್ಷಣ ವ್ಯವಸ್ಥೆ, ಜ್ಞಾನದ ಜತೆಗೆ ನಮ್ರತೆ, ಚಾರಿತ್ರ್ಯ ಮತ್ತು ಧರ್ಮದ ಪ್ರಜ್ಞೆಯನ್ನು ನೀಡದಿದ್ದರೆ ಅದು ಅಪೂರ್ಣವಾಗಿದೆ ಎಂದರು.

ಧರ್ಮದ ಬಗ್ಗೆ ತಮ್ಮ ಹೇಳಿಕೆಯನ್ನು ಸ್ಪಷ್ಟಪಡಿಸಿದ ಸಿಂಗ್ ಅವರು, ನಾನು ಧರ್ಮದ ಬಗ್ಗೆ ಮಾತನಾಡುವಾಗ, ಅದನ್ನು ದೇವಾಲಯ, ಮಸೀದಿ ಅಥವಾ ಚರ್ಚ್ ಗೆ ಪ್ರಾರ್ಥನೆಗಾಗಿ ಹೋಗುವುದರೊಂದಿಗೆ ಸಂಬಂಧ ಮಾಡಬಾರದು. ಧರ್ಮವು ಕರ್ತವ್ಯದ ಪ್ರಜ್ಞೆಯಾಗಿದೆ. ಧರ್ಮ ಮತ್ತು ನೈತಿಕತೆ ಇಲ್ಲದ ಶಿಕ್ಷಣವು ಸಮಾಜಕ್ಕೆ ಉಪಯುಕ್ತವಾಗುವುದಿಲ್ಲ ಮತ್ತು ಕೆಲವೊಮ್ಮೆ ಅದು ಮಾರಣಾಂತಿಕವೆಂದು ಸಾಬೀತುಪಡಿಸಬಹುದು. ಅದಕ್ಕಾಗಿಯೇ ವಿದ್ಯಾವಂತರು ಕೆಲವೊಮ್ಮೆ ಅಪರಾಧಗಳಲ್ಲಿ ಭಾಗಿಯಾಗಿರುವುದು ಕಂಡು ಬರುತ್ತದೆ ಎಂದು ಹೇಳಿದರು.

ಭಯೋತ್ಪಾದಕರು ಅನಕ್ಷರಸ್ಥರಲ್ಲ ಮತ್ತು ವಿಶ್ವವಿದ್ಯಾಲಯ ಅಥವಾ ಕಾಲೇಜು ಪದವಿಗಳನ್ನು ಹೊಂದಿರಬಹುದು. ಆದರೆ, ಬುದ್ಧಿವಂತಿಕೆಯ ಕೊರತೆಯಿಂದಾಗಿ ಭಯೋತ್ಪಾದನೆಯತ್ತ ತಿರುಗುತ್ತಾರೆ. ಆದ್ದರಿಂದ, ಬುದ್ಧಿವಂತಿಕೆ ಅತ್ಯಗತ್ಯವೆಂದು ಹೇಳಿದ ಸಿಂಗ್ ಅವರು, ಅನೇಕ ರಕ್ಷಣಾ ಸ್ಟಾರ್ಟ್‌ಅಪ್‌ಗಳು ಗಮನಾರ್ಹ ಕೆಲಸ ಮಾಡುತ್ತಿವೆ. ಮುಂದಿನ 15 ರಿಂದ 20 ವರ್ಷಗಳಲ್ಲಿ ಭಾರತವು ಶಸ್ತ್ರಾಸ್ತ್ರಗಳಲ್ಲಿ ಸಂಪೂರ್ಣ ಸ್ವಾವಲಂಬಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆಯಂತಹ ತಂತ್ರಜ್ಞಾನಗಳು ಜೀವನ ಮತ್ತು ಕೆಲಸದಲ್ಲಿ ಪರಿವರ್ತನೆ ತರುತ್ತಿವೆ ಮತ್ತು ಭಾರತದ ಅಭಿವೃದ್ಧಿಗೆ ಚಾಲನೆ ನೀಡಲು ಅವುಗಳನ್ನು ಧನಾತ್ಮಕವಾಗಿ ಬಳಸಬೇಕು. ಭಾರತವು ಪ್ರಸ್ತುತ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ ಮತ್ತು 2030 ರ ವೇಳೆಗೆ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗುವ ಹಾದಿಯಲ್ಲಿದೆ. ಸ್ವಾಭಿಮಾನ ಮತ್ತು ಅಹಂ ನಡುವಿನ ಉತ್ತಮ ಸಮತೋಲನವನ್ನು ಅರ್ಥಮಾಡಿಕೊಳ್ಳುವ ಮಹತ್ವವನ್ನು ಒತ್ತಿ ಹೇಳಿದ ಅವರು, ಆ ರೇಖೆಯನ್ನು ದಾಟದಂತೆ ಜನರನ್ನು ಒತ್ತಾಯಿಸಿದರು

## ರಾಜ್ಯದ ಕೂಲಿ ಕಾರ್ಮಿಕರ ದಾರಿತಪ್ಪಿಸುತ್ತಿದೆ: ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಪ್ರಹ್ಲಾದ್ ಜೋಶಿ ಕಿಡಿ

• ಪ್ರಜೋದಯ ವರದಿ



**ಹುಬ್ಬಳ್ಳಿ :** ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ರಾಜ್ಯ ಸರ್ಕಾರ ಸುಳ್ಳು ಹೇಳುತ್ತಾ, ರಾಜ್ಯದ ಕೂಲಿ ಕಾರ್ಮಿಕರ ದಾರಿತಪ್ಪಿಸುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನರೇಗಾ ಯೋಜನೆಯನ್ನು ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಎಂದು ಪರಿವರ್ತನೆಗೊಳಿಸಲಾಗಿದ್ದು, ಅದರಲ್ಲಿಯೂ ಪ್ರತಿ ಪಕ್ಷದವರು ರಾಜಕೀಯ ಮಾಡುತ್ತಿರುವುದು ಅವರ ಮೌಢ್ಯವನ್ನು ತೋರಿಸುತ್ತದೆ. ಯೋಜನೆ ಪಾರದರ್ಶಕವಾಗಿ ಮತ್ತು ಸಮರ್ಥವಾಗಿ ಜಾರಿಯಾಗುವುದನ್ನು ಸಹಿಸದ ಪ್ರತಿಪಕ್ಷಗಳು ಈ ಯೋಜನೆಯ ಬಗ್ಗೆ ಸುಳ್ಳು ವದಂತಿಗಳನ್ನು ಹರಡುತ್ತಿವೆ ಎಂದು ದೂರಿದರು.

ನರೇಗಾ ಯೋಜನೆಯಲ್ಲಿ ಪ್ರತಿ ವರ್ಷ ನೂರು ದಿನಗಳ ಉದ್ಯೋಗ ಖಾತರಿ ಇತ್ತು . ಈಗ 125 ದಿನಗಳಿಗೆ ಹೆಚ್ಚಳ ಮಾಡಲಾಗಿದೆ. ಇದರಿಂದ ಗ್ರಾಮೀಣ ಜನರಿಗೆ ಉದ್ಯೋಗಾವಕಾಶದ ಭರವಸೆಯೊಂದಿಗೆ ಆದಾಯದ ಭದ್ರತೆಯು ಹೆಚ್ಚಾಗಲಿದೆ. ಪ್ರತಿ ದಿನ ಕೂಲಿ 370 ರೂ.ಆಗಿದೆ. ಮುಂದೆಯೂ ಆಯಾ ಗ್ರಾಮ ಪಂಚಾಯಿತಿಗಳೇ ಯೋಜನೆಯ ಕೇಂದ್ರವಾಗಿರಲಿದೆ. ಆದರೆ, ಅದನ್ನು ಕೇಂದ್ರ ಸರ್ಕಾರ ನಿರ್ಧಾರ ಮಾಡುತ್ತದೆ ಎಂಬ ಭೀತಿಯನ್ನು ಕಾಂಗ್ರೆಸ್ ಮೂಡಿಸುತ್ತಿದೆ ಎಂದು ಕಿಡಿಕಾರಿದರು.

ಕೃಷಿ ಚಟುವಟಿಕೆಗಳಿಗೆ ರೈತರಿಗೆ ಅನುಕೂಲ ಮಾಡಿಕೊಡಲು ವರ್ಷದಲ್ಲಿ 60 ದಿನಗಳ ಬಿಡುವು ನೀಡಲಾಗಿದೆ. ಇಂತಹ ರೈತ ಸ್ನೇಹಿ ನಿಯಮಕ್ಕೆ ರಾಜ್ಯ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದ್ದು, ಕೃಷಿ ವಿರೋಧಿ ನೀತಿ ಅನುಸರಿಸುತ್ತಿದೆ. ಹಿಂದೆ ಕೂಲಿಕಾರರ ಹೆಸರು ಹೇಳಿ ನರೇಗಾ ಯೋಜನೆ ದುರ್ಬಳಕೆ ಮಾಡಲಾಗುತ್ತಿತ್ತು. ಅದಕ್ಕಾಗಿ ಬಯೋಮೆಟ್ರಿಕ್ ತಂತ್ರಜ್ಞಾನ ಬಳಕೆ ಕಡ್ಡಾಯ ಮಾಡಲಾಗಿದೆ. ರಾಜ್ಯ ಸರ್ಕಾರಗಳು ಅನಗತ್ಯ ವೆಚ್ಚ ಕಡಿಮೆ ಮಾಡಲು ಭ್ರಷ್ಟಾಚಾರಕ್ಕೆ ಕಡಿವಾಣಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರ 60:40 ಅನುಪಾತದಲ್ಲಿ ನಿಗದಿ ಮಾಡಲಾಗಿದೆ ಎಂದು ಹೇಳಿದರು

ಸರ್ಕಾರದ ಆಡಳಿತಾತ್ಮಕ ಹಿತದೃಷ್ಟಿಯಿಂದ ಮತ್ತು ಕಾಲಾನುಕಾಲಕ್ಕೆ ಯೋಜನೆಗಳಲ್ಲಿ ಪಾರದರ್ಶಕತೆ ಮತ್ತು ಪರಿಣಾಮ ತರುವ ನಿಟ್ಟಿನಲ್ಲಿ ಕೆಲ ಯೋಜನೆಗಳಲ್ಲಿ ಅಗತ್ಯ ಪರಿಷ್ಕರಣೆ ತರುವುದು ಅವಶ್ಯವಾಗಿರುತ್ತದೆ. ಈ ಬದಲಾವಣೆಯ ಮುಖ್ಯ ಉದ್ದೇಶ ಜನರ ಜೀವನೋಪಾಯವನ್ನು ಬಲಪಡಿಸುವ ಕಲ್ಯಾಣ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ಅವೆರಡನ್ನು ಒಟ್ಟಾಗಿ ತೆಗೆದುಕೊಂಡು ಹೋಗಬೇಕಿದೆ. ಏಕೆಂದರೆ ಇವೆರಡೂ ಒಂದಕ್ಕೊಂದು ಪೂರಕ ಮತ್ತು ಅನಿವಾರ್ಯ ಎಂದರು.

ಯೋಜನೆಯು ಬೇಡಿಕೆ ಆಧಾರಿತ ಯೋಜನೆಯಾಗಿತ್ತು. ಆದರೆ, ಇದು ಆಗ ಪರಿವರ್ತಿತ ವಾಗಿತ್ತು. ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಇದ್ದ ಅತಿ ದೊಡ್ಡ ಸಮಸ್ಯೆ ಎಂದರೆ ಸೂಕ್ತ ಸಮಯದಲ್ಲಿ ಕೂಲಿ ಮತ್ತು ಸಾಮಗ್ರಿ ವೆಚ್ಚದ ಪಾವತಿ. ಹೊಸ ಪರಿಷ್ಕೃತ ಯೋಜನೆಯಡಿ ಇರುವುದ ರಿಂದ ಈ ಮೊದಲು ಇದ್ದ ಎಲ್ಲಾ ಗೊಂದಲಗಳಿಗೆ ಫುಲ್ ಸ್ಟಾಪ್ ಬೀಳಲಿದೆ ಎಂದೂ ಸಚಿವ ಜೋಶಿ ಹೇಳಿದ್ದಾರೆ.

## ಎರಡು ದಿನಗಳ ಎಜುಕೇಷನ್ ಎಕ್ಸ್‌ಪೋಗೆ ತೆರೆ



• ಪ್ರಜೋದಯ ವರದಿ

**ಹಾಸನ:** ಜನಮಿತ್ರ ಪ್ರಾದೇಶಿಕ ಪತ್ರಿಕೆ ಎರಡನೇ ಬಾರಿಗೆ ಆಯೋಜಿಸಿದ್ದ 2 ದಿನಗಳ ಎಜುಕೇಶನ್ ಎಕ್ಸ್‌ಪೋಗೆ ಬೆಂಬಲ ವ್ಯಕ್ತ ವಾಯಿತು.

ನಗರದ ಅನ್ನಪೂರ್ಣೇಶ್ವರಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಎಕ್ಸ್‌ಪೋಗೆ ಜನಪ್ರತಿನಿಧಿಗಳು ಸೇರಿ ವಿವಿಧ ಕ್ಷೇತ್ರಗಳ ಗಣ್ಯರು ಭೇಟಿ ನೀಡಿ ಮೆಚ್ಚುಗೆ ಸೂಚಿಸಿದರು. ಎಕ್ಸ್‌ಪೋ ಮೊದಲ ದಿನವಾದ ಶನಿವಾರ ಪದ್ಮಶ್ರೀ ಪುರಸ್ಕೃತ ಖ್ಯಾತ ವೈದ್ಯೆ ಡಾ|| ವಿಜಯಲಕ್ಷ್ಮಿ ದೇಶಮಾನೆ ಅವರು ಚಾಲನೆ ನೀಡಿ ಮೌಲ್ಯಯುತ ಸಂದೇಶ ನೀಡಿದರು.

ಭವಿಷ್ಯದಲ್ಲಿ ಉನ್ನತ ಶಿಕ್ಷಣದ ಬಗ್ಗೆ ಶಿವಮೊಗ್ಗಾ ಜಿಲ್ಲೆ ಶಿಕಾರಿಪುರದ ಶಿಕ್ಷಣ ತಜ್ಞ ಬಿ.ಮಂಜುನಾಥ ಅವರು ನೀಡಿದ ಮಾಹಿತಿಗೆ ಮಕ್ಕಳು ಮಾರುಹೋದರು. ಹಾಗೆಯೇ ಅಂತಿಮ ಸ್ಮರಣೆ ಮತ್ತು ಅಧ್ಯಯನ ಕೌಶಲ್ಯಗಳ ಬಗೆಗಿನ ಉಪಯುಕ್ತ ಸಲಹೆ ಸೂಚನೆ ಹಿತ ಎನಿಸಿತು.ಚೆಸ್ ಸ್ಪರ್ಧೆಯಲ್ಲಿ ವಿವಿಧ ಹಂತದ ಮಕ್ಕಳು ಅತ್ಯುತ್ಸಾಹದಿಂದ ಪಾಲ್ಗೊಂಡು ಹಿಗ್ಗಿದರು. ಮಣ್ಣಿನ ಕೆತ್ತನೆ ಕಾರ್ಯಾಗಾರ ಆಕರ್ಷಿಸಿತು. ವೇಷ ಭೂಷಣದೊಂದಿಗೆ ಮಕ್ಕಳ ಏಕ ಪಾತ್ರಾಭಿನಯ ಸ್ಪರ್ಧೆ ನೆರೆದಿದ್ದವರ ಮೆಚ್ಚುಗೆಗೆ ಪಾತ್ರವಾಯಿತು.

ಸಂಜೆ 7.30 ನಂತರ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರನ್ನು ಮನಸೂರೆಗೊಂಡವು. ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಸಹಭಾಗಿತ್ವದಲ್ಲಿ ನಡೆದ ಜಾಬ್ ಮೇಳಕ್ಕೂ ಉತ್ತಮ ಸ್ಪಂದನೆ ವ್ಯಕ್ತವಾಯಿತು.

ಎಐ-ದಿ ನ್ಯೂ ಜೆಇಎನ್ ಟೀಚರ್ ಬಗ್ಗೆ ಬೆಂಗಳೂರಿನ ಎಐ ಮತ್ತು ಡೇಟಾ ಜರ್ನಲಿಸಂ ಸ್ಪೆಷಲಿಸ್ಟ್ ಡಾ. ಬಿ.ಬಿ.ರವೀಂದ್ರನ್ ಅವರು ನವನವೀನ ವಿಧಾನ ಮತ್ತು ಕೌಶಲಗಳನ್ನು ಮನವರಿಕೆ ಮಾಡಿಕೊಟ್ಟರು. ಈ ಕಾರ್ಯಕ್ರಮ ನಿಜಕ್ಕೂ ಮೌಲಿಕ ಮತ್ತು ಸಕಾಲಿಕ ಎನಿಸಿತು. ಚಿತ್ರಕಲಾ ಸ್ಪರ್ಧೆಯು ಮಕ್ಕಳ ಒಳಗಿನ ಕಲಾವಂತಿಕೆಯನ್ನು ಅನಾವರಣಗೊಳಿಸಿತು. ಅಂತಿಮ ದಿನದಂದು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಿ ಹುರುದುಂಬಿಸಲಾಯಿತು. ಬಳಿಕ ಚೆಸ್ ಮತ್ತು ಚಿತ್ರಕಲಾ ಸ್ಪರ್ಧೆಯಲ್ಲಿ ಶ್ಲೋಕ ಪಠಣ ಸ್ಪರ್ಧೆ ಮಕ್ಕಳ ಬುದ್ಧಿಮತ್ತೆ, ಜ್ಞಾಪಕ ಶಕ್ತಿಗೆ ಕನ್ನಡಿ ಹಿಡಿಯಿತು. ಹೊರಾಂಗಣದಲ್ಲಿ ವಿವಿಧ ಆಟಿಕೆ ಸಾಧನ ಅಳವಡಿಸಲಾಗಿತ್ತು. ರಜಾ ದಿನ ಆದ್ದರಿಂದ ಮಕ್ಕಳು ಕುಣಿದು, ಕುಪ್ಪಳಿಸಿ ಸಂಭ್ರಮಿಸಿದರು.

## ಮರ್ಯಾದೆಗೇಡು ಹತ್ಯೆ ತಡೆಗೆ ವಿಶೇಷ ಕಾನೂನು: ಸಿದ್ದರಾಮಯ್ಯ ಅಧಿಕೃತ ಘೋಷಣೆ

• ಪ್ರಜೋದಯ ವರದಿ



**ಬೆಂಗಳೂರು :** ಹುಬ್ಬಳ್ಳಿಯಲ್ಲಿ ನಡೆದ ಆರು ತಿಂಗಳ ಗರ್ಭಿಣಿಯ ಮರ್ಯಾದಾ ಹತ್ಯೆ ಇಡೀ ರಾಜ್ಯವನ್ನೇ ಬೆಚ್ಚಿಬೀಳಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮರ್ಯಾದಾ ಹತ್ಯೆ ತಡೆಗೆ ಹೊಸ ಕಾನೂನು ಜಾರಿಗೊಳಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ.

ಈ ಕುರಿತು ಭಾನುವಾರ ಸಾಮಾಜಿಕ ಜಾಲತಾಣಗಳಲ್ಲಿ ಸಿದ್ದರಾಮಯ್ಯ ಅವರು ಮಾಹಿತಿ ಹಂಚಿಕೊಂಡಿದ್ದು, ಮರ್ಯಾದೆಗೇಡು ಹತ್ಯೆಯಂತಹ ಘಟನೆಗಳು ಇಡೀ ಮಾನವ ಸಮಾಜ ತಲೆತಗ್ಗಿಸುವಂತಹ ಹೀನ ಕೃತ್ಯಗಳು. ಯಾವುದೇ ಕಾರಣಕ್ಕೂ ನಮ್ಮ ಸರ್ಕಾರ ಇದನ್ನು ಸಹಿಸುವುದಿಲ್ಲ. ಮುಂದೆ ಇಂತಹ ಘಟನೆಗಳಿಗೆ ಕಡಿವಾಣ ಹಾಕುವ ಹಾಗೂ ಜನರಲ್ಲಿ ಕಾನೂನಿನ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ವಿಶೇಷ ಕಾನೂನು ರಚನೆ ಮಾಡಲಾಗುವುದೆಂದು ಹೇಳಿದ್ದಾರೆ.

ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದ ಮಾನ್ಯಾಳ ಮರ್ಯಾದೆಗೇಡು ಹತ್ಯೆಗೆ ಸಂಬಂಧಿಸಿದಂತೆ ಪ್ರಕರಣದ ತ್ವರಿತ ವಿಚಾರಣೆ ನಡೆದು, ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡುವುದು ನಮ್ಮ ಪ್ರಮುಖ ಆದ್ಯತೆ. ಈ ಹಿನ್ನೆಲೆಯಲ್ಲಿ ತ್ವರಿತಗತಿ ನ್ಯಾಯಾಲಯ ರಚನೆಗೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದ್ದಾರೆ.

ಹುಬ್ಬಳ್ಳಿ ಘಟನೆಗೆ ಸಂಬಂಧಿಸಿದಂತೆ ದಲಿತರ ಮೇಲಿನ ದೌರ್ಜನ್ಯ ಹಾಗೂ ಕೊಲೆ ಪ್ರಕರಣ ದಾಖಲಾಗಿದೆ. ಇದು ಅಟ್ರಾಸಿಟಿ ಪ್ರಕರಣವಾಗಿರುವುದರಿಂದ 60 ದಿನಗಳೊಳಗಾಗಿ ದೋಷರೋಪ ಪಟ್ಟಿ ಸಲ್ಲಿಸಬೇಕಾಗಿದೆ. ಹೀಗಾಗಿ ಖಾಸಗಿ ಪ್ರಾಸಿ ಕ್ಯೂಟರ್‌ರನ್ನು ನೇಮಕ ಮಾಡಿಕೊಳ್ಳಲು ಕ್ರಮ ವಹಿಸಲಾಗಿದೆ ಎಂದಿದ್ದಾರೆ.

ಹೆಣ್ಣು ಮಗಳೊಬ್ಬಳ ನಿಲುವಿಗೆ ವಿರುದ್ಧವಾಗಿ ಮದುವೆಗೆ ಬಲವಂತಪಡಿಸುವುದು ಅಥವಾ ಮದುವೆ ನಿರಾಕರಿಸುವುದು, ಜಾತಿಯಾಧಾರಿತ ಹಿಂಸೆ -ಹಲ್ಲೆ, ಮರ್ಯಾದೆಗೇಡು ಹತ್ಯೆಯಂತಹ ಘಟನೆಗಳ ತಡೆಗೆ ವಿಶೇಷ ಕಾನೂನು ರಚನೆ ಬಗ್ಗೆ ವಿಧಾನ ಮಂಡಲದ ಮುಂದಿನ ಅಧಿವೇಶನದಲ್ಲಿ ಚರ್ಚಿಸಿ, ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

## ನಟ ಯಶ್ ತಾಯಿ ಮನೆ ಮುಂದಿನ ಕಾಂಪೌಂಡ್ ತೆರವು

» ಮೊದಲನೇ ಪುಟದಿಂದ

ಸಮೇತ ಬಂದಿದ್ದ ದೇವರಾಜು ಕೋರ್ಟ್ ಆದೇಶ ಪ್ರತಿ ಕೈಯಲ್ಲಿ ಹಿಡಿದುಕೊಂಡು ನಿಂತಿದ್ದರು. ಕನ್ನಡ ಚಿತ್ರರಂಗದ ಖ್ಯಾತ ನಟನ ಮನೆಯ ವಿಚಾರವೆಂಬ ಕಾರಣಕ್ಕೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿ ಕುತೂಹಲದಿಂದ ವೀಕ್ಷಿಸಿದರು. ಅದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಪುಷ್ಪಾ ಅರುಣ್‌ಕುಮಾರ್ ಪರ ವಕೀಲ ಸಂಜಯ್ ಹಾಗು ಬೆಂಬಲಿಗರು ಸ್ಥಳದಲ್ಲಿ ಜಮಾಯಿಸಿ ನಾಮಫಲಕ ತೆರವುಗೊಳಿಸಲು ಮುಂದಾದರು. ಈ ವೇಳೆ ಎರಡು ಗುಂಪುಗಳ ನಡುವೆ ಜಟಾಪಟಿ ನಡೆಯಿತು.

ನ್ಯಾಯಾಲಯ ಆದೇಶದಂತೆ ನಾಮಫಲಕ ಹಾಕಲಾಗಿದೆ. ಏಕೆ ಬೋರ್ಡ್ ತೆರವು ಮಾಡುತ್ತಿದ್ದಿರಾ ಎಂದು ದೇವರಾಜು ಕಡೆಯವರು ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಜಿಪಿಎ ಹೋಲ್ಡರ್ ದೇವರಾಜು ಹಾಗು ಯಶ್ ತಾಯಿ ಕಡೆಯವರ ನಡುವೆ ತೀವ್ರ ವಾಗ್ವಾದ ನಡೆಯಿತು. ಕೆಲ ಸಮಯದ ಬಳಿಕ ದೇವರಾಜು ಅವರು ಕಾಂಪೌಂಡ್ ತೆರವುಗೊಳಿಸಿದ ಜಾಗಕ್ಕೆ ಸಿಮೆಂಟ್ ಕಂಬ, ತಂತಿ ಬೇಲಿ ಅಳವಡಿಸಿ ಸಂಪೂರ್ಣ ಜಾಗವನ್ನು ತಮ್ಮ ಸುಪರ್ದಿಗೆ ಪಡೆದರು.

ಪುಷ್ಪಾ ಅವರ ಪರ ವಕೀಲ ಸಂಜಯ್ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಪೌಂಡ್‌ಗೆ ಸಂಬಂಧಿಸಿದಂತೆ ನ್ಯಾಯಾಲಯ ಯಾವ ತೀರ್ಪು ನೀಡಿಲ್ಲ. ಅವರು ದಾಖಲಿಸಿರುವ ಪ್ರಕರಣವೇ ಬೇರೆ, ತೆರವುಗೊಳಿಸಿರುವ ಪ್ರಕರಣವೇ ಬೇರೆ. ನಮ್ಮ ಕಕ್ಷಿದಾದರು ಎಲ್ಲಾ ದಾಖಲೆ ಪರಿಶೀಲನೆ ಮಾಡಿಯೇ ನಿವೇಶನ ಖರೀದಿಸಿದ್ದಾರೆ. ಈ ನಡೆಯ ವಿರುದ್ಧ ಆದೇಶದ ವಿರುದ್ಧ ನಾವು ಮೇಲ್ಮನವಿ ಸಲ್ಲಿಸುತ್ತೇವೆಂದರು.

ಕಾಂಪೌಂಡ್ ಒಡೆದಿರುವ ಬಗ್ಗೆಯೂ ಕಾನೂನು ಹೋರಾಟ ಮಾಡುತ್ತೇವೆ. ದುರುದ್ದೇಶದಿಂದ ಈ ರೀತಿ ಮಾಡಿದ್ದಾರೆ. ನ್ಯಾಯಾಲಯದ ದಿಕ್ಕು ತಪ್ಪಿಸಿರುವವರ ವಿರುದ್ಧ ಕಾನೂನು ಹೋರಾಟ ಮುಂದುವರಿಯಲಿದೆ ಎಂದು ಎಚ್ಚರಿಕೆ ನೀಡಿದರು.

## ಎಎಪಿ ನಾಯಕನ ಮೇಲೆ ಗುಂಡಿನ ದಾಳಿ : ಸಾವು

ಚಂಡೀಗಢ: ಪಂಜಾಬ್‌ನಲ್ಲಿ ನಡೆದ ಮದುವೆ ಸಮಾರಂಭದಲ್ಲಿ ಎಎಪಿ ನಾಯಕನ ಮೇಲೆ ಗುಂಡಿನ ದಾಳಿ ನಡೆದಿದ್ದು ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಆಮ್ ಆದ್ಮಿ ಪಕ್ಷದ ನಾಯಕ ಮತ್ತು ಗ್ರಾಮ ಸರಪಂಚ ಜರ್ನೈಲ್ ಸಿಂಗ್ ಅವರನ್ನು ಭಾನುವಾರ ಅಮೃತಸರದ ಮದುವೆ ಸ್ಥಳದಲ್ಲಿ ಅಪರಿಚಿತ ದುಷ್ಕರ್ಮಿಗಳು ಗುಂಡಿಕ್ಕಿ ಕೊಂದಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ.

## ಕವಿತೆಗಳ ವಿಮರ್ಶೆಯಾಗದೆ ಬರಹಗಾರರ ಕೌಶಲ ಗೌಣ

» ಮೊದಲನೇ ಪುಟದಿಂದ

ಹಳೆ ಬೇರು-ಹೊಸ ಚಿಗುರುಗಳನ್ನು ಒಟ್ಟಿಗೆ ಕರೆದೊಯ್ಯುವ ಕೇಂದ್ರ ಮನೆ-ಮನೆ ಕವಿಗೋಷ್ಠಿಯಾಗಿದೆ. ಹೊಸ ಲೇಖಕರಿಗೆ ಪ್ರೇರಕವಾಗಿ ತಮ್ಮ ಪ್ರತಿಭೆಯನ್ನು ಪ್ರಚುರಪಡಿಸಲು ಎಲ್ಲರೂ ಸಹಕರಿಸಬೇಕು. ಆ ಕೆಲಸವನ್ನು ಆಯೋಜಕರು ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆಂದು ಮೆಚ್ಚುಗೆ ಸೂಚಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವೂ ಕವಿ ಮನಸ್ಸಿನವರೇ ಆಗಿದ್ದು, ನಿಮ್ಮೊಂದಿಗೆ ಬೆರೆಯಬೇಕೆಂಬ ಉದ್ದೇಶದಿಂದ ನಮ್ಮ ಸಂಘದಲ್ಲಿ ಕಾರ್ಯಕ್ರಮ ಆಯೋಜಿಸಿದ್ದೇವೆಂದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ. ಆರ್.ಕೆಂಚೇಗೌಡ ಅಧ್ಯಕ್ಷತೆ ವಹಿಸಿದ್ದರು. ಮನೆ-ಮನೆ ಕವಿಗೋಷ್ಠಿ ಸಂಚಾಲಕಿ ಸುಕನ್ಯ ಮುಕುಂದ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಮಲಮ್ಮ ಅವರ ಕಾಲವೆಂಬ ಕನ್ನಡಿಯಲ್ಲಿ ಕೃತಿಯನ್ನು ಲೇಖಕ ಉಮೇಶ್ ಹೊಸಳ್ಳಿ ಪರಿಚಯ ಮಾಡಿಕೊಟ್ಟರು. ವೇದಿಕೆ ಕಾಯಕ್ರಮದ ಬಳಿಕ ಕವಿತೆ ವಾಚನ ನೆರವೇರಿತು.

ಪತ್ರಕರ್ತರ ಸಂಘದ ಮಾಜಿ ಜಿಲ್ಲಾಧ್ಯಕ್ಷ ರವಿ ನಾಕಲಗೂಡು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಉದಯರವಿ, ಪತ್ರಕರ್ತರಾದ ಲೀಲಾವತಿ, ಚಲಂ, ಬಿ.ಆರ್.ಬೊಮ್ಮೇಗೌಡ ಹಾಗು ಮನೆ-ಮನೆ ಕವಿಗೋಷ್ಠಿ ಸದಸ್ಯರು ಹಾಜರಿದ್ದರು.

## ಮನರೇಗಾ ಭ್ರಷ್ಟಾಚಾರದ ಕೂಪ

» ಮೊದಲನೇ ಪುಟದಿಂದ

### ಗಾಂಧಿ ಕನ್ನಡಕ ಪ್ರಚಾರಕ್ಕೆ ಮಾತ್ರ

ಕಳೆದ 11 ವರ್ಷಗಳಿಂದ ಮಹಾತ್ಮ ಗಾಂಧಿಜಿ ಅವರ ಕನ್ನಡಕವನ್ನು ಪ್ರಚಾರಕ್ಕಾಗಿ ಬಳಕೆ ಮಾಡಿಕೊಳ್ಳಲಾಗಿದೆ. ಆದರೆ, ಅವರ ತತ್ವಾದರ್ಶಗಳನ್ನು ನಿರ್ಲಕ್ಷಿಸಲಾಗಿದೆ. ಅಂತೆಯೇ ಬಿಜೆಪಿಯು ರಾಮನ ಹೆಸರಿನಲ್ಲಿ ಅಧಿಕಾರಕ್ಕೇರಿತು. ಆತನ ತತ್ವಾದರ್ಶಗಳನ್ನು ಮರೆಯಿತು ಎಂದು ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಆಕ್ರೋಶ ವ್ಯಕ್ತಪಡಿಸಿದರು.

ಭುವನೇಶ್ವರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನರೇಗಾ ಬದಲಿಗೆ ಜಿ ರಾಮ್ ಜಿ ಯೋಜನೆಯನ್ನು ತಂದು ಸುಮಾರು 50 ಕೋಟಿ ಬಡವರ ಜೀವನೋಪಾಯವನ್ನು ಕಿತ್ತುಕೊಳ್ಳಲಾಗಿದೆ. ನರೇಗಾವು ಬೇಡಿಕೆ ಕೇಂದ್ರಿತ ವ್ಯವಸ್ಥೆಯಾಗಿತ್ತು. ಕಾರ್ಮಿಕರು ತಮಗೆ ಕೆಲಸ ನೀಡಿ ಎಂದು ಪಂಚಾಯಿತಿಗಳನ್ನು ಆಗ್ರಹಿಸಬಹುದಿತ್ತು. ಕೆಲವು ದಿನಗಳ ಒಳಗಾಗಿ ಕೆಲಸ ನೀಡದಿದ್ದಲ್ಲಿ ವೇತನವನ್ನು ಪಾವತಿ ಮಾಡಬೇಕಿತ್ತು. ಹೊಸ ಕಾಯ್ದೆಯಲ್ಲಿ ಎಲ್ಲಾ ಕೆಲಸಗಳನ್ನೂ ದೆಹಲಿಯಿಂದಲೇ ನಿರ್ಧರಿಸಬೇಕೆಂದು ಪ್ರಧಾನಿ ಮೋದಿ ಅವರು ನಿಶ್ಚಯಿಸಿದ್ದಾರೆಂದರು.

ನರೇಗಾವು ಸಂಪೂರ್ಣ ಕೇಂದ್ರ ಸರ್ಕಾರ ಅನುದಾನದಲ್ಲಿ ನಡೆಯುತ್ತಿತ್ತು. ಈಗ ರಾಜ್ಯಗಳು ಶೇ. 40ರಷ್ಟು ಹಣವನ್ನು ಭರಿಸಬೇಕಾಗಿದೆ. ರಾಜ್ಯ ಸರ್ಕಾರವೊಂದು ಇಷ್ಟೊಂದು ಹಣವನ್ನು ಮೀಸಲಿಡಲು ಸಾಧ್ಯವಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಅಲ್ಲಿಗೆ ಬಡವರಿಗೆ ನೀಡಲಾಗುವ ಕೆಲಸಗಳು ತಾನಾಗಿಯೇ ಕಡಿತವಾಗಲಿವೆ ಎಂಬುದೇ ಈ ಯೋಜನೆ ಹಿಂದಿನ ವಿಚಾರವೆಂದು ದೂರಿದರು.

## ಟ್ರಂಪ್‌ಗೆ ಸಾಧ್ಯವಾಗಿದ್ದು, ಮೋದಿಗೆ ಏಕೆ ಸಾಧ್ಯವಿಲ್ಲ : ಓವೈಸಿ

• ಪ್ರಜೋದಯ ವರದಿ



**ನವದೆಹಲಿ :** ಆಲ್ ಇಂಡಿಯಾ ಮಜ್ಲಿಸ್-ಎ-ಇತ್ತೆಹಾದುಲ್ ಮುಸ್ಲಿಮೀನ್ (ಎಐಎಂಐಎಂ) ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿದರು.

ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವೆನೆಜುವೆಲಾದ ಅಧ್ಯಕ್ಷ ನಿಕೋಲಸ್ ಮಡುರೊ ಅವರನ್ನು ಸೆರೆಹಿಡಿಯಲು ಸಾಧ್ಯವಾದರೆ, 26/11 ಮುಂಬೈ ಭಯೋತ್ಪಾದಕ ದಾಳಿಯ ಮಾಸ್ಟರ್ ಮೈಂಡ್ ಮಸೂದ್ ಅಜರ್ ನನ್ನು ಪಾಕಿಸ್ತಾನದಿಂದ ಸೆರೆಹಿಡಿದು ತರುವುದು ಪ್ರಧಾನಿ ಮೋದಿಗೆ ಅಸಾಧ್ಯವೇ ಎಂದು ಪ್ರಶ್ನಿಸಿದರು.

ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸೈನ್ಯವು ವೆನೆಜುವೆಲಾದ ಅಧ್ಯಕ್ಷ ನಿಕೋಲಸ್ ಮಡುರೊ ಅವರನ್ನು ಸೆರೆಹಿಡಿದು ಅವರ ದೇಶದಿಂದ ಅಮೇರಿಕಾಕ್ಕೆ ಕರೆದೊಯ್ದಿದೆ ಎಂದು ನಾನು ಕೇಳಿದೆ. ಡೊನಾಲ್ಡ್ ಟ್ರಂಪ್ ವೆನೆಜುವೆಲಾದ ಅಧ್ಯಕ್ಷ ನಿಕೋಲಸ್ ಮಡುರೊ ಅವರನ್ನು ಅವರ ದೇಶದಿಂದಲೇ ಅಪಹರಿಸಲು ಸಾಧ್ಯವಾದರೆ, ಪ್ರಧಾನಿ ಮೋದಿಗೆ ಪಾಕಿಸ್ತಾನಕ್ಕೆ ಸೇನೆ ನುಗ್ಗಿಸಿ 26/11 ಭಯೋತ್ಪಾದಕ ದಾಳಿಯ ಮಾಸ್ಟರ್ ಮೈಂಡ್ ಅನ್ನು ಭಾರತಕ್ಕೆ ಸೆರೆ ಹಿಡಿದು ಕರೆತರಬಹುದು. ಭಯೋತ್ಪಾದನೆಯ ವಿರುದ್ಧ ಕೇವಲ ಹೇಳಿಕೆಗಳಲ್ಲ, ಕಾಂಕ್ರೀಟ್ ಕ್ರಮ ಅಗತ್ಯ ಎಂದರು.

ಇದೆಲ್ಲವೂ ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಒಂದು ದೇಶದ ಅಧ್ಯಕ್ಷರನ್ನು ಈ ರೀತಿ ಬಂಧಿಸುವುದು ಸರಿಯೇ ಎಂಬ ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಈ ಘಟನೆ ಭಾರತದಲ್ಲಿ ಕೋಲಾಹಲಕ್ಕೆ ಕಾರಣವಾಗಿದೆ. ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಸಾರ್ವಜನಿಕ ರ್‍ಯಾಲಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ಪ್ರಧಾನಿ ಮೋದಿ ಅವರನ್ನು ಒತ್ತಾಯಿಸಿದರು.

ಪ್ರಧಾನಿಗೆ 56 ಇಂಚಿನ ಎದೆಗಾರಿಕೆ ಇದ್ದರೆ, ಮಸೂದ್ ಅಜರ್ ಮತ್ತು ಲಷ್ಕರ್-ಎ-ತೈಬಾದಂತಹ ಸಂಘಟನೆಗಳ ನಾಯಕರನ್ನು ಭಾರತಕ್ಕೆ ಕರೆತರಬೇಕೆಂದು ಎಐಎಂಐಎಂ ಮುಖ್ಯಸ್ಥರು ವ್ಯಂಗ್ಯವಾಡಿದರು. ಅವರ ಹೇಳಿಕೆ ದೇಶದ ರಾಜಕೀಯದಲ್ಲಿ ಹೊಸ ಚರ್ಚೆಯನ್ನು ಹುಟ್ಟುಹಾಕಿದೆ. ಬೆಂಬಲಿಗರು ಇದನ್ನು ಸರ್ಕಾರದಿಂದ ಉತ್ತರದಾಯಿತ್ವದ ಬೇಡಿಕೆ ಎಂದು ಕರೆಯುತ್ತಿದ್ದರೆ, ವಿರೋಧಿಗಳು ಇದನ್ನು ಬೇಜವಾಬ್ದಾರಿಯುತ ಹೋಲಿಕೆ ಎಂದು ಕರೆಯುತ್ತಿದ್ದಾರೆ.

2008ರಲ್ಲಿ ಮುಂಬೈ ದಾಳಿ ನಡೆದಿತ್ತು. ಪಾಕಿಸ್ತಾನದ ಲಷ್ಕರ್-ಎ-ತೈಬಾದ ಹತ್ತು ಭಯೋತ್ಪಾದಕರು ನಗರದಾದ್ಯಂತ ಏಕಕಾಲದಲ್ಲಿ 12 ಸ್ಥಳಗಳ ಮೇಲೆ ದಾಳಿ ಮಾಡಿದರು. ಈ ಭಯೋತ್ಪಾದಕ ದಾಳಿಯಲ್ಲಿ 170 ಜನರು ಸಾವನ್ನಪ್ಪಿದರು, 300 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

## ಅಂಗವಿಕಲರಿಗೆ ಸರ್ಕಾರದ ಸೌಲಭ್ಯ ತಲುಪಲಿ

» ಮೊದಲನೇ ಪುಟದಿಂದ

ಬಾರದೆಂಬ ಉದ್ದೇಶದಿಂದ ನಮ್ಮ ಸಿಬ್ಬಂದಿ ಪ್ರತಿಯೊಂದು ಮನೆಗೂ ಭೇಟಿ ನೀಡಿ ಫಲಾನುಭವಿಗಳನ್ನು ಗುರುತಿಸಿ ಸೌಲಭ್ಯ ಸಿಗುವಂತೆ ಎಚ್ಚರಿಕೆ ವಹಿಸಲಾಗಿದೆ. ಅಂಗವಿಕಲರ ಅಭಿವೃದ್ಧಿ ಹಾಗು ಅವಶ್ಯಕತೆಗಾಗಿ ಜಿಲ್ಲೆ, ತಾಲ್ಲೂಕು ಮತ್ತು ಪ್ರತಿ ಗ್ರಾಮ ಪಂಚಾಯಿತಿಗಳಲ್ಲೂ ಸಿಬ್ಬಂದಿ ಕೆಲಸ ಮಾಡುತ್ತಾರೆ. ಅವರಿಗೆ ಅಂಗವಿಕರು ತಮ್ಮ ಅರ್ಜಿ ಕೊಟ್ಟರೆ ಕೆಲಸಗಳನ್ನು ಮಾಡಿ ಕೊಡಲಿದ್ದಾರೆಂದರು.

ಪುರಸಭೆ ಅಧ್ಯಕ್ಷೆ ಉಷಾ ಸತೀಶ್, ಕನ್ನಡ ಸಾಹಿತ್ಯ ಪರಿಷರ್ ತಾಲ್ಲೂಕು ಅಧ್ಯಕ್ಷ ಮಂಜೇಗೌಡ, ಶಿಕ್ಷಕ ತಿಮ್ಮೇಶ್, ದಿವ್ಯಾಂಗ ಚೇತನರ ಗೆಳೆಯರ ಬಳಗದ ಅಧ್ಯಕ್ಷ ಪುರುಷೋತ್ತಮ್, ಕಾರ್ಯದರ್ಶಿ ಗಿರೀಶ್, ತಾಹೀರಾ, ಮ. ಶಿವಮೂರ್ತಿ, ಸಾಹಿತಿ ಮಧುಮಾಲತಿ, ರವೀಂದ್ರ, ರಾಜಶೇಖರಪ್ಪ, ಕುಮಾರಸ್ವಾಮಿ ಇತರರಿದ್ದರು.

## ಧಾರ್ಮಿಕ ಕೇಂದ್ರಗಳು ಸಹಬಾಳ್ವೆಯ ತಾಣ: ಕೋಡಿ

» ಮೊದಲನೇ ಪುಟದಿಂದ

ಆಗಮಿಸಿರುವುದು ನಮ್ಮ ಸಂಸ್ಕೃತಿಯ ವೈಶಿಷ್ಟ್ಯ. ಧರ್ಮವು ಮನುಷ್ಯರನ್ನು ವಿಭಜಿಸುವುದಕ್ಕಲ್ಲ, ಒಗ್ಗೂಡಿಸುವುದಕ್ಕಿದೆ ಎಂಬುದನ್ನು ಇಂತಹ ಕಾರ್ಯಕ್ರಮಗಳು ಸಾರುತ್ತವೆಂದರು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಯುವಕರು ಮತ್ತು ವಿದ್ಯಾರ್ಥಿಗಳು ಇಂತಹ ಭಾವೈಕ್ಯತಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಅಗತ್ಯ. ಧರ್ಮದ ಹೆಸರಿನಲ್ಲಿ ದ್ವೇಷ ಬೀಜ ಬಿತ್ತುವ ಪ್ರಯತ್ನಗಳಿಗೆ ನಾವು ಒಗ್ಗಟ್ಟಿನಿಂದ ಉತ್ತರ ನೀಡಬೇಕು. ಮಜ್ಜಿದ್ ಅಕ್ಸಾ ಉದ್ಘಾಟನೆ ಶಾಂತಿ, ಸಹಬಾಳ್ವೆ ಮತ್ತು ಸಂವಿಧಾನಾತ್ಮಕ ಮೌಲ್ಯಗಳ ಪ್ರತೀಕವಾಗಿದೆ ಎಂದು ಹೇಳಿದರು.

ಅರಸೀಕೆರೆ ನಗರಸಭೆ ಮಾಜಿ ಅಧ್ಯಕ್ಷ ಸಮೀವುಲ್ಲಾ ಅವರು ಮಾತನಾಡಿ, ಮಸೀದಿ ಕೇವಲ ನಮಾಜಿನ ಸ್ಥಳವಲ್ಲ. ಅದು ಸಮಾಜ ಸೇವೆ, ಸಹಾನುಭೂತಿ ಮತ್ತು ಸೌಹಾರ್ದತೆಯ ಕೇಂದ್ರವಾಗಬೇಕು. ಎಲ್ಲಾ ಧರ್ಮದವರು ಮಸೀದಿ ದರ್ಶನ ಮಾಡಿರುವುದು ಪರಸ್ಪರ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿದೆ. ಇಂತಹ ಭಾವೈಕ್ಯತೆ ಅರಸೀಕೆರೆಯ ಹೆಮ್ಮೆ ಎಂದರು. ಗ್ರಾಮದ ಹಿರಿಯ ಕರೀಂ ಸಾಬ್ ಅವರು ಮಾತನಾಡಿ, ಮಸೀದಿ ಸದಾ ಶಾಂತಿ, ಪ್ರೀತಿ ಮತ್ತು ಮಾನವೀಯತೆಯ ಸಂದೇಶವನ್ನು ಸಾರಲಿದೆ. ಎಲ್ಲರ ಸಹಕಾರದಿಂದ ಈ ಭಾವೈಕ್ಯತೆಯನ್ನು ಮುಂದುವರಿಸುತ್ತೇವೆಂದರು. ಮಸೀದಿ ಅಧ್ಯಕ್ಷ ಮೊಹಮ್ಮದ್ ಅತಾವುಲ್ಲಾ, ಕಾರ್ಯದರ್ಶಿ ಮುಬಾರಕ್ ಪಾಷ, ಜಂಟಿ ಕಾರ್ಯದರ್ಶಿ ನವಾಸ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಶಿವಮೂರ್ತಿ, ಮಾಜಿ ಸದಸ್ಯ ಧರ್ಮಶೇಖರ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಿಳಿಚೌಡಯ್ಯ, ಅಬ್ದುಲ್ ಹಾದಿ, ಖಡಾಕಡಿ ಪೀರ್ ಸಾಬ್ ಜಮಾಲುದ್ದೀನ್ ಇತರರಿದ್ದರು.

## ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಸಲಹೆ

» ಮೊದಲನೇ ಪುಟದಿಂದ

ಉತ್ತಮ ಶಿಕ್ಷಣ ನೀಡುವುದು ನಮ್ಮ ಗುರಿಯಾಗಿದೆ. ಎಲ್ ಕೆಜಿ, ಯುಕೆಜಿಯಿಂದ ಪದವಿ ವರೆಗೆ ಹಾಗು ಇಂಜಿನೀಯರಿಂಗ್, ಎಂಸಿಎ, ಎಂಬಿಎ, ಎಲ್ ಎಲ್‌ಬಿ ಕಾಲೇಜುಗಳ ಮೂಲಕ ಶಿಕ್ಷಣ ನೀಡಲಾಗುತ್ತಿದೆ ಎಂದರು.

ಬೆಂಗಳೂರಿನ ಗ್ಲೋಬಲ್ ತಾಂತ್ರಿಕ ತಜ್ಞ ಕೃಷ್ಣಮೂರ್ತಿ ಸುಬ್ಬರಾವ್ ಅವರು ಮಾತನಾಡಿ, ಮೌಲ್ಯಗಳಿಗೆ ನಾವು ಆದ್ಯತೆ ನೀಡಿದರೆ ಯಶಸ್ಸು ಕಾಣಲು ಸಾಧ್ಯವೆಂದರು. ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಖಜಾಂಚಿ ಹೆಚ್.ಡಿ.ಪಾರ್ಶನಾಥ್, ಹಿಪ್ಪೋ ಕ್ಯಾಂಪಸ್ ಶಾಲಾ ಉಪಾಧ್ಯಕ್ಷ ಬಿ.ಆರ್. ರಾಜಶೇಖರ್, ನಿರ್ದೇಶಕ ಶಾಂತಿಗ್ರಾಮ ಶಂಕರ್, ಶಾಲೆಯ ಮುಖ್ಯಸ್ಥ ಮಹೇಂದ್ರ, ಶಾಲಾ ಕಾರ್ಯನಿರ್ವಣಾಧಿಕಾರಿ ಉಮೇಶ್ ಮಲ್ಹೋತ್ರ, ಲಲಿತಾ ರೆಡ್ಡಿ, ಹೇಮಲತಾ ಮತ್ತಿತರರಿದ್ದರು.

## ವ್ಯಕ್ತಿಯ ಖಾತೆಯಿಂದ ಹಣ ವಂಚನೆ

• ಪ್ರಜೋದಯ ವರದಿ

**ಹಾಸನ:** ಮೊಬೈಲ್ ಹ್ಯಾಕ್ ಮಾಡಿ ಬ್ಯಾಂಕ್ ಖಾತೆಯಿಂದ 1 ಲ.ರೂ. ಎಗರಿಸಿರುವ ಘಟನೆ ಗೊರೂರಿನಲ್ಲಿ ನಡೆದಿದೆ. ಶ್ರೀಧರ್ ಎಂಬುವವರ ಖಾತೆಯಿಂದ 2025ರ ಮೇ 20 ರಂದು 49,995 ರೂ.ನಂತೆ ಎರಡು ಬಾರಿ ಹಣ ಕಡಿತಗೊಂಡಿದೆ. ಈ ಬಗ್ಗೆ ಗೊರೂರಿನ ಯೂನಿಯನ್ ಬ್ಯಾಂಕ್‌ಗೆ ಹೋಗಿ ವಿಚಾರಿಸಿದಾಗ ಮಹಾ ವೀರ ಏಜೆನ್ಸಿಯ ಖಾತೆ ಸಂಖ್ಯೆ 60477096430 ಹಜಿಮ್ ಮೀರ್ ಎಂಬುವವರ ಖಾತೆಗೆ ವರ್ಗಾವಣೆ ಯಾಗಿರುವುದು ದೃಢಪಟ್ಟಿದೆ. ಶ್ರೀಧರ್ ಅವರು ಜ.1 ರಂದು ಗೊರೂರು ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## 500 ದ್ವಿಚಕ್ರ ವಾಹನಗಳು ಭಸ್ಮ

• ಪ್ರಜೋದಯ ವರದಿ

**ತ್ರಿಶೂರ್ :** ಕೇರಳದ ತ್ರಿಶೂರ್ ರೈಲ್ವೆ ನಿಲ್ದಾಣದ ಪಾರ್ಕಿಂಗ್ ಪ್ರದೇಶದಲ್ಲಿ ಭೀಕರ ಅಗ್ನಿ ಅವಘಡ ಸಂಭವಿಸಿದ್ದು, ಬೆಂಕಿಯ ಕೆನ್ನಾಲಿಗೆಗೆ ಪಾರ್ಕಿಂಗ್ ಪ್ರದೇಶದಲ್ಲಿದ್ದ ಸುಮಾರು 500 ದ್ವಿಚಕ್ರ ವಾಹನಗಳು ಸುಟ್ಟು ಭಸ್ಮವಾಗಿವೆ.


ಭಾನುವಾರ ಇಲ್ಲಿನ ರೈಲ್ವೆ ನಿಲ್ದಾಣದ ಪಾರ್ಕಿಂಗ್ ಪ್ರದೇಶದಲ್ಲಿ ಸಂಭವಿಸಿದ ಬೆಂಕಿಯ ನಂತರ ಸುಮಾರು 500 ದ್ವಿಚಕ್ರ ವಾಹನಗಳು ಸುಟ್ಟು ಭಸ್ಮವಾಗಿವೆ ಎಂದು ಅಗ್ನಿಶಾಮಕ ಮತ್ತು ರಕ್ಷಣಾ ಸೇವಾ ಅಧಿಕಾರಿಗಳು ತಿಳಿಸಿದ್ದಾರೆ.

ಬೆಳಿಗ್ಗೆ 6.20 ರ ಸುಮಾರಿಗೆ ಪೇಯ್ಡ್-ಪಾರ್ಕಿಂಗ್ ಶೆಡ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಬೆಳಿಗ್ಗೆ 6.40 ರ ಸುಮಾರಿಗೆ ತುರ್ತು ಕರೆ ಬಂದಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಕವರ್‌ನೊಂದಿಗೆ ನಿಲ್ಲಿಸಲಾಗಿದ್ದ ದ್ವಿಚಕ್ರ ವಾಹನದ ಮೇಲೆ ಬಿದ್ದ ವಿದ್ಯುತ್ ತಂತಿಯಿಂದ ಬಂದ ಕಿಡಿ ಬೆಂಕಿಗೆ ಕಾರಣ ಎಂದು ಶಂಕಿಸಲಾಗಿದೆ. ಶೆಡ್‌ನಲ್ಲಿ ಸುಮಾರು 500 ದ್ವಿಚಕ್ರ ವಾಹನಗಳು ನಿಂತಿದ್ದವು ಮತ್ತು ಅವುಗಳಲ್ಲಿ ಹೆಚ್ಚಿನವು ಸುಟ್ಟು ಭಸ್ಮವಾಗಿವೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

ವಿಚಾರ ತಿಳಿದಕೂಡಲೇ ಐದು ಅಗ್ನಿಶಾಮಕ ದಳಗಳನ್ನು ನಿಯೋಜಿಸಲಾಯಿತು ಮತ್ತು ಬೆಳಿಗ್ಗೆ 7.45 ರ ಸುಮಾರಿಗೆ ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಯಿತು. ಬೆಂಕಿ ರೈಲ್ವೆ ನಿಲ್ದಾಣದ ಪ್ಲಾಟ್‌ಫಾರ್ಮ್‌ಗಳಿಗೆ ಹರಡದಂತೆ ಮತ್ತು ಹೆಚ್ಚಿನ ಹಾನಿಯಾಗದಂತೆ ತಡೆಯಲು ಎಲ್ಲಾ ಕ್ರಮ ತೆಗೆದುಕೊಳ್ಳಲಾಗಿದೆ.

## ಸಾಲು ಮರದ ತಿಮ್ಮಕ್ಕನವರಂತೆ ಗಿಡಗಳನ್ನು ನೆಟ್ಟು ಬೆಳೆಸಿ, ಪರಿಸರ ಉಳಿಸಿ : ಸಿದ್ದರಾಮಯ್ಯ

• ಪ್ರಜೋದಯ ವರದಿ



**ಬೆಂಗಳೂರು :** ಮುಖ್ಯಮಂತ್ರಿಯಾಗಿ 8ನೇ ಬಾರಿಗೆ ಚಿತ್ರ ಸಂತೆಯಲ್ಲಿ ಭಾಗವಹಿಸುತ್ತಿದ್ದೇನೆ ಎನ್ನುವುದು ಖುಷಿಯ ವಿಚಾರ. ಕಲಾವಿದರನ್ನು ಪ್ರೋತ್ಸಾಹಿಸುವುದು, ಅವರ ಚಿತ್ರಗಳ ಪ್ರದರ್ಶನ ಹಾಗೂ ಅವುಗಳ ಮಾರಾಟಕ್ಕೆ ವೇದಿಕೆ ಸೃಷ್ಟಿ ಮಾಡುವ ಕೆಲಸವನ್ನು ಚಿತ್ರಕಲಾ ಪರಿಷತ್ತು ಅರವತ್ತು ವರ್ಷಗಳಿಂದ ಮಾಡುತ್ತಾ ಬಂದಿದೆ. ಚಿತ್ರಸಂತೆ ತನ್ನ 23ನೇ ವರ್ಷಕ್ಕೆ ಕಾಲಿಟ್ಟಿರುವುದು ಸಂತಸದ ಸಂಗತಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದಾರೆ.

ಭಾನುವಾರ ಬೆಂಗಳೂರಿನ ಕರ್ನಾಟಕ ಚಿತ್ರ ಕಲಾ ಪರಿಷತ್ ಆವರಣದಲ್ಲಿ ನಡೆದ 23ನೇ ಚಿತ್ರಸಂತೆ ಯಲ್ಲಿ ಮಾತನಾಡಿದ ಅವರು, ಸುಮಾರು 22 ರಾಜ್ಯಗಳು, ನಾಲ್ಕು ಕೇಂದ್ರಾಡಳಿತ ಪ್ರದೇಶಗಳ ಕಲಾವಿದರು ಭಾಗವಹಿಸಿದ್ದಾರೆ. ಪ್ರತಿ ಜಿಲ್ಲೆಯಲ್ಲಿಯೂ ಸಾಧಕರ ವಸ್ತುಸಂಗ್ರಹಾಲಯಕ್ಕೆ ಬೇಡಿಕೆ ಇದ್ದು, ಸರ್ಕಾರ ಅದನ್ನು ಸಕಾರಾತ್ಮಕವಾಗಿ ಸ್ವೀಕಾರ ಮಾಡಲಿದೆ ಎಂದರು.

ಈ ಬಾರಿಯ ಚಿತ್ರಸಂತೆಯ ಧ್ಯೇಯ ವಾಕ್ಯ ಪರಿಸರಕ್ಕೆ ಸಮರ್ಪಿಸಲಾಗಿದೆ. ಪರಿಸರವನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಅದಕ್ಕಾಗಿ ಪರಿಸರದ ಬಗ್ಗೆ ಜ್ಞಾನ ಅಗತ್ಯ. ಈ ಕುರಿತು ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಬೆಂಗಳೂರು ಸೇರಿ ದೇಶದ ಅನೇಕ ರಾಜಧಾನಿಗಳಲ್ಲಿ ಪರಿಸರ ಮಾಲಿನ್ಯ ಹೆಚ್ಚಾಗಿದ್ದು, ದೆಹಲಿಯಲ್ಲಿ ಬದುಕಲು ಸಾಧ್ಯವಿಲ್ಲದ ವಾತಾವರಣ ನಿರ್ಮಾಣವಾಗುತ್ತಿದೆ. ಪರಿಸರದ ರಕ್ಷಣೆ ಇಂದಿನ ಅಗತ್ಯವಾಗಿದೆ ಎಂದರು.

ಪ್ರತಿ ವರ್ಷ ಮೂರರಿಂದ ಐದು ಕೋಟಿ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದ ಹಮ್ಮಿಕೊಳ್ಳಲಾಗಿದೆ. ಯಾವುದೇ ಪ್ರದೇಶದಲ್ಲಿ ಶೇ.30ರಷ್ಟು ಕಾಡು ಇರಬೇಕು. ನಮ್ಮಲ್ಲಿ ಶೇಕಡ 20ರಷ್ಟು ಅರಣ್ಯ ಪ್ರದೇಶವಿದೆ. ಇದನ್ನು ಹೆಚ್ಚು ಮಾಡಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುವುದು ಎಂದರು.

ಸಾಲು ಮರದ ತಿಮ್ಮಕ್ಕನವರಂತೆ ಸಾರ್ವಜನಿಕರು ಗಿಡಗಳನ್ನು ನೆಡಬೇಕು. ಮಕ್ಕಳನ್ನು ಸಾಕಿದಂತೆ ಗಿಡ ಮರಗಳನ್ನು ಅವರು ಸಾಕಿದ್ದ ಕಾರಣ ಹಲವು ಪ್ರಶಸ್ತಿಗಳು ದೊರೆಯಿತು. ಅವರ ಆತ್ಮಕ್ಕೆ ಶಾಂತಿ ದೊರಕಬೇಕಾದರೆ ನಾವೆಲ್ಲರೂ ಗಿಡ ಬೆಳೆಸುವ ಪ್ರಯತ್ನವನ್ನು ಮಾಡಬೇಕು. ಪರಿಸರ ರಕ್ಷಣೆಗಾಗಿ ಹೋರಾಟವನ್ನೇ ಕೈಗೊಂಡ ಅನೇಕರು ನಮ್ಮ ನಡುವೆಯೇ ಇದ್ದಾರೆ. ಗಿಡ ನೆಡಲು ಬಹಳ ಖರ್ಚು ಆಗುವುದಿಲ್ಲ. ಮನಸ್ಸು ಮಾಡಬೇಕಷ್ಟೆ. ಸರ್ಕಾರ ಕೂಡ ಈ ದಿಕ್ಕಿನಲ್ಲಿ ಹೆಚ್ಚಿನ ಆಸಕ್ತಿ ವಹಿಸಲಿದೆ ಎಂದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK